ಸಂಸ್ಥೆಯು ಪ್ರಯಾಣಿಕರಿಗೆ ಮೂಲಭೂತ ಅವಶ್ಯಕತೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲು ಪ್ರಥಮ ಆದ್ಯತೆ ನೀಡಿರುತ್ತದೆ. ಸಂಸ್ಥೆಯ ಮೂರು ಮುಖ್ಯ ನಿಲ್ದಾಣಗಳು ಸುಭಾಷ್‌ನಗರ (ಕೆಂಪೇಗೌಡ ಬಸ್ ನಿಲ್ದಾಣ), ಶಿವಾಜಿನಗರ ಹಾಗೂ ಕೃ.ರಾ.ಮಾರುಕಟ್ಟೆಗಳಲ್ಲಿರುತ್ತವೆ. ಇದರ ಜೊತೆಗೆ ನಗರದ ವಿವಿಧ ಭಾಗಗಳಲ್ಲಿ 40 ಮಧ್ಯಮ/ಸಣ್ಣ ಪ್ರಮಾಣದ ಬಸ್ ನಿಲ್ದಾಣಗಳನ್ನು ಹೊಂದಿದ್ದು, ಇವುಗಳ ಮೂಲಕ ನಗರದಾದ್ಯಂತ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಹಾಗೂ ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸುವ ಸಲುವಾಗಿ ಈಗಾಗಲೇ ಜಯನಗರ, ಕೆಂಗೇರಿ, ಬನ್ನೇರುಘಟ್ಟ, ಐ.ಟಿ.ಪಿ.ಎಲ್., ಶಾಂತಿನಗರ, ಕೋರಮಂಗಲ, ದೊಮ್ಮಲೂರು, ವಿಜಯನಗರ, ಯಶವಂತಪುರ ಮತ್ತು ಬನಶಂಕರಿ ಟಿ.ಟಿ.ಎಂ.ಸಿ.(ಸಂಚಾರ ಮತ್ತು ಸಾಗಾಣೆ ನಿರ್ವಹಣಾ ಕೇಂದ್ರ)ಗಳಲ್ಲಿ ಕಾರ್ಯಾಚರಣೆ ಮತ್ತು ಇನ್ನಿತರೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಕೈಗಾರಿಕಾ ಬಾಂಧವ್ಯ:

ವರದಿ ವರ್ಷದಲ್ಲಿ ಯಾವುದೇ ಮುಷ್ಕರಗಳು ನಡೆದಿರುವುದಿಲ್ಲ ಹಾಗೂ ಉತ್ತಮ ಕೈಗಾರಿಕಾ ಬಾಂಧವ್ಯವನ್ನು ಕಾಯ್ದುಕೊಳ್ಳಲಾಗಿದೆ.

ಸಂಸ್ಥೆಗೆ ದೊರೆತಿರುವ ಪಾರಿತೋಷಕಗಳು:

ಪ್ರಸಕ್ತ 2019–20ನೇ ಸಾಲಿನಲ್ಲಿ ಸಂಸ್ಥೆಯು ಈ ಕೆಳಕಂಡ ಪ್ರಶಸ್ತಿ/ಪಾರಿತೋಷಕಗಳನ್ನು ಪಡೆದಿರುತ್ತದೆ.

- ಪ್ರವಾಸ್ ಎಕ್ಸ್‌ಲೆನ್ಸಿ ಅವಾರ್ಡ್– "Intra City Bus"
- ಐಟಿ ಎಕ್ಸ್‌ಲೆನ್ಸ್ ಅವಾರ್ಡ್–"Vehicle Tracing System"

ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗಾಗಿ ಉಪಕ್ರಮಗಳು:

ರಾಜ್ಯದ ಪ್ರಯಾಣಿಕರ ಹೆಚ್ಚುತ್ತಿರುವ ಅವಶ್ಯಕತೆಗಳನ್ನು ತೃಪ್ತಿಕರವಾಗಿ ಪೂರೈಸುವ ಸಲುವಾಗಿ ಕರ್ನಾಟಕ ಸರ್ಕಾರವು "ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗಾಗಿ ಅನುಷ್ಠಾನಗೊಳಿಸಬೇಕಾದ ಹೊಸ ಉಪಕ್ರಮಗಳು" ಎಂಬ ಬಗ್ಗೆ ಶ್ವೇತಪತ್ರವನ್ನು ಹೊರಡಿಸಿದೆ. ಈ ಉಪಕ್ರಮಗಳು ಕೆಳಗಿನಂತಿವೆ.

- ದೋಷಗಳ ಪರಿಪೂರ್ಣ/ಪರಿಣಾಮಕಾರಿ ನಿರ್ವಹಣಾ ವ್ಯವಸ್ಥೆ
- ಚಾಲಕರ ಮೂಲಕ ವಾಹನಗಳ ದೋಷಗಳನ್ನು ದಾಖಲಿಸಲು ಮೊಬೈಲ್ ಅಪ್ಲಿಕೇಶನ್ ಬಳಕೆ
- ಅವಘಡಗಳನ್ನು ಶೂನ್ಯಕ್ಕೆ ತರುವುದು
- ಚತುರ ಸಾರಿಗೆ ವ್ಯವಸ್ಥೆ (ITS) ಯಿಂದ ಪಡೆಯಲಾದ ನೈಜ ಸಮಯದ ಕಾರ್ಯಾಚರಣೆಯ ಮಾಹಿತಿಯನ್ನು ಆಧರಿಸಿ ಅನುಸೂಚಿಗಳ ಪರಿಷ್ಕರಣೆ
- ಬಸ್‌ಗಳ ಸ್ವಚ್ಛತೆಗೆ ಆದ್ಯತೆ
- ನೌಕರರ ಕಾರ್ಯಕ್ಷಮತೆಯ ಮೌಲ್ಯಮಾಪನ
- ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗಾಗಿ ಉತ್ತಮ ಸಾರ್ವಜನಿಕ ಸಂಪರ್ಕ ಹೊಂದುವ ಬಗ್ಗೆ ಉಪಕ್ರಮ
- ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗಾಗಿ ಹೊಸ ತಂತ್ರಜ್ಞಾನ ಬಳಕೆಯ ಉಪಕ್ರಮ
- ವಾಯು ಮಾಲಿನ್ಯ ತಡೆ ವ್ಯವಸ್ಥೆಯ ಉಪಕ್ರಮ
- ರಸ್ತೆ ಸುರಕ್ಷತೆ ಕ್ರಮಗಳ ವ್ಯವಸ್ಥೆಯ ಉಪಕ್ರಮ
- ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವ ಉಪಕ್ರಮ

ಈ ಉಪಕ್ರಮಗಳು ತಂತ್ರಜ್ಞಾನದ ಏಳಿಗೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ನವೀನ ಮಾದರಿಯ ಆಡಳಿತ, ಜನರಲ್ಲಿ ಕ್ರಿಯಾತ್ಮಕತೆಯ ಹೆಚ್ಚಳ, ವಾಹನ ವಾಯು ಮಾಲಿನ್ಯ ತಡೆ ಹಾಗೂ ಸುಧಾರಿತ ರಸ್ತೆ ಸುರಕ್ಷತಾ ಕ್ರಮಗಳನ್ನು ಆಚರಣೆಗೆ ತರುವ ಬಗ್ಗೆ ಬೆಳಕು ಚೆಲ್ಲುತ್ತಿವೆ. ಸಂಸ್ಥೆಯು ನಗರ ಸಾರಿಗೆ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಮೇಲಿನ ಉಪಕ್ರಮಗಳನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತಿದೆ. ವಿವರಗಳು ಈ ಕೆಳಗಿನಂತಿವೆ.

ಉಪಕ್ರಮಗಳು–ಅನುಷ್ಠಾನದ ಮುಖ್ಯಾಂಶಗಳು:

ಅ. ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗಾಗಿ ಉತ್ತಮ ಸಾರ್ವಜನಿಕ ಸಂಪರ್ಕ ಹೊಂದುವ ಬಗ್ಗೆ ಉಪಕ್ರಮ:

- ಪ್ರಯಾಣಿಕರ ಕುಂದುಕೊರತೆಗಳ ನಿವಾರಣೆಗಾಗಿ ಅಧಿಕಾರಿ ಮತ್ತು ಅಧಿಕಾರೇತರ ಸದಸ್ಯರುಗಳನ್ನೊಳಗೊಂಡ ಪ್ರಯಾಣಿಕರ ಹಿತರಕ್ಷಣಾ ಕಾರ್ಯಪಡೆ (Commuter task Force) ಮತ್ತು ಪ್ರಯಾಣಿಕರ ಸಲಹಾ ಮತ್ತು ಸೌಕರ್ಯಗಳ ಸಮಿತಿ(Commuter Advisory and Facilitation Committee) ರಚಿಸಲಾಗಿದೆ.
- ಬಸ್ ನಿಲ್ದಾಣ, ಕೇಂದ್ರ ಕಛೇರಿ ಹಾಗೂ ನಿಯಂತ್ರಣಾ ಕೊಠಡಿಗಳಲ್ಲಿ ಸಹಾಯ ಕೇಂದ್ರಗಳ ಸ್ಥಾಪನೆಯಾಗಿರುತ್ತದೆ.
- ಮಾನವ ಸಂಪನ್ಮೂಲ ಅಭಿವೃದ್ಧಿ ಸಂಬಂಧಿತ ಸಾಕ್ಷ್ಯಚಿತ್ರ ತಯಾರಿಸಿ ಸಿಬ್ಬಂದಿ ತರಬೇತಿಗಾಗಿ ಬಳಸಿಕೊಳ್ಳಲಾಗಿದೆ.

- ಸಂಸ್ಥೆಯ ಎಲ್ಲಾ ವರ್ಗದ ಸಿಬ್ಬಂದಿಗಾಗಿ, ಪ್ರಮುಖವಾಗಿ ಚಾಲಕ, ನಿರ್ವಾಹಕರಿಗಾಗಿ ಸಂಸ್ಥೆಯು ಆಂತರಿಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.
- ಕರೆ ಕೇಂದ್ರವನ್ನು ಮೇಲ್ದರ್ಜೆಗೇರಿಸಿದ್ದು, ಸಹಾಯವಾಣಿ 1800 425 1663ಯು ಚಾಲ್ತಿಯಲ್ಲಿರುತ್ತದೆ
- ಬೆಂ.ಮ.ಸಾ.ಸಂಸ್ಥೆಯು ಸಾರ್ವಜನಿಕರ ಸಲಹೆ, ಕುಂದು ಕೊರತೆಗಳು ಮತ್ತು ದೂರುಗಳನ್ನು ಸ್ವೀಕರಿಸಿ ಅನುಸೂಚಿಗಳ ಆಚರಣೆಯನ್ನು ಉತ್ತಮಗೊಳಿಸುವ ಸಲುವಾಗಿ ಸಾರ್ವಜನಿಕ ದೂರುಗಳ ವಿಭಾಗವನ್ನು ಹೊಂದಿರುತ್ತದೆ.

ಆ. ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗಾಗಿ ಹೊಸ ತಂತ್ರಜ್ಞಾನ ಬಳಕೆಯ ಉಪಕ್ರಮ:

- ಸಂಸ್ಥೆಯ ಹಾಗೂ ಪ್ರಯಾಣಿಕರ ಒಳಿತಿಗಾಗಿ ಹಾಗೂ ಕಾರ್ಯಕ್ಷಮತೆಯ ಸುಧಾರಣೆಗಾಗಿ ಐ.ಟಿ.ಎಸ್‌ಯ ಅನುಷ್ಠಾನ
- ನೈಜ ಸಮಯದ conectivityಯನ್ನು ಹೊಂದಿರುವ ವೆಹಿಕಲ್ ಟ್ರಾಕ್ಯಿಂಗ್ ಯುನಿಟ್(VTU)
- ವಿದ್ಯುನ್ಮಾನ ಟಿಕೇಟ್ ವಿತರಣಾ ಯಂತ್ರದ (ETM) ಮೂಲಕ ಪ್ರಯಾಣಿಕ ಟಿಕೇಟ್ ವಿತರಣೆ
- ನಿಯಂತ್ರಣಾ ಕೇಂದ್ರ ಹಾಗೂ ಮಾಹಿತಿ ಕೇಂದ್ರದ ವ್ಯವಸ್ಥೆ
- ಘಟಕ ಮಟ್ಟದ ಚಟುವಟಿಕೆಗಳ ಸಂಯೋಜನೆಗಾಗಿ ಅಪ್ಲಿಕೇಶನ್‌ಗಳು(ಆ್ಯಪ್‌ಗಳು)
- ಚತುರ ಸಾರಿಗೆ ವ್ಯವಸ್ಥೆ (ITS)ಗೆ ಪೂರಕವಾದ ಯೋಜನೆ, ಸಿಸ್ಟಮ್ ಹೆಲ್ತ್ ಮತ್ತು ಸೇವೆಗಳ ಮಟ್ಟ ನಿಯಂತ್ರಣಾಕ್ಕಾಗಿ ತಂತ್ರಾಂಶಗಳ ಅಭಿವೃದ್ಧಿ
- ಸಂಸ್ಥೆಯ ನೂತನ ಜಾಲತಾಣ www.mybmtc.comಅನ್ನು ಅನಾವರಣಗೊಳಿಸಲಾಗಿದೆ. ಈ ಜಾಲತಾಣದ ಪ್ರಮುಖ ಅಂಶಗಳೆಂದರೆ ಸುತ್ತುವಳಿ ಯೋಜನೆ, ಮಾರ್ಗದ ಹುಡುಕುವಿಕೆ, ವೇಳಾಪಟ್ಟಿ, ದರಪಟ್ಟಿ, ಪಾಸುಗಳು, ವಾರ್ತೆ ಮತ್ತು ನವೀಕರಣ ಮುಂತಾದವುಗಳು ಆಗಿರುತ್ತವೆ.
- ಸಕಾಲ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.
- ರಜಾ ಮಂಜೂರಾತಿ ವ್ಯವಸ್ಥೆಯನ್ನು ಪಾರದರ್ಶಕಗೊಳಿಸುವ ಸಲುವಾಗಿ ಎಲ್ಲಾ ಘಟಕಗಳು ಮತ್ತು ಕಾರ್ಯಾಗಾರಗಳಲ್ಲಿ ರಜಾ ನಿರ್ವಹಣಾ ವ್ಯವಸ್ಥೆಯ ಕೀಯೋಸ್ಕ್‌ಗಳನ್ನು ಅಳವಡಿಸಲಾಗಿದೆ.
- ಆಡಳಿತ ವರ್ಗಕ್ಕೆ ದಿನಂಪ್ರತಿ ಘಟಕಗಳ ಸಾಧನೆಗಳನ್ನು ಪರಿಶೀಲಿಸಲು ಅನುವಾಗುವಂತೆ ಎಂ.ಐ.ಎಸ್. ಡ್ಯಾಶ್ ಬೋರ್ಡ್ ಮಾಡ್ಯುಲ್ ಅನುಷ್ಠಾನಗೊಳಿಸಲಾಗಿದೆ.
- ಪ್ರಮುಖ ಬಸ್ ನಿಲ್ದಾಣ ಮತ್ತು ಟಿ.ಟಿ.ಎಂ.ಸಿ.ಗಳಲ್ಲಿ ಪ್ರಯಾಣಿಕ ಮಾಹಿತಿ ಮಂಟಪಗಳನ್ನು ಅಳವಡಿಕೆ ಮಾಡಲಾಗಿದೆ.
- ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸುವ ಸಲುವಾಗಿ ಸಂಸ್ಥೆಯ ತಂತ್ರಾಂಶ ತಂತ್ರಜ್ಞರಿಂದ ಅಭಿವೃದ್ಧಿಪಡಿಸಲಾದ ತರಬೇತಿ ಮಾಹಿತಿ ವ್ಯವಸ್ಥೆ ಮಾಡಲಾಗಿದೆ.
- ಕೇಂದ್ರ ಕಛೇರಿ ಮತ್ತು ಕೇಂದ್ರೀಯ ಕಾರ್ಯಗಾರಗಳಲ್ಲಿ ಜೀವಮಾನಕ (ಬಯೋಮೆಟ್ರಿಕ್) ಉದ್ಯೋಗಿ ಹಾಜರಾತಿ ಮೇಲ್ವಿಚಾರಣಾ ವ್ಯವಸ್ಥೆಯನ್ನು ಅಳವಡಿಸಲಾಗಿದೆ.
- ವೆಬ್‌ಸೈಟ್‌ನಲ್ಲಿ ಬಸ್ ಮಾರ್ಗಗಳ ಬಗ್ಗೆ ಮಾಹಿತಿ ಮತ್ತು ವಿಚಾರಣೆಗೆ ಅವಕಾಶ ಕಲ್ಪಿಸಲಾಗಿದೆ.
- ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಪದ್ಧತಿ ಮೂಲಕ ಸಿಬ್ಬಂದಿಗೆ ವೇತನ ವಿತರಣೆ ಮಾಡಲಾಗುತ್ತಿದೆ.
- ವಿದ್ಯುನ್ಮಾನ ಟಿಕೆಟ್ ವಿತರಣಾ ಯಂತ್ರಗಳ ಮೂಲಕ ಚೇಟಿ ವಿತರಣೆ ಮಾಡಲಾಗುತ್ತಿದೆ.
- ಬಸ್‌ಗಳಲ್ಲಿ ವಿದ್ಯುನ್ಮಾನ ಪ್ರದರ್ಶಕಗಳ ಏರ್ಪಾಟು ಮತ್ತು ಗಮ್ಯ ಸ್ಥಾನಗಳ ಎಲ್‌ಇಡಿ ಫಲಕಗಳನ್ನು ಅಳವಡಿಸಲಾಗಿದೆ.
- ವಿದ್ಯಾರ್ಥಿ ಪಾಸು ಹಾಗೂ ಮಾಸಿಕ ಪಾಸುದಾರರ ಗುರುತು ಚೇಟಿಗಳಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮಾಡಲು ಕ್ರಮ ವಹಿಸಲಾಗುತ್ತಿದೆ.
- ಕಾಗದರಹಿತ ಆನ್ ಲೈನ್ ನೇಮಕಾತಿಗಾಗಿ www.bmtccareers.com ಜಾಲತಾಣದ ಕಾರ್ಯನಿರ್ವಹಣೆ ಮಾಡಲಾಗಿದೆ.

- ವಾಹನಗಳ ಸುಗಮ ಚಾಲನೆಗಾಗಿ ಏರ್ ಸಸ್ಪೆನ್ಷನ್ ಅಳವಡಿಕೆ ಮಾಡಲಾಗಿದೆ.
- ಜೆ.ಎನ್.ನರ್ಮ್ ಯೋಜನೆಯಡಿಯಲ್ಲಿ ಖರೀದಿಸಿರುವ ಬಸ್ಸುಗಳಲ್ಲಿ ವಾಯ್ಸ್ ಅನೌನ್ಸ್‌ಮೆಂಟ್ ವ್ಯವಸ್ಥೆಯನ್ನು ಒದಗಿಸಲಾಗಿದೆ.
- ಪ್ರಯಾಣಿಕರ ಸ್ನೇಹಿ Smart Phone Mobile Application ಅಭಿವೃದ್ದಿ ಪಡಿಸಲಾಗಿದೆ.

ಇ. ವಾಯು ಮಾಲಿನ್ಯ ತಡೆ ಉಪಕ್ರಮ:

- ಸಂಸ್ಥೆಯ 4 ಘಟಕಗಳಿಗೆ ಐ.ಎಸ್.ಒ.–14001 ಪ್ರಮಾಣ ಪತ್ರ ಪಡೆಯಲಾಗಿದೆ.
- ಬೆ.ಮ.ಸಾ.ಸಂಸ್ಥೆಯಲ್ಲಿ ಪರಿಸರ ಕೋಶದ ಕಾರ್ಯ ನಿರ್ವಹಣೆ ಮಾಡಲಾಗುತ್ತಿದೆ.
- ಪರಿಸರ ವಾಹಿನಿ ಬಸ್‌ಗಳ ಆಚರಣೆ ಮಾಡಲಾಗುತ್ತಿದೆ.
- ಪರಿಸರ ಮಾಲಿನ್ಯವನ್ನು ತಡೆಯಲು ಇರುವ ಮಾರ್ಗಸೂಚಿಗಳ ಅನುಷ್ಠಾನದ ಬಗ್ಗೆ ಕಟ್ಟುನಿಟ್ಟಾದ ತಪಾಸಣೆ
- ಘಟಕ ಮಟ್ಟದಲ್ಲಿ ಗಣಕೀಕೃತ ಹೊಗೆ ತಪಾಸಣಾ ವ್ಯವಸ್ಥೆ ಕಲ್ಪಿಸಲಾಗಿದೆ.
- ಘಟಕಗಳಲ್ಲಿ ನೀರು ಮರು ಶುದ್ಧೀಕರಣ ಘಟಕಗಳ ಸ್ಥಾಪನೆ ಮಾಡಲಾಗಿದೆ.
- ಘಟಕಗಳಲ್ಲಿ ಮಳೆ ನೀರಿನ ಕೊಯ್ಲು ಘಟಕಗಳ ಸ್ಥಾಪನೆ ಮಾಡಲಾಗಿದೆ.
- ಘಟಕಗಳಲ್ಲಿ ಸೌರದೀಪಗಳ ಅಳವಡಿಕೆ ಮಾಡಲಾಗಿದೆ.
- 1618 ಟಿ.ಸಿ. ಇಂಜಿನ್‌ಗಳನ್ನು ಅಳವಡಿಸಿದ ಟಾಟಾ ಬಸ್ಸುಗಳಲ್ಲಿ ಜೈವಿಕ ಇಂಧನವನ್ನು ಪರ್ಯಾಯ ಇಂಧನವಾಗಿ ಬಳಸಿ ಪ್ರಾಯೋಗಿಕ ಆಚರಣೆ ಮಾಡಲಾಗಿದೆ.
- ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಮೆ॥ಯುಟೋಪಿಯ ಪ್ರೈವೇಟ್ ಲಿ.ರವರು ಒದಗಿಸಿದ ವಿದ್ಯುತ್ ಚಾಲಿತ ಬಸ್ಸಿನ ಪ್ರಾಯೋಗಿಕ ಆಚರಣೆ ಮಾಡಲಾಗಿದೆ.
- ವಿದ್ಯುತ್ ಉತ್ಪಾದನೆಗಾಗಿ ಕಟ್ಟಡಗಳ ಮೇಲ್ಛಾವಣಿಯ ಮೇಲಿನ ಸೌರ ಫೋಟೋ ವೋಲ್ಟಾಯಿಕ್ ಸ್ಥಾವರಗಳ ಸ್ಥಾಪನೆಗಾಗಿ ಯೋಜನಾ ಪ್ರಸ್ತಾವನೆ ಸಲ್ಲಿಸಲಾಗಿದೆ.

ಈ. ರಸ್ತೆ ಸುರಕ್ಷತೆಯ ಕ್ರಮಗಳ ವ್ಯವಸ್ಥೆಯ ಉಪಕ್ರಮ:

- ಕಟ್ಟುನಿಟ್ಟಿನ, ಪಾರದರ್ಶಕ ಚಾಲಕರ ನೇಮಕಾತಿ ಪ್ರಕ್ರಿಯೆ
- ಘಟಕಗಳಲ್ಲಿ ಚಾಲಕರಿಗೆ ತರಬೇತಿ

ಉ. ಪರಿಣಾಮಕಾರಿ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವ ಉಪಕ್ರಮ:

- ರಾತ್ರಿ ಸೇವೆ ಅನುಸೂಚಿಗಳ ಆಚರಣೆ
- ಪ್ರಮುಖ ಮಾರ್ಗಗಳಲ್ಲಿ 834 ವೋಲ್ವೋ ಬಸ್ ಸೇವೆಗಳ ಆಚರಣೆ
- ಆರ್ಥಿಕ ದುರ್ಬಲ ವರ್ಗದವರ ಅನುಕೂಲಕ್ಕಾಗಿ ವಿಶೇಷವಾಗಿ ವಿನ್ಯಾಸಗೊಳಿಸಿದ 'ಅಟಲ್ ಸಾರಿಗೆ' ಸೇವೆಗಳ ಕಾರ್ಯಾಚರಣೆ.
- ಜೆ.ಎನ್.ನರ್ಮ್ ಯೋಜನೆಯಡಿಯಲ್ಲಿ ಸಾಮಾನ್ಯ ಮತ್ತು ವೋಲ್ವೋ ಎಂಬ 2 ಮಾದರಿ ಬಸ್ಸುಗಳನ್ನು ಒಳಗೊಂಡಂತೆ ವಿಶೇಷ ವಿನ್ಯಾಸ ಹೊಂದಿದ ಬಸ್ಸುಗಳ ಆಚರಣೆ
- ದಿಕ್ಕು ಸೂಚಿತ ಗ್ರಿಡ್ ಮಾರ್ಗ ಸೇವೆಗಳ ಆಚರಣೆ
- ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 106 ವಾಯುವಜ್ರ ಬಸ್ಸುಗಳ ಆಚರಣೆ
- ಮಿಡಿ ಬಸ್ಸುಗಳ ಆಚರಣೆಯೊಂದಿಗೆ ಮೆಟ್ರೋ ಫೀಡರ್ ಮತ್ತು ಚಕ್ರ ಸೇವೆಗಳನ್ನು ಆರಂಭಿಸಲಾಗಿದೆ.
- ಕರಾರಸಾನಿಗಮ ಮತ್ತು ಬೆಮಸಾಸಂಸ್ಥೆಯ ಬಸ್ಸುಗಳಲ್ಲಿ ಸಂಚರಿಸಲು ಅನುವಾಗುವಂತೆ 'ಸಂಗಮ' ಪಾಸುಗಳನ್ನು ಸಾರ್ವಜನಿಕ ಪ್ರಯಾಣಿಕರಿಗೆ ಒದಗಿಸಲಾಗಿದೆ.

- ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸಿ ವೈಯಕ್ತಿಕ ಸಾರಿಗೆ ವಾಹನಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಫೆಬ್ರವರಿ 2010 ರಿಂದ "ಬಸ್ ದಿನ" ಆಚರಣೆಯನ್ನು ಮಾಡಲಾಗುತ್ತಿದೆ. ಈ ಬಗ್ಗೆ ನಡೆಸಿದ ಆಂದೋಲನದಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದ್ದು ಇದರಿಂದಾಗಿ ವೈಯಕ್ತಿಕ ವಾಹನಗಳ ಸಂಚಾರ ಮತ್ತು ಮಾಲಿನ್ಯ ಮಟ್ಟಗಳಲ್ಲಿ ಇಳಿಮುಖ ಕಂಡುಬಂದಿರುತ್ತದೆ.
- ಜೆ.ಎನ್.ನರ್ಮ್ ಯೋಜನೆಯಡಿಯಲ್ಲಿ ರೂ. 460.15 ಕೋಟಿಗಳ ಅಂದಾಜು ವೆಚ್ಚದಲ್ಲಿ ಜಯನಗರ, ಕೆಂಗೇರಿ, ಬನ್ನೇರುಘಟ್ಟ, ಶಾಂತಿನಗರ, ಐ.ಟಿ.ಪಿ.ಎಲ್.(ವೈಟ್‌ಫೀಲ್ಡ್), ಕೋರಮಂಗಲ, ದೊಮ್ಮಲೂರು, ವಿಜಯನಗರ, ಯಶವಂತಪುರ ಮತ್ತು ಬನಶಂಕರಿಗಳಲ್ಲಿ 10 ಸಂಚಾರ ಮತ್ತು ಸಾಗಣೆ ನಿರ್ವಹಣಾ ಕೇಂದ್ರಗಳನ್ನು (ಟಿ.ಟಿ.ಎಂ.ಸಿ.) ಕಾರ್ಯಾರಂಭಗೊಳಿಸಲಾಗಿದೆ.
- ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ದಿನಾಂಕ:02–12–2017ರಂದು Transit Medical Clinic ಪ್ರಾರಂಭಿಸಲಾಗಿದೆ.

ಬೆಂ.ಮ.ಸಾ.ಸಂಸ್ಥೆಯು ಅಳವಡಿಸಿಕೊಂಡಿರುವ ಉತ್ತಮ ಉಪಕ್ರಮಗಳು:

ಅ. ಕಾರ್ಮಿಕ ಕಲ್ಯಾಣ

- ಕಾರ್ಮಿಕರ ಮತ್ತು ಅವರ ಅವಲಂಬಿತರ ವೈದ್ಯಕೀಯ ಚಿಕಿತ್ಸೆಗೆ ಅನುಕೂಲವಾಗುವಂತೆ ಆಯ್ದ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ
- ಉದ್ಯೋಗಿಗಳಿಗೆ ಸಹಾಯಹಸ್ತವಾಗಿ ಸ್ವಯಂ ನಿವೃತ್ತಿ ಯೋಜನೆ, ಕಲ್ಯಾಣ ನಿಧಿ ಹಾಗೂ ವೈದ್ಯಕೀಯ ಅಸಮರ್ಥತಾ ನಿಧಿ ಸ್ಥಾಪನೆ
- ಕರ್ತವ್ಯ ನಿರ್ವಹಣೆಯಲ್ಲಿರುವಾಗ ಅಪಘಾತವಾಗಿ ಮರಣ ಹೊಂದಿದಲ್ಲಿ ಕಾರ್ಮಿಕರ ಅನುಕೂಲಕ್ಕಾಗಿ ರೂ 1.00 ಲಕ್ಷಗಳ ಜನತಾ ಗುಂಪು ವಿಮಾ ಯೋಜನೆ
- ಕಾರ್ಮಿಕರು ಸೇವೆಯಲ್ಲಿರುವಾಗ ಮೃತರಾದಲ್ಲಿ ಅವರ ಅವಲಂಬಿತರಿಗೆ, ಅವರ ತಂದೆ ತಾಯಿಯವರಿಗೆ 25% ಪಾಲು ಸೇರಿದಂತೆ ರೂ 3.00 ಲಕ್ಷಗಳ ವಿಮಾ ಯೋಜನೆ
- ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರಿಗೆ ಉನ್ನತ ಶಿಕ್ಷಣಕ್ಕಾಗಿ ಆರ್ಥಿಕ ನೆರವು
- ಶಿಕ್ಷಣದಲ್ಲಿ ಗಮನಾರ್ಹ ಸಾಧನೆಗಾಗಿ ಕಾರ್ಮಿಕರ ಮಕ್ಕಳಿಗೆ ಪ್ರೋತ್ಸಾಹ ಧನ ಯೋಜನೆ
- ಗಂಭೀರ ಖಾಯಿಲೆಗಳನ್ನು ಪತ್ತೆ ಮಾಡುವುದಕ್ಕಾಗಿ ಆರ್ಥಿಕ ನೆರವು
- ಸಂಸ್ಥೆಯ ಮಹಿಳಾ ಸಿಬ್ಬಂದಿಗಳ ಕುಂದು ಕೊರತೆಗಳನ್ನು ನಿವಾರಿಸುವ ಸಲುವಾಗಿ ಮಹಿಳಾ ಕುಂದು ಕೊರತೆ ನಿವಾರಣಾ ಸಮಿತಿಯ ಕಾರ್ಯ ನಿರ್ವಹಣೆ
- Autism, ಅಂಧತ್ವ, ಮಾನಸಿಕ ದೌರ್ಬಲ್ಯ, Cerebral Palsy, ಮಾನಸಿಕ ಖಾಯಿಲೆಗಳು ಹಾಗೂ ನಾನಾ ನ್ಯೂನತೆಗಳಿಂದ ಬಳಲುತ್ತಿರುವ ಮಕ್ಕಳನ್ನು ಹೊಂದಿರುವ ಮಹಿಳಾ ಸಿಬ್ಬಂದಿಯ ಅನುಕೂಲಕ್ಕಾಗಿ 730 ದಿನಗಳ ವಿಶೇಷ ರಜೆಯನ್ನು ತೆಗೆದುಕೊಳ್ಳುವ ಅನುಕೂಲವನ್ನು ಕಲ್ಪಿಸಲಾಗಿದೆ.
- ಸಂಸ್ಥೆಯ ಸಿಬ್ಬಂದಿಗಳಿಗೆ ಹಾಗೂ ಅವಲಂಬಿತರಿಗೆ ತರಬೇತಿ ಕಾರ್ಯಕ್ರಮಗಳು

ಆ. ಆರ್ಥಿಕ ರಂಗ

- ಟೆಂಡರ್ ಮಖಾಂತರ ಛಾಸಿ ಖರೀದಿ
- ಛಾಸಿ ಹಾಗೂ ಇತರ ಸಾಮಾಗ್ರಿಗಳ ಪೂರೈಕೆಯಲ್ಲಿ ತಕ್ಷಣ ಪಾವತಿ ಮಾಡಲು ಡಿಸ್ಕೌಂಟ್ ಯೋಜನೆ (Prompt Payment Discount scheme).

ಇ. ಇತರೆ

- ಬಸ್‌ಗಳ ಕಾರ್ಯಾಚರಣೆಯ ಮೇಲುಸ್ತುವಾರಿಗಾಗಿ ಪ್ರಯಾಣಿಕ ಸ್ನೇಹಿ ಗಸ್ತು ವಾಹನ "ಸಾರಥಿ" ಗಸ್ತು ವಾಹನಗಳನ್ನು ಕಾರ್ಯಚರಿಸಲಾಗುತ್ತಿದೆ.
- ಸಂಸ್ಥೆಯ ಆಂತರಿಕ ಪತ್ರಿಕೆ "ಸಂಚಾರ" ಪ್ರಕಟಣೆ

- ಬೆಂ.ಮ.ಸಾ.ಸಂಸ್ಥೆಯ ವತಿಯಿಂದ ಸಾಹಿತ್ಯ ದತ್ತಿ ನಿಧಿ ಸ್ಥಾಪಿಸಿದ್ದು, ಪ್ರಸಕ್ತ ಸಾಲಿನಲ್ಲಿ ಕನ್ನಡ ಸಾಹಿತ್ಯ ರಂಗದ ಡಾ॥ ಚನ್ನವೀರ ಕಣವಿ ರವರಿಗೆ 'ನೃಪತುಂಗ ಪ್ರಶಸ್ತಿ' ಪ್ರದಾನ

ಈ. ಹಿಂದಿನ ಉಪಕ್ರಮಗಳ ಸುಧಾರಣೆ ಹಾಗೂ ಇತರೆ ಹೊಸ ಉಪಕ್ರಮಗಳು

ಸಾರ್ವಜನಿಕ ಪ್ರಯಾಣಿಕರಿಗೆ ಅತ್ಯುತ್ತಮ ಸೇವೆ ಒದಗಿಸುವುದಲ್ಲದೇ ಪ್ರಯಾಣಿಕರ ಸಂಖ್ಯೆಯನ್ನು ಹೆಚ್ಚಿಸುವ ಸಲುವಾಗಿ ಕೆಳಕಂಡ ಉಪಕ್ರಮಗಳನ್ನು ಅನುಷ್ಠಾನಗೊಳಿಸಿದೆ:

- ಬಸ್‌ಗಳ ಸ್ವಚ್ಛತೆ
- ವಾಹನ ಬಲದ ನಿರ್ವಹಣೆ ವ್ಯವಸ್ಥೆ
- ಸಾರಿಗೆ ಆದಾಯ ನಿರ್ವಹಣೆ
- ಮಾನವಸಂಪನ್ಮೂಲ ನಿಯೋಜನೆ ವ್ಯವಸ್ಥೆ
- ಉಗ್ರಾಣ ಮತ್ತು ಇನ್‌ವೆಂಟರಿ ನಿರ್ವಹಣೆ ವ್ಯವಸ್ಥೆ
- ಇಂಧನ ದಕ್ಷತೆ ನಿರ್ವಹಣೆ

2020–21ನೇ ಸಾಲಿಗಾಗಿ ಯೋಜನೆಗಳು:

ಸಂಸ್ಥೆಯು 2020–21ನೇ ಸಾಲಿಗೆ ಕೋವಿಡ್–19 ಸಾಂಕ್ರಾಮಿಕದ ಪರಿಣಾಮಗಳನ್ನು ಗಮನದಲ್ಲಿರಿಸಿಕೊಂಡು ಕಾರ್ಯ ಯೋಜನೆಯನ್ನು ತಯಾರಿಸಿಕೊಂಡಿದ್ದು, ಆ ಮೂಲಕ ತನ್ನ ಆಚರಣಾ ವೆಚ್ಚವನ್ನು ತಗ್ಗಿಸಿಕೊಳ್ಳುವುದೇ ಅಲ್ಲದೆ ಕಾರ್ಯಾಚರಣೆಯ ಹಲವು ಮಜಲುಗಳನ್ನು ಉತ್ತಮಪಡಿಸಿಕೊಳ್ಳುವ ಮೂಲಕ ತನ್ನ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಯೋಜಿಸಿದೆ. ವಿವರಗಳು ಕೆಳಕಂಡಂತೆವೆ:

- ಕೋವಿಡ್–19 ಸಾಂಕ್ರಾಮಿಕದ ಪರಿಣಾಮಗಳನ್ನು ಗಮನದಲ್ಲಿರಿಸಿಕೊಂಡು ಹಾಗೂ ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳನ್ವಯ 2020–21ನೇ ಸಾಲಿನಲ್ಲಿ ಸರಾಸರಿ 3517.9 ಅನುಸೂಚಿಗಳ ಮೂಲಕ 16.69 ಕೋಟಿ ಪರಿಣಾಮಕಾರಿ ಕಿ.ಮೀಗಳನ್ನು ಕಾರ್ಯಚರಿಸಲು ಯೋಜಿಸಿದೆ
- 1297 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಲು ಯೋಜಿಸಲಾಗಿದೆ
- 3.95ರ ಇಂಧನ ಕೆ.ಎಂ.ಪಿ.ಎಲ್ ಗುರಿಯನ್ನು ನಿಗಧಿಪಡಿಸಲಾಗಿದೆ
- ರೂ. 487.89 ಕೋಟಿ ಸಾರಿಗೆ ಆದಾಯದ ಗುರಿಯನ್ನು ಹೊಂದುವುದರೊದಿಗೆ 2923.4 ಪೈಸೆಗಳ ಇಪಿಕೆಎಂ ಅನ್ನು ನಿರೀಕ್ಷಿಸಲಾಗಿದೆ. ಸಂಸ್ಥೆಯು 9626.4 ಪೈಸೆಗಳ ಪ್ರತಿ ಕಿ.ಮೀ ವೆಚ್ಚವನ್ನು ಭರಿಸಬಹುದೆಂದು ಅಂದಾಜಿಸಲಾಗಿದೆ.
- 2020–21ನೇ ಸಾಲಿನಲ್ಲಿ ಒಟ್ಟು ಆದಾಯದ ಮೇಲೆ ರೂ.1019.72 ಕೋಟಿಗಳ ನಷ್ಟ ಅನುಭವಿಸಬಹುದೆಂದು ಅಂದಾಜಿಸಲಾಗಿದೆ

*****

ಪ್ರಗತಿಯ ಪಕ್ಷಿನೋಟ – ಪ್ರಮುಖಾಂಶಗಳು

ಕ್ರ ಸಂ	ಅಂಶಗಳು	1997–98 (15–08–97ರಿಂದ)	2014-15	2015-16	2016-17	2017-18	2018-19	2019-20
I	**ಸಂಸ್ಥೆ (ಮಾರ್ಚ್ 31ರಂದು ಇದ್ದಂತೆ)**							
1	ಕೇಂದ್ರ ಕಛೇರಿ	1	1	1	1	1	1	1
2	ಘಟಕಗಳು	13	40	40	43	44	45	45
3	ಕೇಂದ್ರೀಯ ಕಾರ್ಯಾಗಾರಗಳು	1	2	2	2	2	2	3
4	ಸಿಬ್ಬಂದಿ ಬಲ	13294	36474	35554	34306	34114	33878	33292
5	ಸಿಬ್ಬಂದಿಗೆ ಅಧಿಕಾರಿಗಳ ಅನುಪಾತ	209	233	244	249	256	241	215
6	ಪ್ರತಿ ಅನುಸೂಚಿಗೆ ಸಿಬ್ಬಂದಿ ಅನುಪಾತ	6.87	5.83	5.68	5.52	5.55	5.47	5.41
II	**ಕಾರ್ಯಾಚರಣೆ (ಮಾರ್ಚ್ 31ರಂದು ಇದ್ದಂತೆ)**							
1	ಅನುಸೂಚಿಗಳು	1934	6261	6261	6219	6143	6190	6159
2	ವಾಹನಗಳು	2098	6524	6407	6165	6677	6521	6690
3	ಹೊಸ ವಾಹನಗಳ ಸೇರ್ಪಡೆ	146	197	0	101	1406	290	361
4	ನಿಷ್ಕ್ರಿಯಗೊಳಿಸಿದ ಹಳೆಯ ವಾಹನಗಳು	59	448	118	343	880	440	190
5	ಮಾರ್ಗಗಳು	1036	2288	2424	2194	2253	2263	2196
6	ಮಾರ್ಗಗಳ ಉದ್ದ	19.45	24.17	23.94	24.05	24.60	25.15	25.73
III	**ಪ್ರಯಾಣಿಕರ ಸೌಲಭ್ಯಗಳು**							
1	ಬಸ್ ನಿಲ್ದಾಣಗಳು	24	52	52	53	53	54	54
2	ಆಶ್ರಯದಾಣಗಳು/ನಿಲುಗಡೆಗಳು	845	2212	2212	2212	2212	2212	2212
IV	**ಸಂಚಾರ ಕಾರ್ಯ ಚಟುವಟಿಕೆಗಳು**							
1	ಒಟ್ಟು ಅನುಸೂಚಿ ಕಿ.ಮೀ.ಗಳು (ಲಕ್ಷಗಳಲ್ಲಿ)	975.89	5104.15	4976.18	4860.09	4864.82	4692.32	4522.55
2	ದಿನವಹಿ ಅನುಸೂಚಿ ಕಿ.ಮೀ.ಗಳು (ಲಕ್ಷಗಳಲ್ಲಿ)	4.46	13.98	13.60	13.32	13.33	12.86	12.36
3	ಒಟ್ಟು ಪರಿಣಾಮಕಾರಿ ಕಿ.ಮೀ.ಗಳು (ಲಕ್ಷಗಳಲ್ಲಿ)	919.16	4708.56	4469.82	4205.20	4164.53	4152.85	4065.51
	ಶೇಕಡ ವೃದ್ಧಿ		-1.8	-5.1	-5.9	-1.0	-0.3	-2.1
4	ಒಟ್ಟು ರದ್ದಾದ ಕಿ.ಮೀ.ಗಳು (ಲಕ್ಷಗಳಲ್ಲಿ)	71.68	428.45	533.56	678.92	717.94	571.44	479.78
5	ಶೇಕಡ ರದ್ದತಿ	7.3	8.4	10.7	14.0	14.8	12.2	10.6
6	ಪ್ರತಿದಿನ ಸಂಚರಿಸಿದ ಪ್ರಯಾಣಿಕರ ಸಂಖ್ಯೆ (ಲಕ್ಷಗಳಲ್ಲಿ)	24.50	51.30	50.74	45.34	44.37	35.00	33.10
7	ಶೇಕಡ ಪ್ರಯಾಣಿಕರ ದಟ್ಟಣೆ	72.3	75.8	74.2	68.8	66.8	71.4	67.7
V	**ಕಾರ್ಯಸಾಧನೆ**							
1	ಶೇಕಡ ವಾಹನ ಬಳಕೆ	91.7	90.5	90.9	89	87.5	84.1	85.1
2	ಸರಾಸರಿ ವಾಹನ ಬಳಕೆ (ಕಿ.ಮೀ.ಗಳಲ್ಲಿ)	214.2	214.5	208.5	206.5	203.8	202.6	200.4
3	ಕೆ.ಎಂ.ಪಿ.ಎಲ್. (ಇಂಧನ)	4.01	3.79	3.76	3.74	3.74	3.74	3.75
VI	**ಸೇವೆಯ ಗುಣಮಟ್ಟ**							
1	ಅವಘಡಗಳ ಪರಿಮಾಣ (10000 ಕಿ.ಮೀ.ಗಳಿಗೆ)	0.55	0.06	0.06	0.06	0.05	0.03	0.03
2	ಅಪಘಾತಗಳ ಪರಿಮಾಣ (1 ಲಕ್ಷ ಕಿ.ಮೀ.ಗಳಿಗೆ)	0.32	0.08	0.07	0.07	0.07	0.07	0.06

ಆರ್ಥಿಕ ಕಾರ್ಯಸಾಧನೆ

ಕ್ರ. ಸಂ	ಅಂಶಗಳು	1997–98 (15–08–97ರಿಂದ)	2014-15	2015-16	2016-17	2017-18	2018-19	2019-20
VII	**ಕಾರ್ಯಾಚರಣೆ ಫಲಿತಾಂಶಗಳು**							
1	**ಸಾರಿಗೆ ಆದಾಯ** (ರೂ. ಲಕ್ಷಗಳಲ್ಲಿ)							
ಅ	ಟೀಟಿಗಳ ಮಾರಾಟದಿಂದ		113927.75	113371.82	106769.85	109928.00	121350.16	122498.91
ಆ	ಮಾಸಿಕ ಪಾಸುಗಳು		47997.64	47655.64	45574.44	43355.00	41415.03	32043.31
ಇ	ದೈನಿಕ ಪಾಸುಗಳು		26018.85	20422.87	15654.61	15322.00	12293.81	10895.77
ಈ	ವಿದ್ಯಾರ್ಥಿ ರಿಯಾಯಿತಿ ಪಾಸುಗಳು		4538.93	4542.76	4321.65	3599.00	3634.01	3672.06
ಉ	ಇತರೆ ಮೂಲಗಳು		6927.89	5809.53	4726.60	4266.60	5191.03	10040.36
	ಒಟ್ಟು	10662.17	199411.06	191802.62	177047.15	176470.60	183884.04	180700.00
2	**ಇತರೆ ಆದಾಯ** (ರೂ. ಲಕ್ಷಗಳಲ್ಲಿ)							
ಅ	ಸರ್ಕಾರದಿಂದ ಮರುಪಾವತಿ	910.00	17013.98	19520.97	21095.39	25828.00	18875.04	18175.00
ಆ	ಜಾಹೀರಾತುಗಳು	20.94	980.97	1209.67	1399.63	2079.38	2406.83	2461.82
ಇ	ವಾಣಿಜ್ಯ ಮಳಿಗೆಗಳಿಂದ ಬಾಡಿಗೆ	18.28	5219.32	5755.08	5941.03	6574.89	7010.60	6723.73
ಈ	ಅನುಪಯುಕ್ತ ವಸ್ತುಗಳ ಮಾರಾಟದಿಂದ	22.89	393.78	320.84	247.22	287.94	484.24	299.32
ಉ	ಅನುಪಯುಕ್ತ ವಾಹನಗಳ ಮಾರಾಟದಿಂದ	53.74	808.34	126.72	168.34	282.70	343.07	759.98
ಊ	ಇತರೆ ಮೂಲಗಳು	73.46	1856.98	2012.49	4711.65	11176.00	16325.73	2877.15
	ಒಟ್ಟು	1099.31	26273.37	28945.77	33563.26	46228.91	45445.51	31297.00
3	ಒಟ್ಟು ಆದಾಯ (ರೂ. ಲಕ್ಷಗಳಲ್ಲಿ)	11761.48	225684.43	220748.39	210610.41	222699.51	229329.55	211997.00
4	ಪ್ರತಿ ಕಿ.ಮೀ. ನ ಆದಾಯ ಸಾರಿಗೆ ಆದಾಯಕ್ಕೆ (ಪೈಸೆ)	1160.0	4235.1	4291.1	4210.2	4237.5	4427.9	4444.7
	ಶೇಕಡ ವೃದ್ಧಿ		15.0	1.3	-1.9	0.6	4.5	0.4
5	ಪ್ರತಿ ಕಿ.ಮೀ. ನ ಆದಾಯ ಒಟ್ಟು ಆದಾಯಕ್ಕೆ (ಪೈಸೆ)	1279.6	4793.1	4938.6	5008.3	5347.5	5522.2	5214.5
	ಶೇಕಡ ವೃದ್ಧಿ		14.1	3.0	1.4	6.8	3.3	-5.6
6	ಒಟ್ಟು ಕಾರ್ಯಾಚರಣೆ ವೆಚ್ಚ (ರೂ. ಲಕ್ಷಗಳಲ್ಲಿ)	12543.22	232174.81	219375.73	236701.42	244461.00	264278.29	266931.00
	ಶೇಕಡ ಹೆಚ್ಚಳ		7.4	-5.5	7.9	3.3	8.1	1.0
7	ಪ್ರತಿ ಕಿ.ಮೀ. ನ ವೆಚ್ಚ (ಪೈಸೆಗಳಲ್ಲಿ)	1364.6	4930.9	4907.9	5628.8	5870.1	6363.8	6565.8
	ಶೇಕಡ ಹೆಚ್ಚಳ		9.4	-0.5	14.7	4.3	8.4	3.2
8	ಲಾಭ/ನಷ್ಟ ಸಾರಿಗೆ ಆದಾಯಕ್ಕೆ (ರೂ. ಲಕ್ಷಗಳಲ್ಲಿ)	-1881.05	(-)21779.98	(-)27573.11	(-)59654.27	(-)67990.4	(-)80394.25	(-)86231.00
9	ಲಾಭ/ನಷ್ಟ ಒಟ್ಟು ಆದಾಯಕ್ಕೆ (ರೂ. ಲಕ್ಷಗಳಲ್ಲಿ)	-781.74	(-)6490.38	(+)1372.66	(-)26091.01	(-)21761.49	(-)34948.74	(-)54934.00
10	ಲಾಭ/ನಷ್ಟ ಸಾರಿಗೆ ಆದಾಯಕ್ಕೆ (ಪೈಸೆಗಳಲ್ಲಿ)	-204.6	(-)462.6	(-)616.9	(-)1418.6	(-)1632.6	(-)1935.9	(-)2121.0
11	ಲಾಭ/ನಷ್ಟ ಒಟ್ಟು ಆದಾಯಕ್ಕೆ (ಪೈಸೆಗಳಲ್ಲಿ)	-85.0	(-)137.8	(+)30.7	(-)620.5	(-)522.5	(-)841.6	(-)1351.2

ಪರಿಚ್ಛೇದ –1

ನಿರ್ದೇಶಕ ಮಂಡಳಿ

1.1 ನಿರ್ದೇಶಕ ಮಂಡಳಿಯ ರಚನೆ:

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ನಿರ್ದೇಶಕ ಮಂಡಳಿಯು ದಿನಾಂಕ: 31–03–2020ರಂದು, ಮಾನ್ಯ ಅಧ್ಯಕ್ಷರು (ಅಧಿಕಾರೇತರ) ರವರನ್ನೊಳಗೊಂಡಂತೆ ಒಟ್ಟು 8 ನಿರ್ದೇಶಕರುಗಳನ್ನು ಒಳಗೊಂಡಿತ್ತು. ಆ ಪೈಕಿ 7 ನಿರ್ದೇಶಕರು ಅಧಿಕಾರಯುತ ನಿರ್ದೇಶಕರುಗಳಾಗಿರುತ್ತಾರೆ. ಎಲ್ಲಾ ನಿರ್ದೇಶಕರುಗಳನ್ನು ರಾಜ್ಯ ಸರ್ಕಾರವು ನೇಮಕ ಮಾಡಿರುತ್ತದೆ.

1.2 2019–20ನೇ ಸಾಲಿನ ಮಂಡಳಿ ನಿರ್ದೇಶಕರುಗಳ ಬದಲಾವಣೆಗಳು:

1. ಶ್ರೀ. ಅನುಪಮ್ ಅಗ್ರವಾಲ್, ಭಾ.ಪೊ.ಸೇ., ನಿರ್ದೇಶಕರು (ಭದ್ರತೆ ಮತ್ತು ಜಾಗೃತಿ), ಬೆಂ.ಮ.ಸಾ.ಸಂಸ್ಥೆ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಾರಿಇ 55 ಸಾಸಂಇ 2018 ದಿನಾಂಕ 26.06.2019 ರನ್ವಯ ಬೆಂ.ಮ.ಸಾ.ಸಂಸ್ಥೆಯ ಮಂಡಳಿಯಲ್ಲಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿರುತ್ತದೆ.

2. ಶ್ರೀ. ಶಿವಯೋಗಿ ಸಿ. ಕಳಸದ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ ಮತ್ತು ಡಾ॥ ಪಿ.ಸಿ. ಜಾಫರ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ) ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿ.ಡಿ 13 ಟಿಸಿಎಸ್ 2019 ದಿನಾಂಕ 17.07.2019 ರನ್ವಯ ಬೆಂ.ಮ.ಸಾ.ಸಂಸ್ಥೆಯ ಮಂಡಳಿಯಲ್ಲಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿರುತ್ತದೆ.

3. ಡಾ॥ ಬಿ. ಬಸವರಾಜು, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬೆಂಗಳೂರು ಇವರ ವಯೋ ನಿವೃತ್ತಿಯಿಂದ ತೆರವಾದ ಸ್ಥಾನದಲ್ಲಿ ಶ್ರೀ. ಶಿವಯೋಗಿ ಸಿ. ಕಳಸದ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿ.ಡಿ 14 ಟಿಸಿಎಸ್ 2019 ದಿನಾಂಕ 29.07.2019 ರನ್ವಯ ಬೆಂ.ಮ.ಸಾ.ಸಂಸ್ಥೆಯ ಮಂಡಳಿಯಲ್ಲಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿರುತ್ತದೆ.

4. ಶ್ರೀ. ಲಕ್ಷ್ಮಣ ಸಂಗಪ್ಪ ಸವದಿ, ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿ.ಡಿ 14 ಟಿಸಿಎಸ್ 2019(ಭಾ) ದಿನಾಂಕ 09.09.2019ರನ್ವಯ, ಬೆಂ.ಮ.ಸಾ.ಸಂಸ್ಥೆಯ ಮಂಡಳಿಯಲ್ಲಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿರುತ್ತದೆ.

5. ಶ್ರೀ. ಶಿವಯೋಗಿ ಸಿ. ಕಳಸದ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ ಇವರ ಸ್ಥಾನದಲ್ಲಿ ಶ್ರೀ. ಗೌರವ್ ಗುಪ್ತ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ ಇವರನ್ನು ಮತ್ತು ಡಾ॥ ಎನ್. ವಿ. ಪ್ರಸಾದ್, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು ಇವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ ಶ್ರೀಮತಿ ಸಿ. ಶಿಖಾ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿ.ಡಿ 14 ಟಿಸಿಎಸ್ 2019 ದಿನಾಂಕ: 21.09.2019ರನ್ವಯ ಬೆಂ.ಮ.ಸಾ.ಸಂಸ್ಥೆಯ ಮಂಡಳಿಯಲ್ಲಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿರುತ್ತದೆ.

6. ಶ್ರೀ. ಎನ್.ಎಸ್.ನಂದೀಶ ರೆಡ್ಡಿ, ಮಾಜಿ ಶಾಸಕರು, ಬೆಂಗಳೂರು ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿ.ಡಿ 14 ಟಿಸಿಎಸ್ 2019(ಭಾ) ದಿನಾಂಕ:09–10–2019ರನ್ವಯ, ಬೆಂ.ಮ.ಸಾ.ಸಂಸ್ಥೆಯ ಮಂಡಳಿಯಲ್ಲಿ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿರುತ್ತದೆ.

   (ಮೇಲ್ಕಂಡ ಸರ್ಕಾರದ ಅಧಿಸೂಚನೆಯನ್ವಯ ಮಾನ್ಯ ಶ್ರೀ. ಎನ್.ಎಸ್.ನಂದೀಶ ರೆಡ್ಡಿ, ಮಾಜಿ ಶಾಸಕರು, ಬೆಂ.ಮ.ಸಾ.ಸಂಸ್ಥೆಯ ಉಪಾಧ್ಯಕ್ಷರ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡಿರುವುದಿಲ್ಲ.)

7. ಶ್ರೀ. ಎನ್.ಎಸ್.ನಂದೀಶ ರೆಡ್ಡಿ, ಮಾಜಿ ಶಾಸಕರು ಹಾಗೂ ಉಪಾಧ್ಯಕ್ಷರು ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿ.ಡಿ 14 ಟಿಸಿಎಸ್ 2019(ಭಾ) ದಿನಾಂಕ:30–10–2019 ರನ್ವಯ, ಬೆಂ.ಮ.ಸಾ.ಸಂಸ್ಥೆಯ ಮಂಡಳಿಯಲ್ಲಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿರುತ್ತದೆ.

8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 13 ಟಿಸಿಎಸ್ 2019 ದಿನಾಂಕ:16–12–2019 ರನ್ವಯ, ಬೆಂ.ಮ.ಸಾ.ಸಂಸ್ಥೆಯ ಮಂಡಳಿಯಲ್ಲಿ ಅಧಿಕಾರಯುತ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿರುತ್ತದೆ.

ಈ ಮೇಲಿನ ಬದಲಾವಣೆಗಳೊಂದಿಗೆ ದಿನಾಂಕ 31.03.2020 ರಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಂಡಳಿಯಲ್ಲಿ ಈ ಕೆಳಕಂಡ ನಿರ್ದೇಶಕರುಗಳಿದ್ದರು.

ಕ್ರಮ ಸಂಖ್ಯೆ	ಹೆಸರು	ಅಧಿಕಾರಯುತ/ ಅಧಿಕಾರೇತರ
1	ಶ್ರೀ. ಎನ್. ಎಸ್ ನಂದೀಶ ರೆಡ್ಡಿ, ಮಾಜಿ ಶಾಸಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–560027.	ಸನ್ಮಾನ್ಯ ಅಧ್ಯಕ್ಷರು (ಅಧಿಕಾರೇತರ)
2	ಶ್ರೀ. ಗೌರವ್ ಗುಪ್ತ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560001.	ನಿರ್ದೇಶಕರು (ಅಧಿಕಾರಯುತ)
3	ಡಾ॥ ಪಿ.ಸಿ. ಜಾಫರ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು–560001.	ನಿರ್ದೇಶಕರು (ಅಧಿಕಾರಯುತ)
4	ಶ್ರೀಮತಿ. ಸಿ. ಶಿಖಾ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–560027.	ನಿರ್ದೇಶಕರು (ಅಧಿಕಾರಯುತ)
5	ಶ್ರೀ. ಶಿವಯೋಗಿ ಸಿ. ಕಳಸದ, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–560027.	ನಿರ್ದೇಶಕರು (ಅಧಿಕಾರಯುತ)
6	ಶ್ರೀ. ಪಿ. ರಾಜೇಂದ್ರ ಚೋಳನ್, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಗೋಕುಲ್ ರಸ್ತೆ, ಹುಬ್ಬಳ್ಳಿ–580 030	ನಿರ್ದೇಶಕರು (ಅಧಿಕಾರಯುತ)

7	ಶ್ರೀಮತಿ ಝಹೀರಾ ನಸೀಮ್, ಕೆ.ಎ.ಎಸ್., ವ್ಯವಸ್ಥಾಪಕ ನಿರ್ದೇಶಕರು, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಸಾರಿಗೆ ಸದನ, ಮುಖ್ಯ ರಸ್ತೆ ಕಲಬುರ್ಗಿ–585 102.	ನಿರ್ದೇಶಕರು (ಅಧಿಕಾರಯುತ)
8	ಶ್ರೀ. ಪರೇಶ್ ಕುಮಾರ್ ಗೋಯೆಲ್, ನಿರ್ದೇಶಕರು (ಸಾರಿಗೆ), ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ಪರಿವಾಹನ್ ಭವನ್, ನಂ:1 ಸಂಸದ್ ಮಾರ್ಗ, ಭಾರತ ಸರ್ಕಾರ, ನವದೆಹಲಿ–110001.	ನಿರ್ದೇಶಕರು (ಅಧಿಕಾರಯುತ) (ಕೇಂದ್ರ ಸರ್ಕಾರದ ಪ್ರತಿನಿಧಿ)

1.3. ಸಮಾವೇಶಗೊಂಡ ಸಭೆಗಳು, ಮಂಡಿಸಲಾದ ವಿಷಯಗಳು, ಮತ್ತು ಹೊರಡಿಸಲಾದ ಠರಾವುಗಳು:

2019–20ನೇ ಸಾಲಿನಲ್ಲಿ ಸಂಸ್ಥೆಯ ನಿರ್ದೇಶಕ ಮಂಡಳಿಯ ಮೂರು (3) ಸಭೆಗಳನ್ನು ನಡೆಸಿದ್ದು, ಪ್ರಸರಣೆಯ ಮುಖಾಂತರ ನಿರ್ದೇಶಕ ಮಂಡಳಿ ಅನುಮೋದನೆ ಪಡೆದ ಎರಡು (2) ವಿಷಯ/ಠರಾವುಗಳು ಸೇರಿದಂತೆ ಒಟ್ಟು 65 ವಿಷಯಗಳನ್ನು ಮಂಡಳಿಗೆ ಮಂಡಿಸಿದ್ದು, 57 ಠರಾವುಗಳನ್ನು ಹೊರಡಿಸಲಾಗಿರುತ್ತದೆ.

2019–20ನೇ ಸಾಲಿನಲ್ಲಿ ನಡೆದ ನಿರ್ದೇಶಕ ಮಂಡಳಿ ಸಭೆಗಳಿಗೆ ನಿರ್ದೇಶಕರುಗಳು ಹಾಜರಾದ ಸಭೆಗಳ ಸಂಖ್ಯೆಯ ಮಾಹಿತಿಯನ್ನು ಪ್ರತ್ಯೇಕವಾಗಿ ಅನುಸೂಚಿ 'ಅ' ನಲ್ಲಿ ಒದಗಿಸಲಾಗಿರುತ್ತದೆ.

1.4 ಮುಖ್ಯ ಸಮಿತಿ:

2019–20ನೇ ಸಾಲಿನಲ್ಲಿ ಯಾವುದೇ ಮುಖ್ಯ ಸಮಿತಿಯನ್ನು ರಚಿಸಿರುವುದಿಲ್ಲ.

ಪರಿಚ್ಛೇದ – 2 **ಆಡಳಿತ**

2.1 ವ್ಯವಸ್ಥೆ:

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಪ್ರಸ್ತುತ ಎರಡು–ಹಂತದ ಆಡಳಿತ ವ್ಯವಸ್ಥೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆದಾಗ್ಯೂ ಸಂಸ್ಥೆಯ ಘಟಕಗಳ ನಿಕಟ ಮೇಲ್ವಿಚಾರಣೆ ಮತ್ತು ಅನುಸೂಚಿಗಳ ಪರಿಣಾಮಕಾರಿ ಆಚರಣೆಗೆ ಮಂಡಳಿ ನಿರ್ದೇಶಕರುಗಳು ಠರಾವು ಸಂಖ್ಯೆ 1636 ದಿನಾಂಕ:21–10–2016ರ ಅನ್ವಯ ನೀಡಿದ್ದ ಅನುಮೋದನೆ ಮೇರೆಗೆ ಸಂಸ್ಥೆಯಲ್ಲಿ 6 ವಲಯಗಳನ್ನು ಅಂದರೆ, ಉತ್ತರ, ಈಶಾನ್ಯ, ಪೂರ್ವ, ಪಶ್ಚಿಮ, ಕೇಂದ್ರೀಯ, ದಕ್ಷಿಣ ವಲಯಗಳನ್ನು ಸೃಜಿಸಲಾಗಿದ್ದು ವಲಯವಾರು ಘಟಕಗಳ ವಿವರ ಈ ಕೆಳಕಂಡಂತಿರುತ್ತದೆ.

ವಲಯಗಳು	ಘಟಕಗಳು	ಸ್ಥಳ	ಅನುಸೂಚಿಗಳ ಸಂಖ್ಯೆ
ಪೂರ್ವ ವಲಯ	ಘಟಕ–6	ಇಂದಿರಾನಗರ	145
	ಘಟಕ–15	ಕೋರಮಂಗಲ	140
	ಘಟಕ–19	ಎಲೆಕ್ಟ್ರಾನಿಕ್ಸ್ ಸಿಟಿ	120
	ಘಟಕ–27	ಜಿಗಣಿ	149
	ಘಟಕ–32	ಸೂರ್ಯನಗರ	153
	ಘಟಕ–38	ಚಿಕ್ಕನಾಗಮಂಗಲ	114
	ಘಟಕ–41	ಗುಂಜೂರು	153
ಪಶ್ಚಿಮ ವಲಯ	ಘಟಕ–12	ಕೆಂಗೇರಿ – 1	149
	ಘಟಕ–16	ದೀಪಾಂಜಲಿನಗರ	154
	ಘಟಕ–17	ಚಂದ್ರ ಬಡಾವಣೆ	140
	ಘಟಕ–21	ರಾಜರಾಜೇಶ್ವರಿನಗರ	168
	ಘಟಕ–31	ಶ್ರೀಗಂಧಕಾವಲ್	167
	ಘಟಕ–35	ಕನ್ನಳ್ಳಿ	122
	ಘಟಕ–36	ಬಿಡದಿ	69
	ಘಟಕ–37	ಕೆಂಗೇರಿ–2	126
ಉತ್ತರ ವಲಯ	ಘಟಕ–8	ಯಶವಂತಪುರ–1	170
	ಘಟಕ–9	ಪೀಣ್ಯ–1	186
	ಘಟಕ–11	ಯಲಹಂಕ–1	158
	ಘಟಕ–22	ಪೀಣ್ಯ–2	166
	ಘಟಕ–26	ಯಶವಂತಪುರ–2	165
	ಘಟಕ–30	ಯಲಹಂಕ–2	153
	ಘಟಕ–40	ದಾಸನಪುರ	95
	ಘಟಕ–43	ಶಿವನಪುರ	74
	ಘಟಕ–45	ಎಂ.ಎಸ್.ಪಾಳ್ಯ	116
	ಘಟಕ–46	ಸಾದೇನಹಳ್ಳಿ	84
ದಕ್ಷಿಣ ವಲಯ	ಘಟಕ–2	ಶಾಂತಿನಗರ	166
	ಘಟಕ–3	ಶಾಂತಿನಗರ	177
	ಘಟಕ–4	ಜಯನಗರ	179
	ಘಟಕ–20	ಬನಶಂಕರಿ	178
	ಘಟಕ–33	ಪೂರ್ಣಪ್ರಜ್ಞ ಬಡಾವಣೆ	171
	ಘಟಕ–34	ಕೊತ್ತನೂರು ದಿಣ್ಣೆ	161
	ಘಟಕ–44	ಅಂಜನಾಪುರ	61

ಈಶಾನ್ಯ ವಲಯ	ಘಟಕ–10	ಹೆಣ್ಣೂರು ಬಾಣಸವಾಡಿ	176
	ಘಟಕ–14	ಆರ್.ಟಿ.ನಗರ	104
	ಘಟಕ–23	ಕಲ್ಯಾಣ ನಗರ	95
	ಘಟಕ–24	ಐ.ಟಿ.ಐ	178
	ಘಟಕ–39	ಹೊಸಕೋಟೆ	126
	ಘಟಕ–47	ಮಂಡೂರು	101
	ಘಟಕ–48	ಬೈರತಿ	90
ಕೇಂದ್ರೀಯ ವಲಯ	ಘಟಕ–7	ಸುಭಾಷ್‌ನಗರ	170
	ಘಟಕ–13	ಕತ್ರಿಗುಪ್ಪೆ	176
	ಘಟಕ–18	ವೈಟ್‌ಫೀಲ್ಡ್	59
	ಘಟಕ–25	ಹೆಚ್.ಎಸ್.ಆರ್. ಬಡಾವಣೆ	145
	ಘಟಕ–28	ಹೆಬ್ಬಾಳ	144
	ಘಟಕ–29	ಕೃಷ್ಣರಾಜಪುರ	66

ಬೆಂ.ಮ.ಸಾ.ಸಂಸ್ಥೆಯಲ್ಲಿ 03 ಪ್ರಮುಖ ಕೇಂದ್ರೀಯ ಕಾರ್ಯಗಾರಗಳು ಕೇಂದ್ರೀಯ ಕಾರ್ಯಗಾರ–1 ಶಾಂತಿನಗರ ಮತ್ತು ಕೇಂದ್ರೀಯ ಕಾರ್ಯಗಾರ–2 ಕೃಷ್ಣರಾಜಪುರ ಹಾಗೂ ಕೇಂದ್ರೀಯ ಕಾರ್ಯಗಾರ–4, ದಾಸನಪುರಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

2019–20 ಮತ್ತು 2018–19ರ ಅವಧಿಯಲ್ಲಿ ಘಟಕಗಳು ಕಾರ್ಯಾಚರಣೆ ಮಾಡಿದ ಅನುಸೂಚಿಗಳು ಮತ್ತು ವಾಹನಗಳ ವಿವರಗಳನ್ನು ಪಟ್ಟಿ–1 ರಲ್ಲಿ ನೀಡಲಾಗಿದೆ.

ಪಟ್ಟಿ–1

ಕ್ರಮ ಸಂಖ್ಯೆ	ವಿಭಾಗ	ಅನುಸೂಚಿಗಳು		ವಾಹನಗಳು	
		2019-20	2018-19	2019-20	2018-19
1	ಪೂರ್ವ	974	977	1058	1031
2	ಪಶ್ಚಿಮ	1095	1117	1202	1181
3	ಉತ್ತರ	1367	1372	1471	1412
4	ದಕ್ಷಿಣ	1093	1097	1158	1139
5	ಈಶಾನ್ಯ	870	868	940	906
6	ಕೇಂದ್ರೀಯ	760	759	861	852
	ಒಟ್ಟಾರೆ ಸಂಸ್ಥೆ	**6159**	**6190**	6690	**6521**

2.2. **ಸಿಬ್ಬಂದಿ ಸ್ಥಿತಿ:**

ದಿನಾಂಕ: 31.03.2020ರಂತೆ ಸಂಸ್ಥೆಯಲ್ಲಿ 33292 ಸಿಬ್ಬಂದಿಗಳಿದ್ದು, ದಿನಾಂಕ:31.03.2019ರಂತೆ ಸಂಸ್ಥೆಯಲ್ಲಿ 33878 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದರು. ಖಾಯಂ/ತರಬೇತಿ/ತಾತ್ಕಾಲಿಕ ನೌಕರರ ಹುದ್ದೆವಾರು ಅಂಕಿ–ಅಂಶವು ಪಟ್ಟಿ–2ರಲ್ಲಿ ನೀಡಲಾಗಿದೆ. ಮೇಲ್ವಿಚಾರಕ ಸಿಬ್ಬಂದಿಗಳು ಮತ್ತು ಅಧಿಕಾರಿ ವರ್ಗದವರು ಮಾತೃ ಇಲಾಖೆಯಾದ ಕ.ರಾ.ರ.ಸಾ.ನಿಗಮದಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಪಟ್ಟಿ–2

ಕ್ರಮ ಸಂಖ್ಯೆ	ಪರಿಚ್ಛೇದ	31–03–20 ರಂತೆ ಒಟ್ಟು ನೌಕರರು	ನೌಕರರ ವರ್ಗೀಕರಣ		31–03–20 ರಂತೆ ಮಹಿಳಾ ನೌಕರರು	31–03–19 ರಂತೆ ಕಾರ್ಮಿಕರ ಸಂಖ್ಯೆ	ನೌಕರರ ವರ್ಗೀಕರಣ		31–03–19 ರಂತೆ ಮಹಿಳಾ ನೌಕರರು
			ಪ.ಜಾ.	ಪ.ಪಂ.			ಪ.ಜಾ.	ಪ.ಪಂ.	
ಅ.	ಖಾಯಂ ಉದ್ಯೋಗಿಗಳು								
1	ದರ್ಜೆ–1 ಮತ್ತು 2 ರ ಅಧಿಕಾರಿಗಳು (ಅ)	154	28	05	43	140	12	06	36

2	**ದರ್ಜೆ–3 ಮತ್ತು 4 ರ ಸಿಬ್ಬಂದಿಗಳು**								
	ಅ. ಚಾಲಕರು/ಚಾಲಕ–ಕಂ.ನಿರ್ವಾಹಕರು	20630	3878	768	07	20685	3893	770	07
	ಆ. ನಿರ್ವಾಹಕರು	4597	978	204	1392	4929	1070	206	1395
	ಇ. ಸಂಚಾರ ಮೇಲ್ವಿಚಾರಕರು	774	150	30	68	614	135	28	69
	ಈ. ತಾಂತ್ರಿಕ	2875	589	106	613	2949	646	92	618
	ಉ. ಆಡಳಿತ	1347	247	48	486	1383	238	46	482
	ಒಟ್ಟು (ದರ್ಜೆ–3 ಮತ್ತು 4) (ಆ)	**30223**	**5842**	**1156**	**2566**	**30560**	**5982**	**1142**	**2571**
	ಒಟ್ಟು ಖಾಯಂ ಉದ್ಯೋಗಿಗಳು (ಅ+ಅ)	**30377**	**5870**	**1161**	**2609**	**30700**	**5994**	**1148**	**2607**
ಆ.	ಹಂಗಾಮಿ/ತರಬೇತಿ ಉದ್ಯೋಗಿಗಳು								
1.	ಚಾಲಕರು/ಚಾಲಕರು–ಕಂ–ನಿರ್ವಾಹಕರು	1176	317	95	0	1477	322	90	0
2.	ನಿರ್ವಾಹಕರು	498	103	26	117	484	102	24	116
3.	ತಾಂತ್ರಿಕ	843	182	46	45	854	180	44	50
4	ಸಂಚಾರ ಮೇಲ್ವಿಚಾರಕರು	33	25	14	10	31	7	02	11
5	ಇತರೆ	365	66	17	163	332	71	16	148
	ಒಟ್ಟು (ಇ)	**2915**	**693**	**198**	**335**	**3178**	**682**	**176**	**325**
	ಒಟ್ಟು (ಅ+ಆ+ಇ)	**33292**	**6563**	**1359**	**2944**	**33878**	**6676**	**1324**	**2932**

2019–20ನೇ ಸಾಲಿನಲ್ಲಿ 6563 ಪರಿಶಿಷ್ಟ ಜಾತಿ ಮತ್ತು 1359 ಪರಿಶಿಷ್ಟ ಪಂಗಡಕ್ಕೆ ಸೇರಿದ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ, 2018–19ನೇ ಸಾಲಿನಲ್ಲಿ 6676 ಪರಿಶಿಷ್ಟ ಜಾತಿ ಮತ್ತು 1324 ಪರಿಶಿಷ್ಟ ಪಂಗಡಕ್ಕೆ ಸೇರಿದ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದರು. ಪ್ರಸಕ್ತ ಸಾಲಿನ ಪರಿಶಿಷ್ಟ ಜಾತಿಯ ಸಿಬ್ಬಂದಿಗಳ ಶೇಕಡ ಪ್ರಮಾಣ 19.7 ಆಗಿದ್ದು, ಹಿಂದಿನ ಸಾಲಿನಲ್ಲೂ ಶೇಕಡ 19.7 ಇರುತ್ತದೆ ಮತ್ತು ಪರಿಶಿಷ್ಟ ಪಂಗಡದ ಸಿಬ್ಬಂದಿಗಳ ಶೇಕಡ ಪ್ರಮಾಣ 4.01 ಆಗಿದ್ದು, ಹಿಂದಿನ ಸಾಲಿನಲ್ಲಿ ಶೇಕಡ 3.9 ಆಗಿರುತ್ತದೆ.

ಸಂಸ್ಥೆಯಲ್ಲಿ ದರ್ಜೆ–1 ಮತ್ತು ದರ್ಜೆ–2 ಅಧಿಕಾರಿಗಳ ಬಲವು ಕಳೆದ ಸಾಲಿನಲ್ಲಿ 140 ಇದ್ದು, ಈ ವರದಿಯ ಸಾಲಿನ ಕೊನೆಯ ದಿನಾಂಕದಂತೆ 154 ಇರುತ್ತದೆ. ಅಧಿಕಾರಿಗಳು ಹಾಗೂ ಖಾಯಂ ಸಿಬ್ಬಂದಿ ಅನುಪಾತವು ಪ್ರಸಕ್ತ ಸಾಲಿನಲ್ಲಿ 1:215 ಇದ್ದು, ಇದು 2018–19ನೇ ಸಾಲಿನಲ್ಲಿ 1:241 ಆಗಿತ್ತು.

2.3 ಮಹಿಳಾ ಸಿಬ್ಬಂದಿಗಳು:

2019–20ನೇ ಸಾಲಿನಲ್ಲಿ 2944 ಮಹಿಳಾ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದು, ಆ ಪೈಕಿ 1392 ನಿರ್ವಾಹಕರು, 7 ಚಾಲಕ ಕಂ ನಿರ್ವಾಹಕರು, 658 ತಾಂತ್ರಿಕ ಮತ್ತು 887 ಇತರೆ ಸಿಬ್ಬಂದಿಗಳಾಗಿರುತ್ತಾರೆ. ಕಳೆದ ವರ್ಷದ ಅವಧಿಯಲ್ಲಿ 2932 ಮಹಿಳಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದರು.

2.4 ಸಿಬ್ಬಂದಿ ಅನುಪಾತ

ಪ್ರಸಕ್ತ ವರ್ಷದಲ್ಲಿ ಸಂಸ್ಥೆಯ ಸಿಬ್ಬಂದಿ ಅನುಪಾತ ಪ್ರತಿ ಅನುಸೂಚಿಗೆ 5.41 ರಷ್ಟಿದ್ದು, ಕಳೆದ ವರ್ಷದಲ್ಲಿ 5.47ರಷ್ಟಿತ್ತು. ಪ್ರಸ್ತುತ ವಾರ್ಷಿಕ ವರದಿಯನ್ವಯ ಕೇಂದ್ರ ಕಚೇರಿ ಮತ್ತು ಕೇಂದ್ರೀಯ ಕಾರ್ಯಗಾರ ಹೊರತು ಪಡಿಸಿ ಘಟಕ, ಬಸ್ ನಿಲ್ದಾಣ, ಟಿಟಿಐಎಸಿ ಮತ್ತು ಇನ್ನಿತರೆ ಸ್ಥಳಗಳಲ್ಲಿ ಒಟ್ಟು 31964 ಸಿಬ್ಬಂದಿಗಳು 6159 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು

ನಿಯೋಜಿತರಾಗಿರುತ್ತಾರೆ. ಕೇಂದ್ರ ಕಛೇರಿ ಮತ್ತು ಕೇಂದ್ರೀಯ ಕಾರ್ಯಾಗಾರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ಪ್ರತಿ ಅನುಸೂಚಿಗೆ ಸದರಿ ಸಿಬ್ಬಂದಿ ಪ್ರಮಾಣವು ಕ್ರಮವಾಗಿ 1328 ಮತ್ತು 0.22 ಆಗಿದ್ದು, ಇದು ಹಿಂದಿನ ವರ್ಷದಲ್ಲಿ 1214 ಮತ್ತು 0.20 ಆಗಿತ್ತು.

2.5 ಮೊಬೈಲ್ ಮತ್ತು ಸ್ಥಿರ ದೂರವಾಣಿಗಳು:

ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಪ್ರಸಕ್ತ ವರ್ಷಾಂತ್ಯಕ್ಕೆ 333 ಮೊಬೈಲ್, 133 ಸ್ಥಿರ ದೂರವಾಣಿಗಳು, ಒಂದು ಪಿ.ಆರ್.ಐ. ಲೈನ್ ಮತ್ತು ಕರೆ ಕೇಂದ್ರದ ಸಹಾಯವಾಣಿಗಾಗಿ ಒಂದು ಉಚಿತ ದೂರವಾಣಿ ಲೈನನ್ನು ಒದಗಿಸಲಾಗಿದೆ.

2.6 ನೇಮಕಾತಿ ಪ್ರಕ್ರಿಯೆ:

2019–20ನೇ ಸಾಲಿನಲ್ಲಿ ಸಂಸ್ಥೆಯಲ್ಲಿ ಯಾವುದೇ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಗೊಳಿಸಿರುವುದಿಲ್ಲ. 2019–20ನೇ ಸಾಲಿನಲ್ಲಿ ಅನುಕಂಪದ ಆಧಾರದ ಮೇಲೆ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಕ್ರಮ ಸಂಖ್ಯೆ	ಹುದ್ದೆ	ಹುದ್ದೆಗಳ ಸಂಖ್ಯೆ
1	ಕುಶಲಕರ್ಮಿ	05
2	ತಾಂತ್ರಿಕ ಸಹಾಯಕ	01
3	ಕಿರಿಯ ಸಹಾಯಕ ಕಂ ಡೇಟಾ ಎಂಟ್ರಿ ಆಪರೇಟರ್	46
4	ನಿರ್ವಾಹಕ	02
	ಒಟ್ಟು	**54**

2.7 ಮುಂಬಡ್ತಿ ಪ್ರಕ್ರಿಯೆ:

ಕ್ರ.ಸಂ.	ಹುದ್ದೆ	ಬಡ್ತಿ ಹುದ್ದೆಗಳ ವಿಂಗಡನೆ		ಒಟ್ಟು ಬಡ್ತಿಗಳು
		ಮಿಕ್ಕುಳಿದ ವೃಂದ	ಹೈ–ಕಾ (371–ಜೆ)	
1	ಸಹಾಯಕ	43	06	49
2	ಲೆಕ್ಕಪತ್ರ ಸಹಾಯಕ	14	02	16
3	ಅಂಕಿ–ಅಂಶ ಸಹಾಯಕ	15	0	15
4	ಸಹಾಯಕ ಉಗ್ರಾಣ ಪಾಲಕ	14	0	14
5	ಕಿರಿಯ ಶೀಘ್ರಲಿಪಿಗಾರ	01	–	01
6	ಭದ್ರತಾ ಹವಾಲ್ದಾರ್	12	07	19
7	ಸಂಚಾರ ನಿಯಂತ್ರಕ	247	09	256
8	ಸಹಾಯಕ ಸಂಚಾರ ನಿರೀಕ್ಷಕ	61	12	73
9	ಹಿರಿಯ ಚಾಲಕ	368	0	368
10	ಸಹಾಯಕ ಕುಶಲಕರ್ಮಿ	804	31	835
ಒಟ್ಟು		1579	67	1646

2.7 ಅಪರಾಧ ಮತ್ತು ಇತರೆ ಪ್ರಕರಣಗಳ ವಿಲೇವಾರಿ:

ಪ್ರಸಕ್ತ ಸಾಲಿನ ಅಪರಾಧ/ಗೈರುಹಾಜರಿ ಪ್ರಕರಣಗಳ ಸ್ವೀಕೃತಿ ಮತ್ತು ವಿಲೇವಾರಿ ವಿವರಗಳನ್ನು ಕ್ರಮವಾಗಿ ಪಟ್ಟಿ 3(ಅ) ಮತ್ತು 3(ಆ) ರಲ್ಲಿ ನೀಡಲಾಗಿದೆ.

ಕ್ರ.ಸಂ.	ವಿವರಗಳು	ರಂತೆ	
		31–03–2020	31–03–2019
1	ವರ್ಷದ ಮೊದಲನೆ ದಿನದಂತೆ ಬಾಕಿ ಇದ್ದ ಪ್ರಕರಣಗಳು	1587	2609
2	ವರ್ಷದಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳು		
	ಅ) ನಿರ್ವಾಹಕರು	580	577
	ಆ) ಚಾಲಕ ಕಂ ನಿರ್ವಾಹಕರು	1091	1272
	ಇ) ಚಾಲಕರು	561	787
	ಈ) ಇತರೆ ಸಿಬ್ಬಂದಿ	1836	2594
	ಒಟ್ಟು (ಅ ರಿಂದ ಈ ವರೆಗೆ)	4068	5230
	ಒಟ್ಟು 1 ಮತ್ತು 2	5655	7839
3	ಇತ್ಯರ್ಥವಾದ ಪ್ರಕರಣಗಳು		
	ಅ)ವಜಾ/ಹಿಂತೆಗೆದುಕೊಳ್ಳಲಾದ/ತೆಗೆದುಹಾಕಲಾದ ಪ್ರಕರಣಗಳು	16	16
	ಆ) ಅಮಾನತ್ತು ಪ್ರಕರಣಗಳು(ನಿರ್ದಿಷ್ಟ ಶಿಕ್ಷೆಯಾಗಿ)	0	0
	ಇ) ದಂಡ ವಿಧಿಸಲಾದ ಪ್ರಕರಣಗಳು	2063	3657
	ಈ) ಇತರೆ ಶಿಕ್ಷೆಗಳು	1380	2579
	ಒಟ್ಟು (ಅ ರಿಂದ ಈ ವರೆಗೆ)	3459	6252
4	ವರ್ಷದ ಕಡೆಯ ದಿನ 31.03.2020ರಂತೆ ಬಾಕಿ ಇದ್ದ ಪ್ರಕರಣಗಳು	2196	1587

ಗೈರುಹಾಜರಿ ಪ್ರಕರಣಗಳು – ಪಟ್ಟಿ 3(ಆ)

ಕ್ರ.ಸಂ.	ವಿವರಗಳು	ರಂತೆ	
		31–03–2020	**31–03–2019**
1	ವರ್ಷದ ಮೊದಲನೆ ದಿನದಂತೆ ಬಾಕಿ ಇದ್ದ ಪ್ರಕರಣಗಳು	1150	1689
2	ವರ್ಷದಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳು		
	ಅ) ನಿರ್ವಾಹಕರು	265	243
	ಆ) ಚಾಲಕ ಕಂ ನಿರ್ವಾಹಕರು	336	401
	ಇ) ಚಾಲಕರು	560	603
	ಈ) ಇತರೆ ಸಿಬ್ಬಂದಿ	329	291
	ಒಟ್ಟು (ಅ ರಿಂದ ಈ ವರೆಗೆ)	1490	1538
	ಒಟ್ಟು 1 ಮತ್ತು 2	2640	3227

3	ಇತ್ಯರ್ಥವಾದ ಪ್ರಕರಣಗಳು		
	ಅ) ವಜಾ/ಹಿಂತೆಗೆದುಕೊಳ್ಳಲಾದ/ತೆಗೆದುಹಾಕಲಾದ ಪ್ರಕರಣಗಳು	219	319
	ಆ) ಅಮಾನತ್ತು ಪ್ರಕರಣಗಳು(ನಿರ್ದಿಷ್ಟ ಶಿಕ್ಷೆಯಾಗಿ)	0	0
	ಇ) ದಂಡ ವಿಧಿಸಲಾದ ಪ್ರಕರಣಗಳು	389	532
	ಈ) ಇತರೆ ಶಿಕ್ಷೆಗಳು	639	1226
	ಒಟ್ಟು (ಅ ರಿಂದ ಈ ವರೆಗೆ)	1247	2077
4	ವರ್ಷದ ಕಡೆಯ ದಿನ 31.03.2020ರಂತೆ ಬಾಕಿ ಇದ್ದ ಪ್ರಕರಣಗಳು	1393	1150

ಅಪಘಾತ ಪ್ರಕರಣಗಳು – ಪಟ್ಟಿ 3(ಇ)

ಕ್ರ.ಸಂ.	ವಿವರಗಳು	ರಂತೆ	
		2019–20	2018–19
1	ವರ್ಷದ ಮೊದಲನೆ ದಿನದಂತೆ ಬಾಕಿ ಇದ್ದ ಪ್ರಕರಣಗಳು	325	321
2	ವರ್ಷದಲ್ಲಿ ಸ್ವೀಕರಿಸಿದ ಪ್ರಕರಣಗಳು		
	ಅ) ಚಾಲಕರು	197	245
	ಆ) ಚಾಲಕ ಕಂ ನಿರ್ವಾಹಕರು	27	41
	ಒಟ್ಟು (ಅ ರಿಂದ ಆ ವರೆಗೆ)	224	286
	ಒಟ್ಟು 1 ಮತ್ತು 2	549	607
3	ಇತರೆ ವಿಭಾಗಗಳಿಂದ ವರ್ಗಾಯಿಸಲ್ಪಟ್ಟ ಪ್ರಕರಣಗಳು	1	4
	ಒಟ್ಟು (2+3)	550	611
4	ಇತ್ಯರ್ಥವಾದ ಪ್ರಕರಣಗಳು		
	ಅ) ವಜಾ/ಹಿಂತೆಗೆದುಕೊಳ್ಳಲಾದ/ತೆಗೆದುಹಾಕಲಾದ ಪ್ರಕರಣಗಳು	10	0
	ಆ) ಅಮಾನತ್ತು ಪ್ರಕರಣಗಳು(ನಿರ್ದಿಷ್ಟ ಶಿಕ್ಷೆಯಾಗಿ)	0	0
	ಇ) ದಂಡ ವಿಧಿಸಲಾದ ಪ್ರಕರಣಗಳು	42	44
	ಈ) ಇತರೆ ಶಿಕ್ಷೆಗಳು	211	234
	ಒಟ್ಟು (ಅ ರಿಂದ ಈ ವರೆಗೆ)	254	278
	ಇತರೆ ವಿಭಾಗಗಳಿಗೆ ವರ್ಗಾವಣೆಯಾದ ಪ್ರಕರಣಗಳು	8	8
5	ವರ್ಷದ ಕಡೆಯ ದಿನದಂತೆ ಬಾಕಿ ಇದ್ದ ಪ್ರಕರಣಗಳು	288	325

*****

ಪರಿಚ್ಛೇದ – 3

ಕಾರ್ಯಾಚರಣೆ

3.1 ರಾಷ್ಟ್ರೀಕರಣ ಯೋಜನೆ:

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯಾಚರಣೆ ವ್ಯಾಪ್ತಿಯ ಎಲ್ಲಾ ಪ್ರದೇಶಗಳು ಸಂಪೂರ್ಣ ರಾಷ್ಟ್ರೀಕರಣಗೊಂಡಿರುತ್ತವೆ.

3.2 ಹೊಸ ಘಟಕಗಳನ್ನು ಪ್ರಾರಂಭಿಸುವಿಕೆ :

ಪ್ರಸಕ್ತ ಸಾಲಿನಲ್ಲಿ ಯಾವುದೇ ನೂತನ ಘಟಕಗಳನ್ನು ಪ್ರಾರಂಭಿಸಿರುವುದಿಲ್ಲ. ಸಂಸ್ಥೆಯಲ್ಲಿ 31.03.2020ರಂತೆ 45 ಘಟಕಗಳು ಕಾರ್ಯಾಚರಣೆಯಲ್ಲಿರುತ್ತವೆ.

3.3 ಮಾರ್ಗಗಳು ಮತ್ತು ಮಾರ್ಗ ಕಿಲೋಮೀಟರುಗಳು ಹಾಗೂ ಅನುಸೂಚಿಗಳು ಮತ್ತು ಅನುಸೂಚಿ ಕಿ.ಮೀ.ಗಳು:

ದಿನಾಂಕ: 31.03.2020 ರಂತೆ ಸಂಸ್ಥೆಯು 2196 ಮಾರ್ಗಗಳಲ್ಲಿ 6159 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಿದ್ದು, ಕಳೆದ ವರ್ಷದಲ್ಲಿ 2263 ಮಾರ್ಗಗಳಲ್ಲಿ 6190 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗಿರುತ್ತದೆ. ಪ್ರಸಕ್ತ ವರ್ಷದಲ್ಲಿ ಕಾರ್ಯಾಚರಣೆಯಾದ ಮಾರ್ಗದ ಒಟ್ಟು ಉದ್ದ 56499.4 ಕಿ.ಮೀ.ಗಳು ಹಾಗೂ ಸರಾಸರಿ ಮಾರ್ಗದ ಉದ್ದವು 25.73 ಕಿ.ಮೀಗಳಾಗಿರುತ್ತದೆ. ದಿನಾಂಕ: 31.03.2020 ರಂತೆ ಇದ್ದ ಮಾರ್ಗಗಳು, ಮಾರ್ಗ ಕಿಲೋಮೀಟರುಗಳು, ಅನುಸೂಚಿಗಳು ಮತ್ತು ಅನುಸೂಚಿ ಕಿಲೋಮೀಟರ್‌ಗಳ ವಿವರಗಳನ್ನು ದಿನಾಂಕ 31.03.2019 ರ ವಸ್ತುಸ್ಥಿತಿಗೆ ಹೋಲಿಸಿದಂತೆ ಈ ಕೆಳಕಂಡ ಪಟ್ಟಿ–4 ರಲ್ಲಿ ನೀಡಲಾಗಿದೆ.

ಪಟ್ಟಿ–4

ಕ್ರಮ ಸಂಖ್ಯೆ	ವಿವರಗಳು	31.03.2020 ಕ್ಕೆ ಕೊನೆಗೊಂಡಂತೆ	31.03.2019 ಕ್ಕೆ ಕೊನೆಗೊಂಡಂತೆ
1	ಮಾರ್ಗಗಳ ಸಂಖ್ಯೆ	2196	2263
2	ಮಾರ್ಗಗಳ ಕಿಲೋಮೀಟರ್‌ಗಳು	56499.4	56919.9
3	ಮಾರ್ಗದ ಸರಾಸರಿ ಉದ್ದ ಕಿ.ಮೀ.ಗಳಲ್ಲಿ	25.73	25.15
4	ಅನುಸೂಚಿ ಸಂಖ್ಯೆ	6159	6190
5	ದಿನವಹಿ ಅನುಸೂಚಿ ಕಿ.ಮೀ.ಗಳು	1304511	1325775

ದಿನಾಂಕ: 31.03.2019 ರಂತೆ 6190 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಿದ್ದು, ದಿನಾಂಕ: 31.03.2020 ರಂತೆ 6159 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗಿರುತ್ತದೆ. ಪ್ರತಿದಿನ ಕಾರ್ಯಾಚರಣೆಗೊಳಿಸಲು ನಿಗಧಿಪಡಿಸಿದ್ದ ಅನುಸೂಚಿ ಕಿ.ಮೀ.ಗಳ ಗುರಿ ದಿನಾಂಕ: 31.03.2019 ರಂತೆ 1325775 ಕಿ.ಮೀ ಗಳಿದ್ದು, ದಿನಾಂಕ 31.03.2020 ರಂತೆ 1304511 ಕಿ.ಮೀಗಳಾಗಿರುತ್ತದೆ.

3.4 ಸಾರಿಗೆ ಸೇವೆಗಳು:

ಬೆಂಗಳೂರು ನಗರ ಮತ್ತು ಹೊರವಲಯ ಪ್ರದೇಶದ ಎಲ್ಲಾ ವರ್ಗದ ಪ್ರಯಾಣಿಕರಿಗೆ ದಕ್ಷ, ಸಮರ್ಥ, ಸುರಕ್ಷಿತ, ವಿಶ್ವಾಸಾರ್ಹ ಮತ್ತು ನಿಗದಿತ ಸಾರಿಗೆ ಸೇವೆಯನ್ನು ಒದಗಿಸುವುದು ಸಂಸ್ಥೆಯ ಧ್ಯೇಯವಾಗಿರುತ್ತದೆ. ಸಂಸ್ಥೆಯ ಸಾರಿಗೆ ಸೇವೆಗಳನ್ನು ನಗರ ಮತ್ತು ನಗರ ಹೊರವಲಯ ಪ್ರದೇಶಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಿಂದ 25.0 ಕಿ.ಮೀ.ವರೆಗೆ ಬೆಂ.ಮ.ಸಾ.ಸಂಸ್ಥೆಯ ಸೇವೆಗಳನ್ನು ಕಾರ್ಯಾಚರಣೆಗೊಳಿಸುತ್ತಿದೆ.

ಸಂಸ್ಥೆಯು ಪ್ರಯಾಣಿಕರಿಗೆ ಮೌಲ್ಯಾಧಾರಿತ ಸೇವೆಯನ್ನು ಒದಗಿಸುವ ಸಲುವಾಗಿ ಹವಾನಿಯಂತ್ರಣ ರಹಿತ ಹಾಗೂ ಹವಾನಿಯಂತ್ರಿತ ಸೇವೆಗಳನ್ನು ಕಾರ್ಯಾಚರಣೆಗೊಳಿಸುತ್ತಿದೆ. ಸಂಸ್ಥೆಯು ತನ್ನ ಕಾರ್ಯಾಚರಣೆಯನ್ನು 6 ವಲಯಗಳನ್ನಾಗಿ

ವಿಂಗಡಿಸಿದ್ದು, ದಿನಾಂಕ: 31.03.2020ರಂತೆ ವಲಯವಾರು ಅನುಸೂಚಿಗಳು, ಅನುಸೂಚಿ ಕಿ.ಮೀಗಳು ಹಾಗೂ ಸುತ್ತುವಳಿಗಳ ಕಾರ್ಯಾಚರಣೆಯ ವಿವರಗಳನ್ನು ಈ ಕೆಳಕಂಡ ಪಟ್ಟಿ–5 ರಲ್ಲಿ ನೀಡಲಾಗಿದೆ.

ಪಟ್ಟಿ–5

ವಲಯ	ಸಾಮಾನ್ಯ			ಹವಾನಿಯಂತ್ರಿತ(ವಜ್ರ, ವಾಯುವಜ್ರ & ಕರೋನಾ)			ಒಟ್ಟು		
	ಅನುಸೂಚಿಗಳ ಸಂಖ್ಯೆ	ಕಿ.ಮೀ	ಸುತ್ತುವಳಿಗಳು	ಅನುಸೂಚಿಗಳ ಸಂಖ್ಯೆ	ಕಿ.ಮೀ	ಸುತ್ತುವಳಿಗಳು	ಅನುಸೂಚಿಗಳ ಸಂಖ್ಯೆ	ಕಿ.ಮೀ	ಸುತ್ತುವಳಿಗಳು
ಪೂರ್ವ	1974	202966	9868	0	0	0	1974	202966	9868
ಪಶ್ಚಿಮ	1095	235175	12979	0	0	0	1095	235175	12979
ಉತ್ತರ	1367	296947	16146	0	0	0	1367	296947	16146
ದಕ್ಷಿಣ	1093	218091	13201	0	0	0	1093	218091	13201
ಈಶಾನ್ಯ	870	191180	9167	0	0	0	870	191180	9167
ಕೇಂದ್ರೀಯ	0	0	0	760	160152	5952	760	160152	5952
ಒಟ್ಟು	**5399**	**1144359**	**61361**	**760**	**160152**	**5952**	**6159**	**1304511**	**67313**
% ವಾರು	**87.7**	**87.7**	**91.2**	**12.3**	**12.3**	**8.8**	**100.0**	**100.0**	**100.0**

3.5 ಪ್ರಯಾಣ ದರಗಳು:

2019–20ನೇ ಸಾಲಿನಲ್ಲಿ ಸಂಸ್ಥೆಯು ಪ್ರಯಾಣ ದರಗಳನ್ನು ಪರಿಷ್ಕರಿಸಿರುವುದಿಲ್ಲ.

3.6 ಸಂಸ್ಥೆಯಲ್ಲಿ ಆಚರಣೆಯಲ್ಲಿರುವ ವಿವಿಧ ಸೇವೆಗಳ ವಿವರ:

ಅಟಲ್ ಸಾರಿಗೆ :

ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದ ಜನತೆಯ ಅನುಕೂಲಕ್ಕಾಗಿ ಅತ್ಯಂತ ಕಡಿಮೆ ದರಗಳಲ್ಲಿ ಸಾರಿಗೆ ಸೌಲಭ್ಯ ಒದಗಿಸುವ ಸಲುವಾಗಿ ಅಟಲ್ ಸಾರಿಗೆ ಎಂಬ ಸಾರಿಗೆಯನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಸೇವೆಗಳ ದರವು ಸಾಮಾನ್ಯ ಸೇವೆಯ ದರದ ಅರ್ಧದಷ್ಟಿರುತ್ತದೆ.

ರಾತ್ರಿ ಸೇವೆಗಳು :

ನಗರದಲ್ಲಿ ತಡರಾತ್ರಿ ಹಾಗೂ ಮುಂಜಾನೆ ಪ್ರಯಾಣಿಸುವ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ರಾತ್ರಿ ಸೇವೆಗಳನ್ನು ಸಂಸ್ಥೆಯು ಕಾರ್ಯಾಚರಣೆ ಮಾಡುತ್ತಿದೆ. ಈ ಸೇವೆಗಳನ್ನು ಕೆಂಪೇಗೌಡ ಬಸ್ ನಿಲ್ದಾಣದಿಂದ ನಗರ ಹಾಗೂ ಸುತ್ತಮುತ್ತಲಿನ ಪ್ರಮುಖ ಬಡಾವಣೆಗಳಿಗೆ ಆಚರಣೆ ಮಾಡಲಾಗುತ್ತಿದೆ. ರಾತ್ರಿ 11.00 ಗಂಟೆವರೆಗೆ ಹಾಗೂ ಬೆಳಗ್ಗೆ 04.00 ಗಂಟೆಯಿಂದ ಈ ಸೇವೆಗಳನ್ನು ಆಚರಣೆ ಮಾಡಲಾಗುತ್ತಿದೆ. ಈ ಸೇವೆಯಲ್ಲಿ ಬಸ್ ಪ್ರಯಾಣ ದರವು ಸಾಮಾನ್ಯ ದರಕ್ಕಿಂತ ಅರ್ಧಪಟ್ಟು ಹೆಚ್ಚಿರುತ್ತದೆ.

ಮೆಟ್ರೋ ಫೀಡರ್ ಸೇವೆಗಳು :

ಸಂಸ್ಥೆಯು ಮೆಟ್ರೋ ರೈಲು ಸೇವೆಗೆ ಸಂಪರ್ಕ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿದ್ದು, ಬೆಂಗಳೂರಿನ ವಿವಿಧ ಪ್ರದೇಶಗಳಿಂದ ಮೆಟ್ರೋ ರೈಲು ನಿಲ್ದಾಣಕ್ಕೆ ಹೆಚ್ಚುವರಿ ಸುತ್ತುವಳಿಯನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ ಹಾಗೂ ಆದ್ಯತೆಯ ಮೇರೆಗೆ ಇನ್ನೂ ಹೆಚ್ಚಿನ ಮೆಟ್ರೋ ರೈಲು ಸಂಪರ್ಕ ಸೇವೆಗಳನ್ನು ಆಚರಣೆಗೊಳಿಸಲು ಯೋಜಿಸಲಾಗಿದೆ.

ಬೆಂಗಳೂರು ರೌಂಡ್ಸ್:

ವಿಶೇಷ ಮಾದರಿಯಲ್ಲಿ ರಚಿಸಿರುವ ಹವಾನಿಯಂತ್ರಿತ ಬಸ್ಸನ್ನು ಬೆಂಗಳೂರು ನಗರ ವೀಕ್ಷಿಸಲಿಚ್ಚಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಕೆಂಪೇಗೌಡ ಬಸ್ ನಿಲ್ದಾಣದಿಂದ ಆಚರಣೆ ಮಾಡಲಾಗುತ್ತಿದೆ. ಈ ಸೇವೆಗಳಲ್ಲಿ ಪ್ರಯಾಣಿಸಲು ಕರಾರಸಾನಿಗಮದ ಆನ್‌ಲೈನ್ ಮುಂಗಡ ಟಿಕೇಟ್ ಕಾಯ್ದಿರಿಸುವಿಕೆಯಲ್ಲಿ ಟಿಕೇಟನ್ನು ಕಾಯ್ದಿರಿಸಬಹುದಾಗಿರುತ್ತದೆ.

ವಜ್ರ (ವೋಲ್ವೋ) ಸೇವೆಗಳು:

ವಜ್ರ(ವೋಲ್ವೋ) ಸೇವೆಗಳನ್ನು 2006 ರಲ್ಲಿ ಪರಿಚಯಿಸಲಾಗಿದ್ದು, ಪ್ರಸ್ತುತ 658 ಉತ್ತಮ ಗುಣಮಟ್ಟದ ಹವಾನಿಯಂತ್ರಣ ಪ್ರೀಮಿಯಂ ಸೇವೆಗಳು ಆಚರಣೆಯಲ್ಲಿರುತ್ತವೆ. ಇವುಗಳು ಹೆಚ್ಚಿನ ಆರಾಮದಾಯಕ, ಮಾಲಿನ್ಯ ಹಾಗೂ ಶಬ್ಧರಹಿತವಾದ್ದರಿಂದ ಬೆಂಮಸಾಸಂಸ್ಥೆಯಲ್ಲಿ ಆಚರಣೆಯಲ್ಲಿರುವ ಸೇವೆಗಳಲ್ಲಿಯೇ ಅತ್ಯುತ್ತಮವಾದದ್ದಾಗಿರುತ್ತವೆ. ಇವುಗಳಲ್ಲಿ ಅಂಗವಿಕಲ ಪ್ರಯಾಣಿಕರು ಇಳಿಯಲು ಅನುಕೂಲವಾಗುವಂತೆ ಕೆಳಹಂತದ ಮೆಟ್ಟಿಲು ವ್ಯವಸ್ಥೆಯ ತಾಂತ್ರಿಕತೆಯನ್ನು ಅಳವಡಿಸಲಾಗಿರುತ್ತದೆ. ಸಾಮಾನ್ಯ ಹವಾನಿಯಂತ್ರಣರಹಿತ ಸೇವೆಗಳ ದರಗಳಿಗಿಂತ ಹೆಚ್ಚಿನ ದರದಲ್ಲಿ ಈ ಸೇವೆಗಳು ಆಚರಣೆಯಲ್ಲಿರುತ್ತವೆ.

ವಾಯುವಜ್ರ (ವಿಮಾನ ನಿಲ್ದಾಣ ಮೀಸಲು ಸೇವೆಗಳು):

ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುವ ಪ್ರಯಾಣಿಕರಿಗಾಗಿ ಸಾರ್ವಜನಿಕ ಸಾರಿಗೆ ವ್ಯಾಪ್ತಿಯಿಂದ ಹೊರಗಿನ ವಲಯದಲ್ಲಿ ವೈಯಕ್ತಿಕ ಸಾರಿಗೆ ಮತ್ತು ಅರೆವೈಯಕ್ತಿಕ ಸಾರಿಗೆಗ ಬದಲಿ ಸಾರಿಗೆಯಾಗಿ ಉತ್ತಮ ಗುಣಮಟ್ಟದ ಸಾರಿಗೆ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ವಾಯುವಜ್ರ ಸೇವೆಗಳನ್ನು 2008ರಲ್ಲಿ ಪರಿಚಯಿಸಲಾಗಿರುತ್ತದೆ. ಪ್ರಸ್ತುತ 106 ವಾಯುವಜ್ರ ಸೇವೆಗಳನ್ನು 16 ಮಾರ್ಗಗಳಲ್ಲಿ ನಗರದ ಪ್ರತಿಷ್ಠಿತ ಸ್ಥಳಗಳಿಂದ ಬೆಂಗಳೂರು ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 24x7 ಮಾದರಿಯಲ್ಲಿ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಈ ಸೇವೆಗಳು ಹೆಚ್ಚಿನ ಮೆಚ್ಚುಗೆ ಮತ್ತು ಜನಮನ್ನಣೆಗಳಿಸಿವೆ.

3.6 ಕಾರ್ಯಾಚರಣೆಯಲ್ಲಿನ ಪ್ರಗತಿ:

ಸಂಸ್ಥೆಯ ಕಾರ್ಯಾಚರಣೆಯ ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಕ್ರಮಿಸಿದ ಕಿಲೋಮೀಟರುಗಳು:

2019–20ನೇ ಸಾಲಿನ ಸಾಧನೆಯನ್ನು 2018–19ನೇ ಸಾಲಿನ ಸಾಧನೆಗೆ ಹೋಲಿಕೆ ಮಾಡಿದ ಪರಿಣಾಮಕಾರಿ ಕಿಲೋಮೀಟರುಗಳು, ಆದಾಯ ರಹಿತ ಕಿಲೋಮೀಟರುಗಳು ಹಾಗೂ ಒಟ್ಟು ಕಾರ್ಯಾಚರಣೆಯ ಕಿ.ಮೀ.ಗಳನ್ನು ದಿನನಿತ್ಯ ಕಾರ್ಯಾಚರಣೆಗೊಳಿಸಿದ ಸರಾಸರಿ ಕಿಲೋಮೀಟರುಗಳ ವಿವರಗಳೊಂದಿಗೆ ಈ ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ.

ಪಟ್ಟಿ–6

ಕ್ರಮ ಸಂಖ್ಯೆ	ವಿವರಗಳು	ಕಾರ್ಯಾಚರಣೆ ಅಂಶಗಳು		ಹಿಂದಿನ ವರ್ಷಕ್ಕೂ ಹಾಗೂ ಪ್ರಸಕ್ತ ವರ್ಷಕ್ಕೂ ಇರುವ ವ್ಯತ್ಯಾಸ	
		2019–20	2018–19	ವ್ಯತ್ಯಾಸ	ಶೇಕಡಾವಾರು
1	ಕಾರ್ಯಾಚರಣೆಗೊಳಿಸಿದ ಸರಾಸರಿ ಅನುಸೂಚಿಗಳು	5601.2	5636.8	-35.6	-0.6
	ಅ. ಪರಿಣಾಮಕಾರಿ ಕಿಲೋಮೀಟರುಗಳು (ಲಕ್ಷಗಳಲ್ಲಿ)	4065.51	4152.85	-87.34	-2.1
	ಆ. ಆದಾಯ ರಹಿತ ಕಿಲೋಮೀಟರುಗಳು (ಲಕ್ಷಗಳಲ್ಲಿ)	139.66	135.71	3.95	2.9

	ಇ. ಒಟ್ಟು ಕಿಲೋಮೀಟರುಗಳು (ಲಕ್ಷಗಳಲ್ಲಿ)	4205.17	4288.56	-83.39	-1.9
2	ಪರಿಣಾಮಕಾರಿ ಕಿ.ಮೀ.ಗಳಿಗೆ ಆದಾಯ ರಹಿತ ಕಿ.ಮೀ.ಗಳ ಶೇಕಡ ಪ್ರಮಾಣ	3.4	3.3	0.1	3.0
3	ದಿನನಿತ್ಯ ಕ್ರಮಿಸಿದ ಸರಾಸರಿ ಕಿ.ಮೀ.ಗಳು (ಲಕ್ಷಗಳಲ್ಲಿ)	11.10	11.38	–0.28	–2.4

2019–20ನೇ ಸಾಲಿನಲ್ಲಿ ಸಂಸ್ಥೆಯು 4065.51 ಲಕ್ಷ ಪರಿಣಾಮಕಾರಿ ಕಿ.ಮೀ.ಗಳನ್ನು ಕಾರ್ಯಾಚರಣೆ ಮಾಡಿದ್ದು, 2018–19ರ ಸಾಲಿನಲ್ಲಿ 4152.85 ಲಕ್ಷ ಪರಿಣಾಮ ಕಿ.ಮೀ. ಕಾರ್ಯಾಚರಿಸಲಾಗಿತ್ತು. ಪ್ರತಿದಿನ ಕಾರ್ಯಾಚರಣೆ ಮಾಡಿದ ಸೇವಾ ಕಿ.ಮೀ.ಗಳು 2019–20ರಲ್ಲಿ 11.10 ಲಕ್ಷ ಕಿ.ಮೀ. ಗಳಾಗಿದ್ದು 2018–19ರಲ್ಲಿ 11.38 ಲಕ್ಷ ಕಿ.ಮೀ.ಗಳಾಗಿರುತ್ತದೆ. ಆದಾಯರಹಿತ ಕಿ.ಮೀ.ಗಳ ಶೇಕಡಾವಾರು ಪ್ರಮಾಣವು ಹಿಂದಿನ ವರ್ಷದಲ್ಲಿ ಶೇಕಡ 3.3 ರಷ್ಟಿದ್ದು, ಪ್ರಸಕ್ತ ವರದಿಯ ಸಾಲಿನಲ್ಲಿ ಶೇಕಡ 3.4 ಆಗಿರುತ್ತದೆ. 2019–20 ಮತ್ತು 2018–19ರಲ್ಲಿ ವಲಯವಾರು ಕಾರ್ಯಾಚರಣೆ ಮಾಡಿರುವ ಕಿ.ಮೀ.ಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ವಾಹನಗಳು, ವಾಹನ ಬಳಕೆ ಹಾಗೂ ಶೇಕಡ ಲೋಡ್ ಫ್ಯಾಕ್ಟರ್:

ಪ್ರಸಕ್ತ ವರದಿಯ ಸಾಲಿನಲ್ಲಿ ಹಾಗೂ ಹಿಂದಿನ ವರ್ಷಕ್ಕೆ ಹೋಲಿಕೆ ಮಾಡಿದ ವಾಹನ ಸ್ಥಿತಿಗತಿ, ವಾಹನ ಬಳಕೆ, ಸಾಗಣೆ ಸಾಮರ್ಥ್ಯ, ಶೇಕಡ ಲೋಡ್ ಫ್ಯಾಕ್ಟರ್ ಹಾಗೂ ಸಾಗಿಸಲಾದ ಪ್ರಯಾಣಿಕರ ವಿವರಗಳನ್ನು ಪಟ್ಟಿ–7 ರಲ್ಲಿ ನೀಡಲಾಗಿದೆ.

ಪಟ್ಟಿ–7

ಕ್ರ.ಸಂ.	ವಿವರಗಳು	2019–20	2018–19
1	ಸಂಸ್ಥೆಯು ಹೊಂದಿರುವ ಸರಾಸರಿ ವಾಹನಗಳ ಸಂಖ್ಯೆ	6514.9	6674.5
2	ಸರಾಸರಿ ಕಾರ್ಯಾಚರಣೆಯಾದ ವಾಹನಗಳ ಸಂಖ್ಯೆ	5542.4	5614.8
3	ಸರಾಸರಿ ಕೆಟ್ಟು ನಿಂತ ವಾಹನಗಳ ಸಂಖ್ಯೆ	467.8	749.6
4	ಸರಾಸರಿ ಹೆಚ್ಚುವರಿ ವಾಹನಗಳ ಸಂಖ್ಯೆ	504.7	310.1
5	ಶೇಕಡಾವಾರು ಕೆಟ್ಟು ನಿಂತ ವಾಹನಗಳು	7.2	11.2
6	ಶೇಕಡವಾರು ಬಳಕೆಯಾದ ವಾಹನಗಳ ಸಮೂಹ	85.1	84.1
7	ಸರಾಸರಿ ವಾಹನಗಳ ಬಳಕೆ		
ಅ	ಒಟ್ಟು ಕಿ.ಮೀ.ಗಳ ಆಧಾರದ ಮೇಲೆ	207.3	209.3
ಆ	ಪರಿಣಾಮಕಾರಿ ಕಿ.ಮೀ.ಗಳ ಆಧಾರದ ಮೇಲೆ	200.4	202.6
8	ಸರಾಸರಿ ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯ	61.5	61.3
9	ಶೇಕಡ ಲೋಡ್ ಫ್ಯಾಕ್ಟರ್	67.6	71.4
10	ಸಾಗಿಸಿದ ಒಟ್ಟು ಪ್ರಯಾಣಿಕರ ಸಂಖ್ಯೆ (ಲಕ್ಷಗಳಲ್ಲಿ)	12114.60	12775.00
11	ಸರಾಸರಿ ದಿನವಹಿ ಸಾಗಿಸಿದ ಪ್ರಯಾಣಿಕರ ಸಂಖ್ಯೆ (ಲಕ್ಷಗಳಲ್ಲಿ)	33.10	35.00

2019–20ನೇ ಸಾಲಿನಲ್ಲಿ ಸಂಸ್ಥೆಯು ಪ್ರತಿದಿನ ಸರಾಸರಿ 6514.9 ವಾಹನಗಳನ್ನು ಹೊಂದಿದ್ದು, ಇವುಗಳಲ್ಲಿ 5542.4 ವಾಹನಗಳನ್ನು ಪ್ರತಿದಿನ ಮಾರ್ಗದಲ್ಲಿ ಕಾರ್ಯಾಚರಿಸಿದ್ದು, 467.8 ವಾಹನಗಳನ್ನು ದುರಸ್ತಿಗಾಗಿ ನಿಲ್ಲಿಸಲಾಗಿದೆ. ಹಾಗೂ

ಕಾರ್ಯಾಚರಣೆಗೆ ಯೋಗ್ಯವಾದ 504.7 ವಾಹನಗಳನ್ನು ಹೆಚ್ಚುವರಿಯಾಗಿ ಇಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಪ್ರತಿಶತ 7.2ರಷ್ಟು ವಾಹನಗಳು ಕೆಟ್ಟು ಕಾರ್ಯಾಚರಣೆಯಿಂದ ನಿಲ್ಲಿಸಲಾಗಿದೆ. ಸಂಸ್ಥೆಯು ಶೇಕಡ 85.1ರಷ್ಟು ವಾಹನ ಸಮೂಹದ ಬಳಕೆ ಮಾಡಿದ್ದು, ಈ ಪ್ರಮಾಣವು ಹಿಂದಿನ ವರ್ಷದಲ್ಲಿ ಶೇಕಡಾ 84.1 ಆಗಿತ್ತು. ಈ ಅವಧಿಯಲ್ಲಿ ಪರಿಣಾಮಕಾರಿ ಕಿ.ಮೀ.ಗಳ ಮೇಲೆ ಪ್ರತಿದಿನ ಪ್ರತಿ ವಾಹನವಾರು 200.4 ಕಿ.ಮೀ.ಗಳ ವಾಹನ ಬಳಕೆಯ ಸಾಧನೆ ಮಾಡಲಾಗಿದೆ ಮತ್ತು ಒಟ್ಟು ಕಾರ್ಯಾಚರಣೆ ಕಿ.ಮೀ.ಗಳ ಮೇಲೆ ಪ್ರತಿದಿನ 207.3 ಕಿ.ಮೀ. ವಾಹನ ಬಳಕೆ ಸಾಧ್ಯವಾಗಿರುತ್ತದೆ. ಈ ಕಿ.ಮೀ.ಗಳು ಹಿಂದಿನ ವರ್ಷ ಕ್ರಮವಾಗಿ 202.6 ಮತ್ತು 209.3 ಕಿ.ಮೀ.ಗಳು ಆಗಿದ್ದವು. ಸಂಸ್ಥೆಯ ವಾಹನಗಳಲ್ಲಿ 2019–20ನೇ ಸಾಲಿನಲ್ಲಿ ಪ್ರತಿದಿನ ಸರಾಸರಿ 33.10 ಲಕ್ಷ ಪ್ರಯಾಣಿಕರು ಸಂಚರಿಸಿದ್ದು, ಕಳೆದ ಸಾಲಿನಲ್ಲಿ 35.00ಲಕ್ಷ ಪ್ರಯಾಣಿಕರು ಸಂಚರಿಸಿದ್ದರು.

3.7 ಸರಕು ಸರಂಜಾಮುಗಳ ಸಾಗಣೆ:

ನಗರ ಸಾರಿಗೆ ವಾಹನಗಳಲ್ಲಿ ವಯಸ್ಕ ಪ್ರಯಾಣಿಕರು 15 ಕೆ.ಜಿ.ವರೆಗಿನ ಲಗ್ಗೇಜನ್ನು ಹಾಗೂ ಮಕ್ಕಳು 7.5 ಕೆ.ಜಿ.ವರೆಗಿನ ಲಗ್ಗೇಜನ್ನು ಉಚಿತವಾಗಿ ಸಾಗಿಸುವ ಸೌಲಭ್ಯವನ್ನು ಪ್ರಯಾಣಿಕರಿಗೆ ಒದಗಿಸಲಾಗಿದೆ. ಈ ಸಂಬಂಧದ ದರಪಟ್ಟಿಯನ್ನು ಅನುಬಂಧ–ಅ ರಲ್ಲಿ ಲಗತ್ತಿಸಿದೆ. ನಗರ ಸಾರಿಗೆಯಲ್ಲಿ ಪಾರ್ಸೆಲ್ ರವಾನೆಯ ಸೌಲಭ್ಯವಿರುವುದಿಲ್ಲ.

3.8 ಬಸ್ ನಿಲ್ದಾಣಗಳು ಮತ್ತು ಪ್ರಯಾಣಿಕರ ತಂಗುದಾಣಗಳು:

ದಿನಾಂಕ: 31.03.2020ರಂತೆ 55 ಖಾಯಂ ಬಸ್ ನಿಲ್ದಾಣಗಳನ್ನು ಒದಗಿಸಲಾಗಿರುವುದಲ್ಲದೆ 2212 ಬಸ್ ನಿಲುಗಡೆಗಳನ್ನು/ವಾಹನಕ್ಕೆ ಹತ್ತಿಸಿಕೊಳ್ಳುವ ಸ್ಥಳಗಳನ್ನು ಪ್ರಯಾಣಿಕರಿಗೆ ನಗರದಲ್ಲಿ ಹಾಗೂ ನಗರ ಹೊರವಲಯಗಳಲ್ಲಿ ಒದಗಿಸಲಾಗಿದೆ.

ಪಟ್ಟಿ–6

ಕ್ರ.ಸಂ	ವಿವರಗಳು	2019–20
1	ಒಟ್ಟು ಬೆಂಮಸಾಸಂಸ್ಥೆ ಬಸ್ ನಿಲ್ದಾಣಗಳು	
	ಖಾಯಂ (3 ಪ್ರಮುಖ, 10 ಟಿಟಿಎಂಸಿ, 42 ಸಣ್ಣ ಬಸ್ ನಿಲ್ದಾಣಗಳು)	55
2	ಬೃ.ಬೆಂ.ಮ.ಪಾಲಿಕೆಯ ವ್ಯಾಪ್ತಿಯಲ್ಲಿರುವ ಬಸ್ ನಿಲುಗಡೆಗಳು	2212
3	ಬಸ್ ತಂಗುದಾಣಗಳಿರುವ ಬಸ್ ನಿಲುಗಡೆಗಳು	962
4	ಬಸ್ ತಂಗುದಾಣಗಳಿಲ್ಲದ ಬಸ್ ನಿಲುಗಡೆಗಳು	1250
5	ಉಪಹಾರ ಗೃಹಗಳು	20
6	ವಾಣಿಜ್ಯ ಮಳಿಗೆಗಳು	372

3.9 ಸಾಂಧರ್ಭಿಕ ಒಪ್ಪಂದದ ಸೇವೆಗಳು :

ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿರುವ ಜೊತೆಯಲ್ಲಿ ಸಂಸ್ಥೆಯ ಆದಾಯವನ್ನು ವೃದ್ಧಿಸುವ ಸಲುವಾಗಿ ಸಾಂದರ್ಭಿಕ ಒಪ್ಪಂದದ ಸೇವೆಗಳನ್ನು ಕಿಲೋಮೀಟರ್ ಆಧಾರದ ಮೇಲೆ ಅಥವಾ ಸಮಯದ ಆಧಾರದ ಮೇಲೆ ನೀಡುತ್ತಿದೆ. ದಿನಾಂಕ: 31–03–2020ಕ್ಕೆ ಕೊನೆಗೊಂಡಂತೆ ಒಪ್ಪಂದದ ಮೇಲೆ ನೀಡಲಾಗುವ ವಾಹನಗಳ ದರದ ಪಟ್ಟಿಯನ್ನು ಅನುಸೂಚಿ–ಇ ನಲ್ಲಿ ನೀಡಲಾಗಿದೆ.

3.10 ರಿಯಾಯಿತಿಗಳು/ನಿಯತಕಾಲಿಕ ಪಾಸುಗಳು ಮತ್ತು ಉಚಿತ ಪಾಸುಗಳು:

3.10.1 ಪ್ರಯಾಣಿಕರ ಪಾಸು ವ್ಯವಸ್ಥೆ :

ಬೆಂ.ಮ.ಸಾ.ಸಂಸ್ಥೆಯು ಒಂದು ಉತ್ತಮ ಮತ್ತು ಜನಪ್ರಿಯವಾದ ಪ್ರಯಾಣಿಕರ ಪಾಸು ವ್ಯವಸ್ಥೆಯನ್ನು ಹೊಂದಿದ್ದು, ಸಮಾಜದ ವಿವಿಧ ವರ್ಗದ ಜನರ ಸಾರಿಗೆ ಅಗತ್ಯಗಳಿಗೆ ಅನುಗುಣವಾಗಿ ವಿವಿಧ ರೀತಿಯ ಪಾಸುಗಳನ್ನು ಸಾರ್ವಜನಿಕರಿಗೆ ಒದಗಿಸಲಾಗುತ್ತಿದೆ. ಬಸ್ ಪಾಸುಗಳ ಬಳಕೆದಾರರಿಗೆ ಈ ಪಾಸುಗಳನ್ನು ರಿಯಾಯಿತಿ ದರದಲ್ಲಿ ನೀಡುತ್ತಿರುವುದರಿಂದ ಈ

ವ್ಯವಸ್ಥೆಯು ಅತ್ಯಂತ ಜನಪ್ರಿಯವಾಗಿದ್ದು, ಸಂಸ್ಥೆಯ ಒಟ್ಟಾರೆ ಸಾರಿಗೆ ಆದಾಯದಲ್ಲಿ ಅರ್ಧಕ್ಕಿಂತ ಹೆಚ್ಚು ಆದಾಯವನ್ನು ಇದರಿಂದ ಗಳಿಸಲಾಗುತ್ತಿದೆ. ವಿವಿಧ ಪಾಸುಗಳೆಂದರೆ:

- ದೈನಿಕ/ದಿನದ ಪಾಸು
- ಮಾಸಿಕ ಪಾಸು
- ಡೆಡಿಕೇಟೆಡ್ ಪಾಸು
- ವಿದ್ಯಾರ್ಥಿ ರಿಯಾಯಿತಿ ಪಾಸು

ಸಂಸ್ಥೆಯು ಒದಗಿಸುತ್ತಿರುವ ಸಾರ್ವಜನಿಕ ಪಾಸುಗಳ ದರಗಳು ಹಾಗೂ ಅವುಗಳಿಗೆ ಒದಗಿಸುತ್ತಿರುವ ಸೌಲಭ್ಯದ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ	ಪಾಸಿನ ಮಾದರಿ	ಒದಗಿಸಲಾಗಿರುವ ಸೌಲಭ್ಯ	ದರ
1	ದಿನದ ಪಾಸು (ಸೆಪ್ಟೆಂಬರ್ 2003 ರಿಂದ ಜಾರಿಗೆ ತರಲಾಗಿದೆ)	ಈ ಪಾಸುದಾರರು ಒಂದು ಕ್ಯಾಲೆಂಡರ್ ದಿನದಲ್ಲಿ (0000 ಗಂಟೆಯಿಂದ 2400 ಗಂಟೆಯವರೆಗೆ) ಸಂಸ್ಥೆಯ ಸಾಮಾನ್ಯ ಸೇವೆಗಳಲ್ಲಿ ಎಷ್ಟು ಬಾರಿಯಾದರೂ ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ. ಟೋಲ್ ಮಾರ್ಗಗಳಲ್ಲಿ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.	ರೂ.70/– (ಯಾವುದೇ ಭಾವಚಿತ್ರವಿರುವ ಗುರುತಿನ ಚೀಟಿಯೊಂದಿಗೆ)
2.	ವಜ್ರ ಗೋಲ್ಡ್ ದಿನದ ಪಾಸು	ಈ ಪಾಸುದಾರರು ಒಂದು ಕ್ಯಾಲೆಂಡರ್ ದಿನದಲ್ಲಿ (0000 ಗಂಟೆಯಿಂದ 2400 ಗಂಟೆಯವರೆಗೆ) ಸಂಸ್ಥೆಯ ಎಲ್ಲಾ ಸೇವೆಗಳಲ್ಲಿ (ವಾಯುವಜ್ರ ಸೇವೆ ಮತ್ತು ಬೆಂಗಳೂರು ರೌಂಡ್ಸ್ ಹೊರತುಪಡಿಸಿ) ಎಷ್ಟು ಬಾರಿಯಾದರೂ ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ. ಟೋಲ್ ಮಾರ್ಗಗಳಲ್ಲಿ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.	ರೂ.140/– (ಭಾವಚಿತ್ರವಿರುವ ಯಾವುದೇ ಗುರುತಿನ ಚೀಟಿಯೊಂದಿಗೆ)

3.10.2

3.10.3 ಪ್ರಯಾಣಿಕರ ಮಾಸಿಕ ಪಾಸುಗಳು (ಬೆಂ.ಮ.ಸಾ.ಸಂಸ್ಥೆಯ ಗುರುತಿನ ಚೀಟಿಯೊಂದಿಗೆ) (1998 ರಿಂದ ಜಾರಿಗೆ ತರಲಾಗಿದೆ)

ಕ್ರ.ಸಂ	ಪಾಸಿನ ಮಾದರಿ	ಒದಗಿಸಲಾಗಿರುವ ಸೌಲಭ್ಯ	ದರ
3	ಸಾಮಾನ್ಯ ಸೇವೆಯ ಮಾಸಿಕ ಪಾಸು	ಸಂಸ್ಥೆಯ ಎಲ್ಲಾ ಹವಾನಿಯಂತ್ರಣರಹಿತ ಸೇವೆಗಳಲ್ಲಿ ಒಂದು ಕ್ಯಾಲೆಂಡರ್ ತಿಂಗಳ ಪೂರ್ತಿ ಮಿತಿಯಿಲ್ಲದೇ ಪ್ರಯಾಣಿಸಬಹುದಾಗಿರುತ್ತದೆ. ಟೋಲ್ ಮಾರ್ಗಗಳಲ್ಲಿ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.	ರೂ.1050/–
4	ಹಿರಿಯ ನಾಗರಿಕರ ಸಾಮಾನ್ಯ ಸೇವೆಯ ಮಾಸಿಕ ಪಾಸು	ಸಂಸ್ಥೆಯ ಎಲ್ಲಾ ಹವಾನಿಯಂತ್ರಣರಹಿತ ಸೇವೆಗಳಲ್ಲಿ ಒಂದು ಕ್ಯಾಲೆಂಡರ್ ತಿಂಗಳ ಪೂರ್ತಿ ಮಿತಿಯಿಲ್ಲದೇ ಪ್ರಯಾಣಿಸಬಹುದಾಗಿರುತ್ತದೆ. ಟೋಲ್ ಮಾರ್ಗಗಳಲ್ಲಿ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.	ರೂ.945/–
5	ನೈಸ್ ರಸ್ತೆಯ ಸಾಮಾನ್ಯ ಸೇವೆಯ ಮಾಸಿಕ ಪಾಸು	ಸಂಸ್ಥೆಯ ಎಲ್ಲಾ ಹವಾನಿಯಂತ್ರಣರಹಿತ ಸೇವೆಗಳಲ್ಲಿ ಒಂದು ಕ್ಯಾಲೆಂಡರ್ ತಿಂಗಳ ಪೂರ್ತಿ ಮಿತಿಯಿಲ್ಲದೇ ಪ್ರಯಾಣಿಸಬಹುದಾಗಿರುತ್ತದೆ. ನೈಸ್ ರಸ್ತೆಯನ್ನು ಹೊರತುಪಡಿಸಿ ಉಳಿದ ಟೋಲ್ ಮಾರ್ಗಗಳಲ್ಲಿ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.	ರೂ.1900/–

6	ವಜ್ರ ಗೋಲ್ಡ್ ಮಾಸಿಕ ಪಾಸು(ಮೇ–2008 ರಿಂದ ಜಾರಿಗೆ ತರಲಾಗಿದೆ)	ಸಂಸ್ಥೆಯ ಎಲ್ಲಾ ಸೇವೆಗಳಲ್ಲಿ (ವಾಯುವಜ್ರ, ಬೆಂಗಳೂರು ರೌಂಡ್ಸ್ ಸೇವೆಗಳನ್ನು ಹೊರತುಪಡಿಸಿ) ಒಂದು ಕ್ಯಾಲೆಂಡರ್ ತಿಂಗಳ ಪೂರ್ತಿ ಮಿತಿಯಿಲ್ಲದ ಪ್ರಯಾಣಕ್ಕೆ ಅವಕಾಶ. ಟೋಲ್ ಮಾರ್ಗಗಳಲ್ಲಿ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.	ರೂ.2250/–
7	ವಜ್ರ ವಿದ್ಯಾರ್ಥಿ ಪಾಸು (ವಿದ್ಯಾಸಂಸ್ಥೆಯ ಗುರುತಿನ ಚೀಟಿ ಕಡ್ಡಾಯ)	ಸಂಸ್ಥೆಯ ಎಲ್ಲಾ ಸೇವೆಗಳಲ್ಲಿ (ವಾಯುವಜ್ರ, ಬೆಂಗಳೂರು ರೌಂಡ್ಸ್ ಸೇವೆಗಳನ್ನು ಹೊರತುಪಡಿಸಿ) ಒಂದು ಕ್ಯಾಲೆಂಡರ್ ತಿಂಗಳ ಪೂರ್ತಿ ಮಿತಿಯಿಲ್ಲದ ಪ್ರಯಾಣಕ್ಕೆ ಅವಕಾಶ. ಟೋಲ್ ಮಾರ್ಗಗಳಲ್ಲಿ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.	ರೂ.1500/–
8	ನೈಸ್ ರಸ್ತೆಯ ವಜ್ರ ಮಾಸಿಕ ಪಾಸು	ಸಂಸ್ಥೆಯ ಎಲ್ಲಾ ಸೇವೆಗಳಲ್ಲಿ (ವಾಯುವಜ್ರ, ಬೆಂಗಳೂರು ರೌಂಡ್ಸ್ ಸೇವೆಗಳನ್ನು ಹೊರತುಪಡಿಸಿ) ಒಂದು ಕ್ಯಾಲೆಂಡರ್ ತಿಂಗಳ ಪೂರ್ತಿ ಮಿತಿಯಿಲ್ಲದ ಪ್ರಯಾಣಕ್ಕೆ ಅವಕಾಶ. ನೈಸ್ ರಸ್ತೆಯನ್ನು ಹೊರತುಪಡಿಸಿ ಉಳಿದ ಟೋಲ್ ಮಾರ್ಗಗಳಲ್ಲಿ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ	ರೂ.3000/–
9	ವಾಯುವಜ್ರ ಗೋಲ್ಡ್ ಮಾಸಿಕ ಪಾಸು	ಬೆಂ.ಮ.ಸಾ.ಸಂಸ್ಥೆಯು ಆಚರಣೆ ಮಾಡುವ ಎಲ್ಲಾ ಹವಾನಿಯಂತ್ರಿತ ಹಾಗೂ ಹವಾನಿಯಂತ್ರಣ ರಹಿತ ಸೇವೆಗಳಲ್ಲಿ (ಬೆಂಗಳೂರು ರೌಂಡ್ಸ್ ಹೊರತುಪಡಿಸಿ) ಒಂದು ಕ್ಯಾಲೆಂಡರ್ ತಿಂಗಳ ಅವಧಿಗೆ ಮಿತಿಯಿಲ್ಲದ ಪ್ರಯಾಣಕ್ಕೆ ಅವಕಾಶ. ಟೋಲ್ ಮಾರ್ಗಗಳಲ್ಲಿ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ (ದೇವನಹಳ್ಳಿ ಟೋಲ್ ಹೊರತುಪಡಿಸಿ).	ರೂ.3000 /–
ಸಾಮಾನ್ಯ ಸೇವೆಯ ಮಾಸಿಕ ಪಾಸುದಾರರು ಹಾಗೂ ಹಿರಿಯ ನಾಗರಿಕರ ಮಾಸಿಕ ಪಾಸುದಾರರು ಪ್ರತಿ ಸುತ್ತುವಳಿಗಳಿಗೆ ರೂ. 35/–ರ ರಿಯಾಯಿತಿ ದರದ ಟಿಕೆಟ್ ಪಡೆದು ವಜ್ರ ಸೇವೆಗಳಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಿದೆ.			

3.10.3 ಸಾಮಾಜಿಕ ಹೊಣೆಗಾರಿಕೆಗಳು & ಪ್ರಯಾಣಿಕ ಸ್ನೇಹಿ ಕಾರ್ಯಕ್ರಮಗಳು:

ಬೆಂಮಸಾಸಂಸ್ಥೆಯು ಬೆಂಗಳೂರು ನಗರದಲ್ಲಿ ಸಾರ್ವಜನಿಕರಿಗೆ ಸಾರಿಗೆ ಸೇವೆಯನ್ನು ಒದಗಿಸುವ ಏಕೈಕ ರಸ್ತೆ ಸಾರಿಗೆ ಸಂಸ್ಥೆಯಾಗಿದ್ದು, ಸಾರ್ವಜನಿಕ ಹೊಣೆಗಾರಿಕೆಯಾಗಿ ಪ್ರಯಾಣಿಕರ ಸುರಕ್ಷತೆಗಾಗಿ ಮತ್ತು ಸಮಾಜದ ಸೌಲಭ್ಯವಂಚಿತ ವರ್ಗದ ಜನತೆಯ ಅನುಕೂಲಕ್ಕಾಗಿ ವಿವಿಧ ಯೋಜನೆಗಳನ್ನು ಕೈಗೊಂಡಿದ್ದು, ವಿವರಗಳು ಈ ಕೆಳಕಂಡಂತಿವೆ.

1. ಮಾಸಿಕ ಪಾಸುದಾರರಿಗೆ	ದ್ವಿಪ್ರಯೋಜನ ಯೋಜನೆ. ಬೆಂಮಸಾಸಂಸ್ಥೆಯು ಮಾಸಿಕ ಪಾಸುದಾರರಿಗೆ ವಿಶೇಷ ಸೌಲಭ್ಯ ನೀಡುವ ಸಲುವಾಗಿ ದ್ವಿಪ್ರಯೋಜನ ಯೋಜನೆಯನ್ನು ಜಾರಿಗೆ ತಂದಿದ್ದು, ಈ ಯೋಜನೆಯು ಕೆಳಕಂಡ ಸೌಲಭ್ಯಗಳನ್ನು ಒಳಗೊಂಡಿದೆ. 1. ಅಪಘಾತ ವಿಮಾ ರಕ್ಷೆ: ಚಾಲ್ತಿಯಲ್ಲಿರುವ ಪಾಸು ಹೊಂದಿದ ಪಾಸುದಾರರು ಸಮಯದ ನಿರ್ಬಂಧವಿಲ್ಲದೆ/ಯಾವುದೇ ಸ್ಥಳದಲ್ಲಿ ವಾಹನ ಅಪಘಾತದಿಂದ ಮರಣ ಹೊಂದಿದ್ದಲ್ಲಿ ಅಥವಾ ಸಂಪೂರ್ಣ ಅಂಗಹೀನತೆ ಉಂಟಾದಲ್ಲಿ ರೂ. 2.00 ಲಕ್ಷ ವಿಮಾ ಪರಿಹಾರ. 2. ವೈದ್ಯಕೀಯ ವೆಚ್ಚ ಮರುಪಾವತಿ: ಚಾಲ್ತಿಯಲ್ಲಿರುವ ಪಾಸು ಹೊಂದಿದವರು ವಾಹನ ಅಪಘಾತದಿಂದ ಗಾಯಗೊಂಡು ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಪಡೆದಿದ್ದಲ್ಲಿ, ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ ಗರಿಷ್ಟ ರೂ. 30,000/– ಗಳವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನೀಡಲಾಗುವುದು.

2. ವಜ್ರ ಗೋಲ್ಡ್ ಮಾಸಿಕ ಪಾಸುದಾರರಿಗೆ ದ್ವಿಪ್ರಯೋಜನ ಯೋಜನೆ :	1) ಚಾಲ್ತಿಯಲ್ಲಿರುವ ಪಾಸು ಹೊಂದಿರುವವರು ಯಾವುದೇ ವಿಧವಾದ ವಾಹನ ಅಪಘಾತದಲ್ಲಿ ಮೃತಪಟ್ಟಲ್ಲಿ ಅಥವಾ ಶಾಶ್ವತ ಅಂಗಹೀನತೆ ಉಂಟಾದಲ್ಲಿ ರೂ.5 ಲಕ್ಷಗಳವರೆಗಿನ ಸ್ವಯಂಚಾಲಿತ ಅಪಘಾತ ವಿಮಾ ಸೌಲಭ್ಯ. 2) ಚಾಲ್ತಿಯಲ್ಲಿರುವ ಪಾಸು ಹೊಂದಿದವರು ವಾಹನ ಅಪಘಾತದಿಂದ ಗಾಯಗೊಂಡು ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಪಡೆದಿದ್ದಲ್ಲಿ, ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ ಗರಿಷ್ಟ ರೂ.50,000/– ಗಳವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನೀಡಲಾಗುವುದು.
3. ವಾಯುವಜ್ರ ಗೋಲ್ಡ್ ಮಾಸಿಕ ಪಾಸುದಾರರಿಗೆ ದ್ವಿಪ್ರಯೋಜನ ಯೋಜನೆ	1) ಚಾಲ್ತಿಯಲ್ಲಿರುವ ಪಾಸು ಹೊಂದಿರುವವರು ಯಾವುದೇ ವಿಧವಾದ ವಾಹನ ಅಪಘಾತದಲ್ಲಿ ಮೃತಪಟ್ಟಲ್ಲಿ ಅಥವಾ ಶಾಶ್ವತ ಅಂಗಹೀನತೆ ಉಂಟಾದಲ್ಲಿ ರೂ.10 ಲಕ್ಷಗಳವರೆಗಿನ ಸ್ವಯಂಚಾಲಿತ ಅಪಘಾತ ವಿಮಾ ಸೌಲಭ್ಯ. 2) ಚಾಲ್ತಿಯಲ್ಲಿರುವ ಪಾಸು ಹೊಂದಿದವರು ವಾಹನ ಅಪಘಾತದಿಂದ ಗಾಯಗೊಂಡು ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಪಡೆದಿದ್ದಲ್ಲಿ, ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ ಗರಿಷ್ಟ ರೂ.50,000/– ಗಳವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನೀಡಲಾಗುವುದು.
4. ವಿದ್ಯಾರ್ಥಿ ರಿಯಾಯ್ತಿ ಪಾಸುದಾರರಿಗೆ ದ್ವಿಪ್ರಯೋಜನ ಯೋಜನೆ : (ಜುಲೈ–2004 ರಿಂದ ಜಾರಿಗೆ ತರಲಾಗಿದೆ)	1. ಚಾಲ್ತಿಯಲ್ಲಿರುವ ವಿದ್ಯಾರ್ಥಿ ರಿಯಾಯ್ತಿ ಪಾಸನ್ನು ಹೊಂದಿರುವ ವಿದ್ಯಾರ್ಥಿಯು ವಾಹನ ಅಪಘಾತದಲ್ಲಿ ಮರಣ ಹೊಂದಿದಲ್ಲಿ ಅಥವಾ ಸಂಪೂರ್ಣ ಅಂಗವಿಕಲರಾದಲ್ಲಿ ಅವರ ಪೋಷಕರಿಗೆ/ನಾಮನಿರ್ದೇಶನ ಹೊಂದಿದವರಿಗೆ ರೂ.2.50 ಲಕ್ಷ ವಿಮಾ ಪರಿಹಾರ ಸೌಲಭ್ಯ. 2. ಚಾಲ್ತಿಯಲ್ಲಿರುವ ವಿದ್ಯಾರ್ಥಿ ರಿಯಾಯ್ತಿ ಪಾಸುದಾರರು ಯಾವುದೇ ವಾಹನ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆದಿದ್ದಲ್ಲಿ ರೂ.20,000/– ದವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿ ಸೌಲಭ್ಯ.
5. ಚೀಟಿ/ದಿನದ ಪಾಸುಗಳನ್ನು ಹೊಂದಿರುವ ಪ್ರಯಾಣಿಕರಿಗೆ ದ್ವಿಪ್ರಯೋಜನ ಯೋಜನೆ (ಡಿಸೆಂಬರ್–2005 ರಿಂದ ಜಾರಿಗೆ ತರಲಾಗಿದೆ)	1. ಅಪಘಾತ ಪರಿಹಾರ/ಎಕ್ಸ್‌ಗ್ರೇಷಿಯಾ ಪ್ರಯೋಜನ: ಸಂಸ್ಥೆಯ ಟಿಕೇಟು/ದಿನದ ಪಾಸನ್ನು ಹೊಂದಿ ಸಂಸ್ಥೆಯ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತವಾಗಿ ಮರಣಿಸಿದಲ್ಲಿ/ಸಂಪೂರ್ಣ ಅಂಗವಿಕಲರಾದಲ್ಲಿ ರೂ.1.00 ಲಕ್ಷ ಅಪಘಾತ ಪರಿಹಾರ/ ಎಕ್ಸ್‌ಗ್ರೇಷಿಯಾ ಪ್ರಯೋಜನ ನೀಡಲಾಗುವುದು. 2. ವೈದ್ಯಕೀಯ ವೆಚ್ಚ ಮರುಪಾವತಿ: ಸಂಸ್ಥೆಯ ಟಿಕೇಟು/ದಿನದ ಪಾಸನ್ನು ಹೊಂದಿ ಸಂಸ್ಥೆಯ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಲ್ಲಿ ಅಂತಹವರಿಗೆ ರೂ.20,000/– ದವರೆಗೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಲಾಗುವುದು.
6. ಸಾಂದರ್ಭಿಕ ಒಪ್ಪಂದ /ಗುತ್ತಿಗೆ ಆಧಾರದ ಪ್ರಯಾಣಿಕರಿಗೆ ದ್ವಿಪ್ರಯೋಜನ ಯೋಜನೆ	1. ಅಪಘಾತ ಪರಿಹಾರ/ಎಕ್ಸ್‌ಗ್ರೇಷಿಯಾ ಪ್ರಯೋಜನ: ಸಂಸ್ಥೆಯ ಸಾಂದರ್ಭಿಕ ಒಪ್ಪಂದದ ಬಸ್ಸಿನಲ್ಲಿ/ಗುತ್ತಿಗೆ ಆಧಾರದ ಮೇಲೆ ಆಚರಣೆಯಾಗುವ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತವಾಗಿ ಮರಣಿಸಿದಲ್ಲಿ/ಸಂಪೂರ್ಣ ಅಂಗವಿಕಲರಾದಲ್ಲಿ ರೂ.1.00 ಲಕ್ಷ ಅಪಘಾತ ಪರಿಹಾರ/ಎಕ್ಸ್‌ಗ್ರೇಷಿಯಾ ಪ್ರಯೋಜನ ನೀಡಲಾಗುವುದು. 2. ವೈದ್ಯಕೀಯ ವೆಚ್ಚ ಮರುಪಾವತಿ: ಸಂಸ್ಥೆಯ ಸಾಂದರ್ಭಿಕ ಒಪ್ಪಂದ/ಗುತ್ತಿಗೆ ಆಧಾರದ ಮೇಲೆ ಆಚರಣೆಯಾಗುವ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಘಾತವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಲ್ಲಿ ಅಂತಹವರಿಗೆ ರೂ.20,000/– ದವರೆಗೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಲಾಗುವುದು.

3.10.4 ವಿಶೇಷ ರಿಯಾಯಿತಿ ಪಾಸುಗಳು:

ಸಾಮಾಜಿಕ ಹೊಣೆಗಾರಿಕೆಯಾಗಿ ಸಂಸ್ಥೆಯು ಕೆಲವು ವರ್ಗದವರ ಹಿತದೃಷ್ಟಿಯಿಂದ ವಿಶೇಷ ಪಾಸುಗಳನ್ನು ವಿತರಿಸುತ್ತಿದ್ದು, ಇದರಿಂದ ಸಂಸ್ಥೆಯು ಹೆಚ್ಚಿನ ಪ್ರಮಾಣದ ನಷ್ಟವನ್ನು ಅನುಭವಿಸುತ್ತಿದ್ದಾಗ್ಯೂ ಸಾಮಾಜಿಕ ಹೊಣೆಗಾರಿಕೆಯಾಗಿ ಈ ಪಾಸುಗಳನ್ನು ವಿತರಿಸುತ್ತಿದೆ. ವಿವರಗಳು ಈ ಕೆಳಕಂಡಂತಿವೆ.

ವಿದ್ಯಾರ್ಥಿ ರಿಯಾಯತಿ ಪಾಸು

ವಿಶೇಷ ಪಾಸುಗಳು	* ದರ	ಪಾಸು ಪಡೆಯಲು ಅರ್ಹತೆ
ಅ) ಪ್ರಾಥಮಿಕ ಶಾಲೆ	ಉಚಿತ	1 ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೆ ಸರ್ಕಾರದಿಂದ ಮಾನ್ಯತೆ ಪಡೆದ ಎಲ್ಲಾ ಶಾಲೆ/ಕಾಲೇಜು/ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗೆ ರಿಯಾಯ್ತಿ ದರದಲ್ಲಿ ಪಾಸು ವಿತರಿಸಲಾಗುತ್ತದೆ.
ಆ) ಪ್ರೌಢಶಾಲೆ (ಹುಡುಗಿಯರಿಗೆ)	ರೂ.400/–	
ಪ್ರೌಢಶಾಲೆ (ಹುಡುಗರಿಗೆ)	ರೂ.600/–	
ಇ) ಕಾಲೇಜು (ಪಿಯುಸಿ) (10 ತಿಂಗಳಿಗೆ)	ರೂ.900/–	
ಈ) ಕಾಲೇಜು (ಪದವಿ) (12 ತಿಂಗಳಿಗೆ)	ರೂ.1,100/–	
ಉ) ವೃತ್ತಿಪರ ಕಾಲೇಜು (12 ತಿಂಗಳಿಗೆ)	ರೂ.1,150/–	
ಊ) ತಾಂತ್ರಿಕ & ವೈದ್ಯಕೀಯ ಕಾಲೇಜು (12 ತಿಂಗಳಿಗೆ)	ರೂ.1,680/–	
ಋ) ಸಂಜೆ ಕಾಲೇಜು/ಪಿ.ಹೆಚ್.ಡಿ ವಿದ್ಯಾರ್ಥಿಗಳು(12 ತಿಂಗಳಿಗೆ)	ರೂ.1,480/–	
ಎ) ಎಲ್ಲಾ ತರಗತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪಾಸು	ಉಚಿತ	
* ಈ ಪಾಸುಗಳ ಬೆಲೆಯು ರೂ.200/– ಸಂಸ್ಕರಣಾ ಶುಲ್ಕವನ್ನು ಹೊರತುಪಡಿಸಿದೆ.		

3.10.5 ಇತರೆ ಪಾಸುಗಳು:

1. ಅಂಧರ ಪಾಸುಗಳು:	ಉಚಿತ	ಅಂಧರ ಪಾಸುಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಉಚಿತವಾಗಿ ವಿತರಣೆ ಮಾಡುತಿದ್ದು, ಸದರಿ ಪಾಸುಗಳನ್ನು ಬೆಂ.ಮ.ಸಾ.ಸಂಸ್ಥೆಯು ಸಾಮಾನ್ಯ ಮತ್ತು ವಜ್ರ ಸೇವೆಗಳಲ್ಲಿ ಮಾನ್ಯ ಮಾಡುತ್ತಿದೆ.
2. ವಿಕಲಚೇತನರಿಗೆ ಪಾಸುಗಳು	ವಾರ್ಷಿಕ ರೂ.660/–	ವಿಕಲಚೇತನ ಪ್ರಯಾಣಿಕರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ವಿಕಲಚೇತನ ರಿಯಾಯಿತಿ ಪಾಸುಗಳನ್ನು ವಿತರಿಸುತ್ತಿದ್ದು, ಸದರಿ ಪಾಸುದಾರರು ವಾಸಸ್ಥಳದಿಂದ 100 ಕಿ.ಮೀ. ಪರಿಮಿತಿಯೊಳಗೆ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ.
3. ಸ್ವಾತಂತ್ರ್ಯ ಹೋರಾಟಗಾರರ ಪಾಸುಗಳು	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.
4. ಹುತಾತ್ಮ ಯೋಧರ ಅವಲಂಬಿತರಿಗೆ ಪಾಸು	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.
5. ಗೋವಾ ವಿಮೋಚನಾ ಚಳುವಳಿಗಾರರ ಉಚಿತ ಬಸ್ ಪಾಸು	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.

6. ಎಂಡೋಸಲ್ಫಾನ್ ಪೀಡಿತರಿಗೆ ಉಚಿತ ಬಸ್ ಪಾಸು	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.
7. ಅರ್ಜುನ ಪ್ರಶಸ್ತಿ ವಿಜೇತರು, ಒಲಂಪಿಯನ್ ಮತ್ತು ಪ್ಯಾರಾ ಒಲಂಪಿಯನ್‌ಗಳ ಉಚಿತ ಬಸ್ ಪಾಸು	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.
8. ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಪಡೆದ ಮಕ್ಕಳಿಗೆ ಉಚಿತ ಬಸ್‌ಪಾಸು	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.
9. ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯರಿಗೆ ಉಚಿತ ಬಸ್ ಪ್ರಯಾಣದ ಕೂಪನ್	ಉಚಿತ	ಗುರುತಿನ ಚೀಟಿಯನ್ನು ಹೊಂದಿದ ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯರಿಗೆ ಬೆಂ.ಮ.ಸಾ.ಸಂಸ್ಥೆಯ ಸಾಮಾನ್ಯ ಸೇವೆಗಳಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದ್ದು,ಗುರುತಿನ ಚೀಟಿಯನ್ನು ತೋರಿಸಿ ಪ್ರಯಾಣ ದರಕ್ಕನುಗುಣವಾಗಿ ಹಣಕ್ಕೆ ಬದಲಾಗಿ ಕೂಪನ್‌ಗಳನ್ನು ನೀಡಿ ಬಸ್‌ನಲ್ಲಿ ಪ್ರಯಾಣ ಮಾಡಬಹುದು.
10. ರಾಷ್ಟ್ರ ಪ್ರಶಸ್ತಿ ಪಡೆದವರಿಗೆ ಉಚಿತ ಬಸ್ ಪಾಸು	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.
11. ಕನ್ನಡ ಸಾಹಿತ್ಯ ಪರಿಷತ್‌ನ ರಾಜ್ಯ ಹಾಗೂ ಜಿಲ್ಲಾಧ್ಯಕ್ಷರುಗಳಿಗೆ ಉಚಿತ ಬಸ್‌ಪಾಸ್	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.
12. ಹಾಲಿ ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳ ಉಚಿತ ಬಸ್ ಪಾಸು	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.
13. ಮಾಜಿ ವಿಧಾನ ಸಭಾ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರ ಉಚಿತ ಬಸ್ ಪಾಸು	ಉಚಿತ	ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದ ವತಿಯಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.
14. ಪೊಲೀಸ್ ಡ್ಯೂಟಿ ಪಾಸು	ರೂ.3,900/– (6 ತಿಂಗಳಿಗೆ)	ಈ ಪಾಸುಗಳನ್ನು ಪೊಲೀಸ್ ಪೇದೆ ಮತ್ತು ಮುಖ್ಯ ಪೇದೆ ದರ್ಜೆಯ ಪೊಲೀಸ್ ಸಿಬ್ಬಂದಿಗಳಿಗೆ ವಿತರಿಸಲಾಗುತ್ತದೆ.
15. ಪೊಲೀಸ್ ಡ್ಯೂಟಿ ಸಮನ್ಸ್ ಪಾಸು	ರೂ.3,900/– (6 ತಿಂಗಳಿಗೆ)	ಸಮನ್ಸ್ ಮತ್ತು ನೋಟಿಸುಗಳನ್ನು ಜಾರಿಗೊಳಿಸಲು ನಿಗದಿತ ಸಂಖ್ಯೆಯಲ್ಲಿ ಪಾಸುಗಳನ್ನು ಪೊಲೀಸ್ ಇಲಾಖೆಗೆ ವಿತರಿಸಲಾಗುತ್ತಿದೆ.
16. ಅಗ್ನಿಶಾಮಕ ದಳದ ಸಿಬ್ಬಂದಿ ಪಾಸು	ರೂ.3,900/– (6 ತಿಂಗಳಿಗೆ)	ಅಗ್ನಿಶಾಮಕ ದಳದ ಸಿಬ್ಬಂದಿಗಳಿಗೆ ವಿತರಿಸಲಾಗುತ್ತದೆ.
17. ಪತ್ರಕರ್ತರ ಪಾಸು	ವಾರ್ಷಿಕ ರೂ. 600/–	ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಕರ್ತವ್ಯ ನಿರ್ವಹಿಸುವ ಪತ್ರಕರ್ತರಿಗೆ ವಿತರಿಸಲಾಗುತ್ತಿದೆ.

18. ಸಹಾಯಹಸ್ತ ಪಾಸು	ಉಚಿತ	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಕಾರ್ಮಿಕ ಇಲಾಖೆಯ ಸಹಯೋಗದೊಂದಿಗೆ ಬೆಂಗಳೂರು ನಗರದಲ್ಲಿ ಕರ್ತವ್ಯ ನಿರ್ವಹಿಸುವ ಕಟ್ಟಡ ಮತ್ತು ಇತರೇ ನಿರ್ಮಾಣ ಕಾಮಗಾರಿ ಕಾರ್ಮಿಕರಿಗೆ ಉಚಿತವಾಗಿ ಸಹಾಯಹಸ್ತ ಪಾಸನ್ನು ವಿತರಿಸುತ್ತಿದ್ದು, ಸದರಿ ಪಾಸಿನ ಅವಧಿಯು ಗರಿಷ್ಟ ಒಂದು ವರ್ಷವಾಗಿರುತ್ತದೆ. ಪಾಸುಗಳನ್ನು ಹೊಂದಿರುವ ಕಾರ್ಮಿಕರು ಸಂಸ್ಥೆಯ ಎಲ್ಲಾ ಸಾಮಾನ್ಯ ಸೇವೆಗಳಲ್ಲಿ ಸುರಕ್ಷಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.
ಕ್ರ.ಸಂ. 14, 15 ಮತ್ತು 16 ರ ಪಾಸುಗಳಿಗೆ 6 ತಿಂಗಳಿಗೆ ರೂ. 50/– ಸಂಸ್ಕರಣಾ ಶುಲ್ಕವನ್ನು ವಿಧಿಸಲಾಗುವುದು.		

3.11 ಬೆಂ.ಮ.ಸಾ.ಸಂಸ್ಥೆಯ ಸಲಹಾ ಕೇಂದ್ರ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಾರ್ವಜನಿಕ ಸ್ನೇಹಿ ಸೇವೆಗಳ ಆಚರಣೆಯ ನಿಟ್ಟಿನಲ್ಲಿ, ಸಾರ್ವಜನಿಕ ಪ್ರಯಾಣಿಕರಿಗೆ ಸಮಯಬದ್ಧ, ವಿಶ್ವಾಸನೀಯ, ನಂಬಲರ್ಹ ಮತ್ತು ಸುರಕ್ಷಿತ ಸೇವೆಗಳನ್ನು ಒದಗಿಸುವ ಧ್ಯೇಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ ಸಂಸ್ಥೆಯ ಸಾರಿಗೆ ಸೌಲಭ್ಯಗಳ ಬಗ್ಗೆ ಪ್ರಯಾಣಿಕರಿಗೆ ಅಗತ್ಯ ಮಾಹಿತಿ ನೀಡಲು ಹಾಗೂ ಸಂಸ್ಥೆಯ ಸೇವೆಗಳ ಕಾರ್ಯಚರಣೆಯಲ್ಲಿನ ನೂನ್ಯತೆಗಳ ಬಗ್ಗೆ ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಚಾಲಕ ಮತ್ತು ನಿರ್ವಾಹಕರ ಅಸಮರ್ಪಕ ಕಾರ್ಯವೈಖರಿಯ ಬಗ್ಗೆ ಸಲಹೆ, ಸೂಚನೆಗಳನ್ನು/ದೂರುಗಳನ್ನು ದಾಖಲಿಸಲು ಹಲವಾರು ಮೂಲಗಳನ್ನು ಕಲ್ಪಿಸಿದ್ದು, ವಿವರಗಳು ಕೆಳಕಂಡಂತಿವೆ:

- ಸಂಸ್ಥೆಯ ನಿಯಂತ್ರಣ ಕೊಠಡಿ (080–22537422, 080–22537522)
- ಸಂಸ್ಥೆಯ ಕರೆ ಕೇಂದ್ರ (1800–425–1663)
- ಸಂಸ್ಥೆಯ ಅಂತರ್‌ಜಾಲ (www.mybmtc.com)
- ಇ–ಮೇಲ್ ಮೂಲಕ complaints@mybmtc.com
- ಪತ್ರಿಕಾ ಮಾಧ್ಯಮದ ಮೂಲಕ
- ಪತ್ರಗಳ ಮೂಲಕ
- ದೂರವಾಣಿ ಮೂಲಕ
- ವೈಯಕ್ತಿಕವಾಗಿ ಬಂದು ದೂರು ನೀಡುವುದು
- ಬಸ್ ನಿಲ್ದಾಣಗಳಲ್ಲಿ ಮತ್ತು ಡಿಪೋಗಳಲ್ಲಿ /ಕೇಂದ್ರ ಕಛೇರಿಯಲ್ಲಿ ದೂರು ನೀಡುವ ಕ್ರಮ
- ಫೇಸ್‌ಬುಕ್ /ಟ್ವೀಟರ್/ಇನ್‌ಸ್ಟಾಗ್ರಾಮ್ (ಸಾಮಾಜಿಕ ತಾಣಗಳ ಮೂಲಕ)
- ಬಿ.ಎಂ.ಟಿ.ಸಿ ಮೊಬೈಲ್ ಆಪ್
- ಸಂಸ್ಥೆಯ ವಾಟ್ಸ್ ಆಪ್ ದೂರವಾಣಿ ಸಂಖ್ಯೆ(7760991212)
- Consumer.in
- Pg-portal
- E-spandana
- Ichangemycity

ಈ ರೀತಿ ಮೇಲಿನ ಎಲ್ಲಾ ಮೂಲಗಳಿಂದ ಸ್ವೀಕರಿಸುವ ಸಾರ್ವಜನಿಕ ಪ್ರಯಾಣಿಕರ ದೂರುಗಳನ್ನು ಪರಿಗಣಿಸಿ ಕ್ರಮ ಕೈಗೊಂಡು ನಿಗಧಿತ ಅವಧಿಯಲ್ಲಿ ಅವರುಗಳಿಗೆ ಪ್ರತಿಕ್ರಿಯಿಸುವ ಕೆಲಸವನ್ನು ಕೇಂದ್ರ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿದೆ.

ಮುಂದುವರೆದಂತೆ ಸಾರ್ವಜನಿಕ ಪ್ರಯಾಣಿಕರ ಅಹವಾಲುಗಳು/ಕುಂದುಕೊರತೆಗಳು/ದೂರುಗಳಿಗೆ ವಿಶೇಷ ಆದ್ಯತೆ ನೀಡಿ ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ದೂರುಗಳನ್ನು ಪರಿಶೀಲಿಸಿ ತಪ್ಪಿತಸ್ಥ ಸಿಬ್ಬಂದಿಗಳನ್ನು ಗುರುತಿಸಿ ಅವರನ್ನು ವಿಚಾರಣೆ ಮಾಡಿ ದೂರುಗಳ ಗಂಭೀರತೆಯನ್ನು ಆಧರಿಸಿ ತಪ್ಪಿತಸ್ಥ ಸಿಬ್ಬಂದಿಗಳ ವಿರುದ್ಧ ಎಚ್ಚರಿಕೆ/ಮಾರ್ಗ ಬದಲಾವಣೆ/ ಘಟಕದಿಂದ ವರ್ಗಾವಣೆ / ಹಾಗೂ ಶಿಸ್ತು ಕ್ರಮ ಜರುಗಿಸುವ ಪದ್ದತಿಯನ್ನು ಸಂಸ್ಥೆಯು ಅಳವಡಿಸಿಕೊಂಡಿರುತ್ತದೆ.

ಸಾಮಾನ್ಯವಾಗಿ ಸಾರ್ವಜನಿಕ ಪ್ರಯಾಣಿಕರಿಂದ ಸ್ವೀಕರಿಸುವ ದೂರುಗಳು:

- ಮಾರ್ಗ ಬದಲಾವಣೆಯ ಬಗ್ಗೆ
- ಬಸ್ಸುಗಳ ಸ್ವಚ್ಚತೆಯ ಬಗ್ಗೆ
- ಬಸ್ಸುಗಳ ನ್ಯೂನತೆಯ ಬಗ್ಗೆ
- ನಾಮಫಲಕ ಅಳವಡಿಸದಿರುವ ಬಗ್ಗೆ
- ನಿಗದಿತ ನಿಲ್ದಾಣದಲ್ಲಿ ಬಸ್ ನಿಲ್ಲಿಸಿದೇ ಇರುವ ಬಗ್ಗೆ
- ಅಜಾಗರೂಕ ಚಾಲನಾ ವೈಖರಿ ಬಗ್ಗೆ
- ಬಸ್ ಚಾಲನೆ ಮಾಡುವಾಗ ಮೊಬೈಲ್ ಫೋನ್ ಬಳಸುವ ಬಗ್ಗೆ
- ಅನ್ಯ ರಸ್ತೆ ಬಳಕೆದಾರರೊಡನೆ ಸಹಕರಿಸದೇ ಇರುವ ಬಗ್ಗೆ
- ನಿರ್ಧಿಷ್ಟ ಸಮಯಕ್ಕೆ ಸರಿಯಾಗಿ ವಾಹನವನ್ನು ಆಚರಣೆ ಮಾಡದೇ ಇರುವ ಬಗ್ಗೆ
- ಸಂಚಾರ ನಿಯಮಗಳನ್ನು ಪಾಲಿಸದೇ ಇರುವ ಬಗ್ಗೆ
- ಟಿಕೇಟ್ ಸರಿಯಾಗಿ ವಿತರಿಸದೇ ಇರುವ ಬಗ್ಗೆ
- ಬಾಕಿ ಇರುವ ಚಿಲ್ಲರೆಯನ್ನು ಸರಿಯಾಗಿ ಹಿಂದಿರುಗಿಸದೇ ಇರುವ ಬಗ್ಗೆ
- ತಪ್ಪಾಗಿ ಪಾಸನ್ನು ವಿತರಿಸಿರುವ ಬಗ್ಗೆ
- ರಿಯಾಯಿತಿ ದರದಲ್ಲಿ ಹಿರಿಯ ನಾಗರೀಕರಿಗೆ ಚೀಟಿಯನ್ನು ನೀಡದೇ ಇರುವ ಬಗ್ಗೆ
- ಪ್ರಯಾಣಿಕರೊಂದಿಗಿನ ಅಸಭ್ಯ ವರ್ತನೆ
- ಹಳೆ ಚೀಟಿಯನ್ನು/ಪಾಸನ್ನು ವಿತರಿಸಿರುವ ಬಗ್ಗೆ
- ಹಿರಿಯ ನಾಗರೀಕ/ಮಹಿಳಾ/ಅಂಗವಿಕಲ ಪ್ರಯಾಣಿಕರಿಗೆ ಮೀಸಲಿರಿಸಿರುವ ಆಸನಗಳನ್ನು ತೆರವು ಮಾಡಿಸಿಕೊಡಲು ವಿಫಲರಾಗಿರುವ ಬಗ್ಗೆ
- ಹಣ ಪಡೆದು ಟಿಕೇಟ್ ನೀಡದೇ ಇರುವ ಬಗ್ಗೆ

ಈ ಎಲ್ಲಾ ಸಲಹೆ/ಸೂಚನೆಗಳಿಂದ ಚಾಲಕ ಮತ್ತು ನಿರ್ವಾಹಕರ ಕರ್ತವ್ಯ ಅವಧಿಯ ಕಾರ್ಯವೈಖರಿಯ ಬಗ್ಗೆ ಹಾಗೂ ಘಟಕಗಳ ಹೊರಗಡೆ ಬಸ್ಸುಗಳಲ್ಲಿ ಆಗುತ್ತಿರುವ ಆಗುಹೋಗುಗಳ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಅದಲ್ಲದೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತಿರುತ್ತದೆ.

ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರಿಗೆ ತಮ್ಮ ದೂರುಗಳನ್ನು/ಸಲಹೆ ಮತ್ತು ಸೂಚನೆಗಳನ್ನು ದಾಖಲಿಸಲು ಹಲವಾರು ಮೂಲಗಳನ್ನು ಕಲ್ಪಿಸಿದ್ದು, ಸಂಸ್ಥೆಯ ಕರೆ ಕೇಂದ್ರವನ್ನು Single Pole Agent ನಾಗಿ ನೇಮಿಸಿ ಸಂಸ್ಥೆಯಲ್ಲಿ ದಾಖಲಾಗುವ ದೂರು/ ಸಲಹೆ ಸೂಚನೆಗಳನ್ನು ಒಂದೇ ಮಾದರಿಯಲ್ಲಿ SOP ಮೂಲಕ ವಿಲೇವಾರಿ ಮಾಡುವುದು ಮತ್ತು ಮುಖ್ಯವಾಗಿ ನಿಗಧಿತ ಸಮಯನ್ನು (Time frame) ನಿಗಧಿಪಡಿಸಿ ವಿಲೇವಾರಿ ಮಾಡಲಾಗುತ್ತಿರುತ್ತದೆ.

ಎಲ್ಲಾ ಮೂಲಗಳಿಂದ ಸ್ವೀಕರಿಸುವ ಎಲ್ಲಾ ದೂರುಗಳನ್ನು / ಸಲಹೆ ಮತ್ತು ಸೂಚನೆಗಳನ್ನು ಪರಿಗಣಿಸಿ ಪ್ರತಿಯೊಂದು ದೂರಿಗೂ docket no ಗಳನ್ನು ನೀಡಿ ದೂರನ್ನು ದಾಖಲಿಸಿದ ತಕ್ಷಣವೇ ಸಂಬಂಧಿಸಿದ ಘಟಕ/ ವಿಭಾಗ/ ಇಲಾಖೆಗೆ ದೂರಿನ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕಳುಹಿಸಿ ಯಾವುದೇ ಒಂದು ದೂರನ್ನು ಬಿಡದೇ 100% ವಿಲೇವಾರಿ ಮಾಡಲಾಗುತ್ತಿರುತ್ತದೆ ಹಾಗೂ

ಬಹು ಮುಖ್ಯವಾಗಿ ಸಂಸ್ಥೆಯು ಮಹಿಳಾ ಪ್ರಯಾಣಿಕರ ಸುರಕ್ಷತೆಗಾಗಿ ಕರೆ ಕೇಂದ್ರದಲ್ಲಿ ಪ್ರತ್ಯೇಕವಾಗಿ ಡೈಯಲ್ 2 ಸೌಲಭ್ಯವನ್ನು ನೀಡಿದ್ದು ಸಂಸ್ಥೆಯ ವಾಹನದಲ್ಲಿ ಪ್ರಯಾಣಿಸುವ ಮಹಿಳಾ ಪ್ರಯಾಣಿಕರು, ತಾವು ವಾಹನದಲ್ಲಿ ಪ್ರಯಾಣಿಸುವಾಗ ಆಗುವ ಯಾವುದೇ ತೊಂದರೆಗಾಗಿ ಕರೆ ಕೇಂದ್ರಕ್ಕೆ ಕರೆ ಮಾಡಿ ದೂರನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ದೂರುಗಳನ್ನು ಅತೀ ಶೀಘ್ರವಾಗಿ ಬಗೆ ಹರಿಸಿ ಸೂಕ್ತ ಕ್ರಮ ಕೈಗೊಳ್ಳುತ್ತಿರುತ್ತದೆ. ಸಂಸ್ಥೆಯು ಪ್ರಮುಖವಾಗಿ ದೂರುದಾರರಿಗೆ ತಮ್ಮ ದೂರಿನ ಮೇಲೆ ಕೈಗೊಂಡ ಕ್ರಮದ ಬಗ್ಗೆ, ದೂರುದಾರರ ಆಕ್ಷೇಪಣೆಗೆ ತಕ್ಕಂತೆ ದೂರುದಾರರಿಗೆ ಸೂಕ್ತ ಹಿಂಬರಹವನ್ನು ನೀಡುವ ವ್ಯವಸ್ಥೆಯನ್ನು ಬೆಳಸಿಕೊಂಡಿರುತ್ತದೆ.

ಮೇಲಿನ ಅಂಶಗಳೊಂದಿಗೆ ತಿಳಿಸುವುದೇನೆಂದರೆ, ಸಂಸ್ಥೆಯ ಮುಖ್ಯ ಹಾಗೂ ಏಕೈಕ ಉದ್ದೇಶವು ಸಮಯಬದ್ಧ, ವಿಶ್ವಸನೀಯ, ನಂಬಲರ್ಹ ಮತ್ತು ಸುರಕ್ಷಿತ ಸೇವೆಯನ್ನು ಬೆಂಗಳೂರಿನ ಜನತೆಗೆ ಒದಗಿಸುವುದು. ಹಾಗಾಗಿ ಸಂಸ್ಥೆಯಲ್ಲಿ **"ಸಾರ್ವಜನಿಕ ಪ್ರಯಾಣಿಕರ ದೂರು ವಿಭಾಗವನ್ನು"** ಕಲ್ಪಿಸಿರುವುದು ಸಾರ್ವಜನಿಕರು ಸಂಸ್ಥೆಯ ಸೇವೆಗಳ ಕುರಿತು ಪ್ರತಿಕ್ರಿಯಿಸುವ ಬಗ್ಗೆ ಗಣನೆಗೆ ತೆಗೆದುಕೊಂಡು ಸಂಸ್ಥೆಯ ಸೇವೆಗಳ ಅಭಿವೃದ್ಧಿಯ ಬಗ್ಗೆ ಹಾಗೂ ಹೊರಗಡೆ ನಡೆಯುತ್ತಿರುವ ಆಗುಹೋಗುಗಳ ಬಗ್ಗೆ ತಿಳಿಯಲು ಹಾಗೂ ಅದರ ಮೇಲೆ ಸೂಕ್ತ ಕ್ರಮ ಕೈಗೊಂಡು ಸಂಸ್ಥೆಯ ಸೇವೆಗಳ ಬಗ್ಗೆ ಸಾರ್ವಜನಿಕ ಪ್ರಯಾಣಿಕರು ವಿಶ್ವಾಸವನ್ನು ಮತ್ತು ನಂಬಿಕೆಯನ್ನು ಹೊಂದುವಂತೆ ಮಾಡಲಾಗುತ್ತಿದೆ.

3.12 ಕೇಂದ್ರ ಹಾಗೂ ರಾಜ್ಯ ಸಂಸತ್ತಿನ ಪ್ರಶ್ನಾವಳಿ:

ಸಂಸ್ಥೆಯ ಕೆಲಸ ಕಾರ್ಯಗಳಿಗೆ ಸಂಬಂಧಪಟ್ಟಂತೆ ರಾಜ್ಯ ವಿಧಾನಮಂಡಲದಿಂದ ಪ್ರಸಕ್ತ ಸಾಲಿನಲ್ಲಿ (ಗಮನ ಸೆಳೆಯುವ ಪ್ರಶ್ನೆಗಳನ್ನು ಒಳಗೊಂಡಂತೆ) 128 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಲಾಗಿರುತ್ತದೆ.

3.13 ಸಂಸ್ಥೆಯ ನೌಕರರಿಗೆ ಪ್ರಯಾಣ ಸೌಲಭ್ಯ:

1) ಕೈಗಾರಿಕಾ ಒಪ್ಪಂದಗಳ ಪ್ರಕಾರ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹಾಗೂ ಕ.ರಾ.ರ.ಸಾ.ಸಂಸ್ಥೆಯ ಎಲ್ಲಾ ದರ್ಜೆ–3 ಮತ್ತು ದರ್ಜೆ–4ರ ನೌಕರರಿಗೆ ತಮ್ಮ ಕಾರ್ಯಸ್ಥಳಕ್ಕೆ ಹಾಜರಾಗಲು ಮತ್ತು ವಾಸಸ್ಥಳಕ್ಕೆ ಹಿಂತಿರುಗಲು ಉಚಿತ ಪಾಸುಗಳನ್ನು ನೀಡಲಾಗಿದೆ.
2) ಪ್ರಯಾಣ ದೂರದ ಯಾವುದೇ ನಿಬಂಧನೆಗಳಿಲ್ಲದೆ ಬೆಂ.ಮ.ಸಾ.ಸಂಸ್ಥೆಯ ಎಲ್ಲಾ ನೌಕರರಿಗೆ ಮತ್ತು ಅವರ ಕುಟುಂಬದವರಿಗೆ ಕ.ರಾ.ರ.ಸಾ.ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಯಾವುದೇ ಸ್ಥಳಗಳಿಗೆ ಮತ್ತು ಮಾರ್ಗಗಳಲ್ಲಿ ಹೋಗಿಬರಲು ಪ್ರತಿ ವರ್ಷಕ್ಕೆ ಒಂದು ಬಾರಿ ಒಂದು ತಿಂಗಳ ಅವಧಿಗೆ ಉಚಿತ ಪಾಸ್‌ಗಳನ್ನು ನೀಡಲಾಗಿದೆ.
3) ಬೆಂ.ಮ.ಸಾ.ಸಂಸ್ಥೆ, ಕ.ರಾ.ರ.ಸಾ.ಸಂಸ್ಥೆ, ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆ ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ಸಿಬ್ಬಂದಿಯ ಎಲ್ಲಾ ಮಕ್ಕಳಿಗೆ ಶಾಲಾ ಕಾಲೇಜುಗಳಿಗೆ ನಗರ/ನಗರ ಹೊರವಲಯದಲ್ಲಿ ಹೋಗಿಬರಲು ಎರಡು ನಿರ್ದಿಷ್ಟ ಸ್ಥಳಗಳನ್ನು ಗೊತ್ತುಪಡಿಸಿ ಉಚಿತ ಪಾಸ್‌ಗಳನ್ನು ನೀಡಲಾಗಿದೆ.

3.14 ಜಾತ್ರಾ ವಿಶೇಷ ಇತ್ಯಾದಿ ವಿಶೇಷ ಸಾರಿಗೆ ಸೇವೆಗಳು:

ಬೆಂಗಳೂರು ನಗರದಲ್ಲಿ ಜಾತ್ರೆ/ಸಂತೆ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮುಂತಾದ ವಿಶೇಷ ಸಮಾರಂಭಗಳ ಸಂದರ್ಭಗಳಲ್ಲಿ ಸಂಸ್ಥೆಯು ವಿಶೇಷ ವಾಹನಗಳನ್ನು ಕಾರ್ಯಾಚರಣೆಗೊಳಿಸುತ್ತಿದೆ.

3.15 ಬಸ್ ಆದ್ಯತಾ ಪಥದ ಅನುಷ್ಠಾನ :

ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಬೈಯಪ್ಪನಹಳ್ಳಿವರೆಗೆ 22.0 ಕಿ.ಮೀಗಳ ಮಾರ್ಗದಲ್ಲಿ ಮೊದಲನೇ ಹಂತದ ಬಸ್ ಆದ್ಯತಾ ಪಥವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿರುತ್ತದೆ. ಎರಡನೇ ಹಂತದಲ್ಲಿ ಹೆಚ್ಚಿನ ಸಂಚಾರ ದಟ್ಟಣೆಯ 12 ಕಾರಿಡಾರ್‌ಗಳನ್ನು ಗುರುತಿಸಿದ್ದು, ಸದರಿ ಕಾರಿಡಾರ್‌ಗಳಲ್ಲಿ ಬಸ್ ಆದ್ಯತಾ ಪಥವನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಯು ಬೆಂಗಳೂರು ನಗರದ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸಲು ಸಹಕಾರಿಯಾಗಿದೆ.







3.16 ಸೇವಾಗುಣಮಟ್ಟ:

ಈ ವರದಿಯ ಅವಧಿಯಲ್ಲಿ ಒಟ್ಟು 224 ಅಪಘಾತಗಳು ಸಂಭವಿಸಿದ್ದು, ಹಿಂದಿನ ವರ್ಷದಲ್ಲಿ 286 ಅಪಘಾತಗಳು ದಾಖಲಾಗಿರುತ್ತವೆ. ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಿದ್ದು, ವಿಭಾಗವಾರು ಅಪಘಾತಗಳ ವಿವರಗಳನ್ನು ಅನುಬಂಧ–7ರಲ್ಲಿ ನೀಡಲಾಗಿದೆ.

ಅಂಶಗಳು	2019–20		2018–19	
	ಅಪಘಾತಗಳ ಸಂಖ್ಯೆ	1 ಲಕ್ಷ ಕಿ.ಮೀ.ಗೆ ಪ್ರಮಾಣ	ಅಪಘಾತಗಳ ಸಂಖ್ಯೆ	1 ಲಕ್ಷ ಕಿ.ಮೀ.ಗೆ ಪ್ರಮಾಣ
ಲಘು	164	0.04	205	0.05
ಭಾರಿ	12	0.00	26	0.01
ಮಾರಣಾಂತಿಕ	48	0.01	55	0.01
ಒಟ್ಟು	224	0.05	286	0.07
ಸಾವನ್ನಪ್ಪಿರುವವರ ಸಂಖ್ಯೆ	51	–	61	–
ಗಾಯಗೊಂಡವರ ಸಂಖ್ಯೆ	201	–	245	–

3.17 ಖಾಯಂ ಗುತ್ತಿಗೆ ಆಧಾರದ ಸೇವೆಗಳು :

ಸಂಸ್ಥೆಯ ಆದಾಯವನ್ನು ವೃದ್ಧಿಸುವ ಸಲುವಾಗಿ ಕಂಪನಿ/ಕಾರ್ಖಾನೆಗಳ ಕಾರ್ಮಿಕರಿಗೆ ಹಾಗೂ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಖಾಯಂ ಗುತ್ತಿಗೆ ಆಧಾರದ ಮೇರೆಗೆ ವಿಶೇಷ ಸುತ್ತುವಳಿಗಳ ಮೂಲಕ ಸೂಚಿಸಿರುವ ಸ್ಥಳಗಳಿಂದ ಕರೆತರಲು ಹಾಗೂ ನಿಗದಿಯಾದ ಸ್ಥಳಗಳಿಗೆ ಬಿಡಲು ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿದ್ದು, ಈ ಸೇವೆಗಳಿಂದ ಪ್ರಸಕ್ತ 2019–20ನೇ ಸಾಲಿನಲ್ಲಿ ರೂ. 30.23 ಕೋಟಿ ರೂಪಾಯಿಗಳ ಆದಾಯ ಗಳಿಸಿದ್ದು, 2018–19ನೇ ಸಾಲಿನಲ್ಲಿ ರೂ.31.39 ಕೋಟಿ ರೂಪಾಯಿ ಆದಾಯ ಗಳಿಸಿತ್ತು.

3.17.1 ಖಾಯಂ ಗುತ್ತಿಗೆ ದರಗಳು:

(ಅ) ಸಾಮಾನ್ಯ ಬಸ್ಸುಗಳಿಗೆ (40 ಆಸನಗಳು):

ದರಗಳು (ಪ್ರತಿ ಕಿ.ಮೀ.ಗೆ)	
ಶಾಲೆಗಳಿಗೆ	ರೂ.35.00
ಕಾಲೇಜುಗಳಿಗೆ	ರೂ.35.00
ಕೈಗಾರಿಕೆಗಳು, ಕಾರ್ಖಾನೆಗಳು, ಇತರೆ ಸಂಸ್ಥೆಗಳು	ರೂ.40.00

(ಆ) ಪುಷ್ಪಕ್ ಬಸ್ಸುಗಳಿಗೆ (47 ಆಸನಗಳು):

ದರಗಳು (ಪ್ರತಿ ಕಿ.ಮೀ.ಗೆ)	
ಶಾಲೆಗಳಿಗೆ	ರೂ.40.00
ಕಾಲೇಜುಗಳಿಗೆ	ರೂ.42.00
ಕೈಗಾರಿಕೆಗಳು, ಕಾರ್ಖಾನೆಗಳು, ಇತರೆ ಸಂಸ್ಥೆಗಳು	ರೂ.45.00

(ಈ) ಮಿಡಿ ಬಸ್ಸುಗಳಿಗೆ (31 ಆಸನಗಳು):

ದರಗಳು (ಪ್ರತಿ ಕಿ.ಮೀ.ಗೆ)	
ಶಾಲೆಗಳಿಗೆ	ರೂ.32.00
ಕಾಲೇಜುಗಳಿಗೆ	ರೂ.32.00
ಕೈಗಾರಿಕೆಗಳು, ಕಾರ್ಖಾನೆಗಳು, ಇತರೆ ಸಂಸ್ಥೆಗಳು	ರೂ.35.00

3.18 ಡೆಡಿಕೇಟೆಡ್ ಸೇವೆಗಳು :

ಕಂಪನಿ/ಕಾರ್ಖಾನೆಗಳ ಸಿಬ್ಬಂದಿಗಳು ಕಾರ್ಖಾನೆಯ ಸಮಯಕ್ಕೆ ಹೋಗಲು ಹಾಗೂ ಮರಳಿ ಬರಲು ಅನುಕೂಲವಾಗುವಂತೆ ಡೆಡಿಕೇಟೆಡ್ ಸುತ್ತುವಳಿಗಳ ಸೇವೆಯನ್ನು ಒದಗಿಸಲಾಗುತ್ತಿದೆ, ಇದಕ್ಕಾಗಿ ಮಾಸಿಕ ಪ್ರೀಮಿಯಂ ಪಾಸುಗಳನ್ನು ವಿತರಿಸುತ್ತಿದ್ದು, ಸದರಿ ಪಾಸ್‌ಗಳ ದರದ ವಿವರ ಈ ಕೆಳಗಿನಂತಿವೆ.

ಪಾಸ್ ದರಗಳು (ಪ್ರತಿ ತಿಂಗಳಿಗೆ)	
ಸಾಮಾನ್ಯ ವಾಹನಗಳ ಡೆಡಿಕೇಟೆಡ್ ಪ್ರೀಮಿಯಂ	ರೂ.2500/–
ವಜ್ರ ಗೋಲ್ಡ್ ಪ್ಲಸ್	ರೂ.3250/–
ವೋಲ್ವೋ ಡೆಡಿಕೇಟೆಡ್ ಪ್ರೀಮಿಯಂ (41 ಆಸನಗಳು)	ರೂ.4500/–
ವೋಲ್ವೋ ಡೆಡಿಕೇಟೆಡ್ ಪ್ರೀಮಿಯಂ (35 ಆಸನಗಳು)	ರೂ.4700/–
ಏಕ ಸುತ್ತುವಳಿ ಸಾಮಾನ್ಯ ವಾಹನ ಡೆಡಿಕೇಟೆಡ್ ಪ್ರೀಮಿಯಂ	ರೂ.1200/–

ಡೆಡಿಕೇಟೆಡ್ ಸೇವೆಗಳಿಂದ 2019–20ನೇ ಸಾಲಿನಲ್ಲಿ ರೂ. 61.01 ಕೋಟಿ ರೂಪಾಯಿಗಳ ಆದಾಯ ಗಳಿಸಿದ್ದು, 2018–19ನೇ ಸಾಲಿನಲ್ಲಿ ಈ ಆದಾಯವು ರೂ. 58.61 ಕೋಟಿ ರೂಪಾಯಿಗಳಾಗಿತ್ತು.

3.19 ಸಾಂದರ್ಭಿಕ ಒಪ್ಪಂದದ ಸೇವೆಗಳು:

ಸಂಸ್ಥೆಯು ಸಾರ್ವಜನಿಕರಿಗೆ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿರುವ ಜೊತೆಯಲ್ಲಿ, ಸಂಸ್ಥೆಯ ಆದಾಯವನ್ನು ವೃದ್ಧಿಸುವ ಸಲುವಾಗಿ ಈ ಕೆಳಕಂಡ ದರಗಳನ್ನು ನಿಗದಧಿಪಡಿಸಿ ಸಾಂದರ್ಭಿಕ ಒಪ್ಪಂದದ ಸೇವೆಗಳನ್ನು ಕಿ.ಮೀ ಗಳ ಆಧಾರದ ಮೇರೆಗೆ ಹಾಗೂ ಗಂಟೆಗಳ ಲೆಕ್ಕಗಳಲ್ಲಿ ಒದಗಿಸಲಾಗುತ್ತಿದೆ.

ದಿನಾಂಕ: 31.03.2020ರಂತೆ ಸಾಂದರ್ಭಿಕ ಒಪ್ಪಂದದ ದರಗಳು

ಅ) ಕಿ.ಮೀ ಗಳ ಆಧಾರದ ಮೇರೆಗೆ:

ವಾಹನ ಮಾದರಿ	ಆಸನ ಸಾಮರ್ಥ್ಯ	ಅವಧಿ	ದರ/ಕಿ.ಮೀ	ಕನಿಷ್ಠ	ಒಟ್ಟು ಮೊತ್ತ ಒಂದು ದಿನಕ್ಕೆ
ಸಾಮಾನ್ಯ	40	1 ದಿನ	ರೂ. 36/–	250 ಕಿ.ಮೀ	ರೂ. 9000/–
				300 ಕಿ.ಮೀ	ರೂ. 10800/–
ಪುಷ್ಪಕ್/ಪುಷ್ಪಕ್ ಪ್ಲಸ್	47	1 ದಿನ	ರೂ. 40/–	250 ಕಿ.ಮೀ	ರೂ. 10000/–
				300 ಕಿ.ಮೀ	ರೂ. 12000/–

ಶಾಲೆ ಕಾಲೇಜುಗಳಿಗೆ ರಿಯಾಯಿತಿ

ವಾಹನ ಮಾದರಿ	ಆಸನ ಸಾಮರ್ಥ್ಯ	ಅವಧಿ	ದರ/ಕಿ.ಮೀ	ಒಟ್ಟು ಮೊತ್ತ ಒಂದು ದಿನಕ್ಕೆ
ಸಾಮಾನ್ಯ/– ಲೋಪ್ಲೋರ್/ಸುವರ್ಣ	ಶಾಲೆಗಳಿಗೆ	1 ದಿನ	ರೂ. 34	ರೂ. 8500/–
	ಕಾಲೇಜುಗಳಿಗೆ	1 ದಿನ	ರೂ. 35	ರೂ. 8750/–
ಪುಷ್ಪಕ್/ಪುಷ್ಪಕ್ ಪ್ಲಸ್	ಶಾಲೆಗಳಿಗೆ	1 ದಿನ	ರೂ. 38	ರೂ. 9500/–
	ಕಾಲೇಜುಗಳಿಗೆ	1 ದಿನ	ರೂ. 39	ರೂ. 9750/–

ಹವಾನಿಯಂತ್ರಿತ (ವೋಲ್ವೋ) ವಾಹನಗಳ ಸಾಂದರ್ಭಿಕ ಒಪ್ಪಂದದ ದರಗಳು(ಹವಾನಿಯಂತ್ರಿತ ವಾಹನಗಳ ಶೇಕಡ 100ರಷ್ಟು ಬಾಡಿಗೆ ಮೊತ್ತಕ್ಕೆ ಶೇಕಡ 5ರಷ್ಟು ಜಿ.ಎಸ್.ಟಿ. ಮೊತ್ತವನ್ನು ಒಳಗೊಂಡು)

ಸೋಮವಾರದಿಂದ ಶುಕ್ರವಾರ

ಗಂಟೆಗಳ ಲೆಕ್ಕದಲ್ಲಿ	24 ಗಂಟೆಗಳಿಗೆ ನಗರದಿಂದ 100 ಕಿ.ಮೀ ಒಳಗಿನ ಸ್ಥಳಗಳಿಗೆ (ಕನಿಷ್ಟ 200 ಕಿ.ಮೀ) ಪ್ರತಿ ಕಿ.ಮೀ ದರ ರೂ.75/–	24 ಗಂಟೆಗಳಿಗೆ ನಗರದಿಂದ 100 ಕಿ.ಮೀ ಹೊರಗಿನ ಸ್ಥಳಗಳಿಗೆ (ಕನಿಷ್ಟ 250 ಕಿ.ಮೀ) ಪ್ರತಿ ಕಿ.ಮೀ ದರ ರೂ.75/–	12 ಗಂಟೆಗಳಿಗೆ (ಕನಿಷ್ಟ 150 ಕಿ.ಮೀ) ಪ್ರತಿ ಕಿ.ಮೀ ದರ ರೂ.75/–	08 ಗಂಟೆಗಳಿಗೆ (ಕನಿಷ್ಟ 100 ಕಿ.ಮೀ) ಪ್ರತಿ ಕಿ.ಮೀ ದರ ರೂ.80/–
ಒಟ್ಟು ಮೊತ್ತ	ರೂ. 15750/–	ರೂ. 19688/–	ರೂ.11813/–	ರೂ. 8400/–

ಶನಿವಾರ, ಭಾನುವಾರ ಹಾಗೂ ರಜಾ ದಿನಗಳಲ್ಲಿ ರೂ.70/– ಹಾಗೂ ರೂ. 65/–ರಂತೆ ವಿಶೇಷ ರಿಯಾಯಿತಿ ದರದಲ್ಲಿ ಒದಗಿಸುವ ಹವಾನಿಯಂತ್ರಿತ ವಜ್ರ (ವೋಲ್ವೋ) ವಾಹನಗಳ ದರಗಳು ಈ ಕೆಳಕಂಡಂತಿದೆ.

ಗಂಟೆಗಳ ಲೆಕ್ಕದಲ್ಲಿ	24 ಗಂಟೆಗಳಿಗೆ ನಗರದಿಂದ 100 ಕಿ.ಮೀ ಒಳಗಿನ ಸ್ಥಳಗಳಿಗೆ (ಕನಿಷ್ಟ 200 ಕಿ.ಮೀ) ಪ್ರತಿ ಕಿ.ಮೀ ದರ 65/–	24 ಗಂಟೆಗಳಿಗೆ ನಗರದಿಂದ 100 ಕಿ.ಮೀ ಹೊರಗಿನ ಸ್ಥಳಗಳಿಗೆ (ಕನಿಷ್ಟ 250 ಕಿ.ಮೀ) ಪ್ರತಿ ಕಿ.ಮೀ ದರ 65/–	12 ಗಂಟೆಗಳಿಗೆ (ಕನಿಷ್ಟ 150 ಕಿ.ಮೀ) ಪ್ರತಿ ಕಿ.ಮೀ ದರ 65/–	08 ಗಂಟೆಗಳಿಗೆ (ಕನಿಷ್ಟ 100 ಕಿ.ಮೀ) ಪ್ರತಿ ಕಿ.ಮೀ ದರ 70/–
ಒಟ್ಟು ಮೊತ್ತ	ರೂ. 13650/–	ರೂ. 17063/–	ರೂ.10238/–	ರೂ. 7350/–

ಆ) ಗಂಟೆಗಳ ಲೆಕ್ಕದ ಒಪ್ಪಂದದ ದರಗಳು

ವಾಹನ ಮಾದರಿ	ಅವಧಿ	ಕನಿಷ್ಠ ಮಿತಿ	ಪ್ರತಿ ಗಂಟೆಗೆ ದರ	4 ಗಂಟೆಗೆ ಬಾಡಿಗೆ
ಸಾಮಾನ್ಯ ಮತ್ತು ಲೋಪ್ಲೋರ್	4 ಗಂಟೆ	150 ಕಿ.ಮೀಗಳು	ರೂ. 900/–	ರೂ.6750/–
ಪುಷ್ಪಕ್/ಪುಷ್ಪಕ್ ಜನಪ್ರಿಯ ವಾಹಿನಿ	4 ಗಂಟೆ	50 ಕಿ.ಮೀಗಳು	ರೂ. 1000/–	ರೂ.7500/–

ಸಾಂದರ್ಭಿಕ ಒಪ್ಪಂದ ಸೇವೆಗಳಲ್ಲಿ ಹೊಸ ಯೋಜನೆಗಳನ್ನು ಅಳವಡಿಸಿ ಪ್ರಯಾಣಿಕರಿಗೆ ಹೆಚ್ಚು ಅನುಕೂಲವನ್ನು ಮಾಡಿಕೊಡಲಾಗಿದೆ. ಒಪ್ಪಂದದ ಮೇಲೆ ಬಸ್‌ಗಳನ್ನು ಗಂಟೆ ಲೆಕ್ಕದಲ್ಲಿಯೂ ಕೊಡಲಾಗುತ್ತಿದೆ. ಈ ಸೇವೆಗಳ ಪ್ರಯೋಜನವನ್ನು ಪ್ರಯಾಣಿಕರು ಇನ್ನಷ್ಟು ಪಡೆದುಕೊಳ್ಳುವಂತೆ ಮಾಡಲು ಪ್ರೋತ್ಸಾಹ ಧನ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಸಾಂದರ್ಭಿಕ ಒಪ್ಪಂದದ ಸೇವೆಗಳಿಂದ ಗಳಿಸಿದ ಆದಾಯವು 2019–20ರಲ್ಲಿ 13.71ಕೋಟಿ ರೂಪಾಯಿಗಳಾಗಿದ್ದು(ಪೊಲೀಸ್ ಮತ್ತು ಚುನಾವಣಾ ಸಾಂದರ್ಭಿಕ ಒಪ್ಪಂದ ಸೇರಿಸಿ) ಇದು 2018–19 ರಲ್ಲಿ 20.51 ಕೋಟಿ ರೂಪಾಯಿಗಳಾಗಿರುತ್ತದೆ.

3.20 ಜಾಹೀರಾತುಗಳು:

ವಾಣಿಜ್ಯ ಆದಾಯವನ್ನು ಹೆಚ್ಚಿಸಲು ಬೆಂ.ಮ.ಸಾ.ಸಂಸ್ಥೆಯು ತನ್ನ ಬಸ್ಸುಗಳ ಮೇಲೆ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸಲು ಹಾಗೂ ಪ್ರಮುಖ ಸ್ಥಳಗಳಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಲು ಅವಕಾಶ ಕಲ್ಪಿಸಿರುತ್ತದೆ ಇದರಿಂದಾಗಿ ಸಂಸ್ಥೆಯು ಪ್ರಸಕ್ತ ಸಾಲಿನಲ್ಲಿ ರೂ. 26.60 ಕೋಟಿ ರೂಪಾಯಿಗಳ ಆದಾಯವನ್ನು ಗಳಿಸಿದೆ. 2018–19 ನೇ ಸಾಲಿನಲ್ಲಿ ಈ ಆದಾಯವು ರೂ.20.33 ಕೋಟಿಗಳಷ್ಟಿತ್ತು.

3.21 ವಾಣಿಜ್ಯ ಮಳಿಗೆಗಳು:

ಸಂಸ್ಥೆಯು ತನ್ನ ವಾಣಿಜ್ಯ ಮಳಿಗೆಗಳಿಂದ ಪ್ರಸಕ್ತ ಸಾಲಿನಲ್ಲಿ ರೂ. 60.91 ಕೋಟಿ ಆದಾಯಗಳಿಸಿದ್ದು, 2018–19 ನೇ ಸಾಲಿನಲ್ಲಿ ಈ ಆದಾಯವು ರೂ.63.15 ಕೋಟಿಗಳಷ್ಟಿತ್ತು. ವಾಣಿಜ್ಯ ಮಳಿಗೆಗಳ ವಿವರಗಳನ್ನು ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ.

ವಾಣಿಜ್ಯ ಮಳಿಗೆಗಳು	
1. ಸರ್ಕಾರಿ ಅಧೀನ ಸಂಸ್ಥೆಯ ಮಳಿಗೆಗಳು	28
2. ಸಾಮಾನ್ಯ ಮಳಿಗೆಗಳು	127
3. ಬ್ಯಾಂಕ್ ಎ.ಟಿ.ಎಂ ಕೌಂಟರ್‌ಗಳು	29
4. ಟೆಲಿಫೋನ್ ಬೂತ್ ಕಂ ಜನರಲ್ ಸ್ಟಾಲ್	2
5. ಸಮುದಾಯ ಭವನ	1
6. ಟಿಟಿಎಂಸಿಗಳಲ್ಲಿನ ವಾಣಿಜ್ಯ ಮಳಿಗೆ/ಕಛೇರಿ	81

7. ಪಾರ್ಕಿಂಗ್ ಸ್ಥಳ	11
8. ಫ್ಲಾಟ್‌ಗಳು	32
9. ಶೌಚಾಲಯ ಸಂಕೀರ್ಣಗಳು(ಪಾವತಿಸಿ ಉಪಯೋಗಿಸುವುದು)	38
10. ಘಟಕಗಳಲ್ಲಿನ ತೆರೆದ ಸ್ಥಳಗಳು	3
11. ಕ್ಯಾಂಟೀನ್‌ಗಳು (ಘಟಕಗಳಲ್ಲಿ)	20
ಒಟ್ಟು	**372**
ಮೊಬೈಲ್ ಟವರ್ಸ್ ಮೆ//ರಿಲಯನ್ಸ್ ಜಿಯೋ ಇನ್‌ಫೋಕಾಂ ಲಿ.	61 ಸ್ಥಳಗಳಲ್ಲಿ
ಮೊಬೈಲ್ ಟವರ್ಸ್ ಮೆ//ಇಂಡಸ್ ಟವರ್ಸ್	17

ಪರಿಚ್ಛೇದ – 4

ಆಟೋ ಇಂಜಿನಿಯರಿಂಗ್

4.1 ವಾಹನ ಬಲ:

ದಿನಾಂಕ 31/03/2020 ರಂತೆ ಸಂಸ್ಥೆಯಲ್ಲಿ 6690 ಪ್ರಯಾಣಿಕ ವಾಹನಗಳಿರುತ್ತವೆ. ಈ ವಾಹನಬಲದಲ್ಲಿ ಬೆಂಕಿ ಅನಾಹುತಕ್ಕೀಡಾಗಿ ಕೇಂದ್ರೀಯ ಕಾರ್ಯಾಗಾರ–1ರಲ್ಲಿರುವ 4 ವೋಲ್ವೋ, 3 ಲೇಲ್ಯಾಂಡ್ ಹಾಗೂ 1 ಟಾಟಾ, ಒಟ್ಟು 8 ವಾಹನಗಳು ಹಾಗೂ ಅಪಘಾತಕ್ಕೀಡಾಗಿ ಘಟಕ–7 ರಲ್ಲಿರುವ 1 ವೋಲ್ವೋ ವಾಹನವನ್ನು, ಒಟ್ಟಾರೆಯಾಗಿ 9 ವಾಹನಗಳನ್ನು ಹೊರತುಪಡಿಸಲಾಗಿರುತ್ತದೆ. ಸದರಿ ವರ್ಷದಲ್ಲಿ 95 ಲೇಲ್ಯಾಂಡ್, 57 ಟಾಟಾ ಹಾಗೂ 38 ಐಷರ್, ಒಟ್ಟು 190 ವಾಹನಗಳನ್ನು ಸಂಸ್ಥೆಯ ನಿಯಮಾವಳಿಯಂತೆ ಅನುಪಯುಕ್ತಗೊಳಿಸಲಾಗಿರುತ್ತದೆ.

ದಿನಾಂಕ: 31/03/2020 ರಂತೆ ಸಂಸ್ಥೆಯಲ್ಲಿ ಕಾರ್ಯಾಚರಣೆಯಲ್ಲಿದ್ದ ಒಟ್ಟಾರೆ ವಾಹನ ಬಲವನ್ನು ದಿನಾಂಕ: 31/03/2019ಕ್ಕೆ ಹೋಲಿಕೆ ಮಾಡಿದ್ದು, ವಿವರಗಳು ಕೆಳಕಂಡಂತಿರುತ್ತವೆ.

ಪಟ್ಟಿ–10

ಕ್ರಮ ಸಂಖ್ಯೆ	ವಿವರಗಳು	31-03-2020ಕ್ಕೆ ಇದ್ದಂತೆ ಸ್ಥಿತಿ	31-03-2019ಕ್ಕೆ ಇದ್ದಂತೆ ಸ್ಥಿತಿ
1	ನೊಂದಾಯಿಸಿದ ಪ್ರಯಾಣಿಕ ವಾಹನಗಳು		
	ಅ. ಲೇಲ್ಯಾಂಡ್	2094	2189
	ಆ. ಟಾಟಾ	3278	2990
	ಇ. ಐಷರ್	457	491
	ಈ. ಸ್ವರಾಜ್ ಮಜ್ದಾ	1	1
	ಉ. ವೋಲ್ವೋ	835	825
	ಊ. ಕರೋನಾ	25	25
	ಒಟ್ಟು (ಅ ನಿಂದ ಊ ವರೆಗೆ)	6690	6521
2	ಇಲಾಖಾ ವಾಹನಗಳು		
	ಅ. ಕಾರುಗಳು, ಜೀಪುಗಳು ಮತ್ತು ವ್ಯಾನುಗಳು	109	103
	ಆ. ಟ್ರಕ್ಕುಗಳು ಮತ್ತು ಕ್ಯಾಂಪರ್‌ಗಳು	3	10
	ಇ. ನೀರಿನ ಟ್ಯಾಂಕರ್, ಕ್ರೇನ್, ಮೋಟಾರ್ ಸೈಕಲ್, ಮೊಬೈಲ್ ವರ್ಕ್‌ಶಾಪ್, ಆಂಬುಲೆನ್ಸ್, ಇತ್ಯಾದಿ	20	23
	ಒಟ್ಟು (ಅ ನಿಂದ ಇ ವರೆಗೆ)	**132**	**136**

ಕ್ರಮಿಸಿರುವ ಕಿಲೋಮೀಟರುಗಳ ಆಧಾರದ ಮೇಲೆ ವಿಭಜಿಸಲಾದ ವಾಹನಗಳ ವಯೋಮಾನದ ವಿವರಗಳು ಈ ಕೆಳಕಂಡಂತಿವೆ:

ಪಟ್ಟಿ–11

ಕ್ರಮಿಸಿರುವ ದೂರ (ಲಕ್ಷ ಕಿ.ಮೀ.ಗಳಲ್ಲಿ)	ಲೇಲ್ಯಾಂಡ್		ಟಾಟಾ		ವೋಲ್ವೋ		ಐಷರ್		ಕರೋನಾ		ಒಟ್ಟು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
0–1	0	0.00	348	10.61	13	1.56	19	4.16	0	0.00	380	5.68
1–2	1	0.05	1050	32.01	68	8.14	239	52.30	0	0.00	1358	20.30
2–3	11	0.53	273	8.32	66	7.90	64	14.00	2	8.00	416	6.22
3–4	105	5.02	14	0.43	17	2.04	1	0.22	23	92.00	160	2.39

4–5	304	14.53	222	6.77	67	8.02	0	0.00	0	0.00	593	8.87
5–6	428	20.46	531	16.19	221	26.47	0	0.00	0	0.00	1180	17.64
6–7	180	8.60	423	12.90	229	27.43	0	0.00	0	0.00	832	12.44
7–7.5	82	3.92	165	5.03	47	5.63	0	0.00	0	0.00	294	4.40
7.5–8	145	6.93	121	3.69	26	3.11	9	1.97	0	0.00	301	4.50
8–8.5	218	10.42	59	1.80	25	2.99	17	3.72	0	0.00	319	4.77
8.5–9	226	10.80	36	1.10	24	2.87	28	6.13	0	0.00	314	4.69
9–9.5	156	7.46	20	0.61	13	1.56	38	8.32	0	0.00	227	3.39
9.5–10	106	5.07	9	0.27	11	1.32	24	5.25	0	0.00	150	2.24
10 ಲಕ್ಷ ಮತ್ತು ಮೇಲ್ಪಟ್ಟು	130	6.21	9	0.27	8	0.96	18	3.94	0	0.00	165	2.47
ಒಟ್ಟು	**2092**	**100.00**	**3280**	**100.00**	**835**	**100.00**	**457**	**100.00**	**25**	**100.00**	**6689**	**100.00**

4.2 ವಾಹನಗಳು, ಸಂಯೋಜಿತ ಭಾಗಗಳು ಹಾಗೂ ಟೈರುಗಳ ಕಾರ್ಯನಿರ್ವಹಣೆ:

2019–20ನೇ ಸಾಲಿನಲ್ಲಿ ಕಾರ್ಯಾಚರಣೆಗೊಂಡ ಒಟ್ಟು ವಾಹನ, ಮುಖ್ಯ ಜೋಡಣೆಗಳ ಕಾರ್ಯಕ್ಷಮತೆ ಹಾಗೂ ಇನ್ನಿತರೆ ವಿವರಗಳನ್ನು, 2018–19 ನೇ ಸಾಲಿನ ಕಾರ್ಯ ನಿರ್ವಹಣೆಗಳ ಹೋಲಿಕೆಯೊಂದಿಗೆ, ಕೆಳಕಂಡಂತೆ ಇರುತ್ತವೆ.

ಪಟ್ಟಿ–12

ಕ್ರ.ಸಂ	ವಿವರಗಳು	2019–20	2018–19
1	ವಾಹನಗಳ ಸರಾಸರಿ ವಯೋಮಾನ		
	ಲಕ್ಷ ಕಿ.ಮೀ.ಗಳಲ್ಲಿ	5.06	4.83
	ವರ್ಷಗಳಲ್ಲಿ	6.9	6.6
2	11 ವರ್ಷಗಳಿಗೂ ಮೇಲ್ಪಟ್ಟ ಸಾಮಾನ್ಯ ವಾಹನಗಳ ಶೇಕಡ ಪ್ರಮಾಣ	17.2	11.2
	15 ವರ್ಷಗಳಿಗೂ ಮೇಲ್ಪಟ್ಟ ಹವಾನಿಯಂತ್ರಿತ ವಾಹನಗಳ ಶೇಕಡ ಪ್ರಮಾಣ	–	–
	ಒಟ್ಟು	14.9	10.6
3	ಸರಾಸರಿ ವಾಹನ ಯಪಯುಕ್ತತೆ (ಕಿ.ಮೀ.ಗಳಲ್ಲಿ)	200.4	202.6
4	ಶೇಕಡ ವಾಹನ ಬಳಕೆ	85.1	84.1
5	ಆಫ್ ರೋಡ್ ವಾಹನಗಳ ಶೇಕಡವಾರು ಪ್ರಮಾಣ	7.2	11.2
6	ಪ್ರತಿ 10,000 ಕಿ.ಮೀ.ಗಳಿಗೆ ವಾಹನಗಳ ಅವಘಡಗಳ ಪ್ರಮಾಣ	0.03	0.03
7	ಇಂಧನ ಬಳಕೆ–ಪ್ರತಿ ಲೀಟರ್‌ಗೆ ಕಿ.ಮೀ.ಗಳು (ಕೆ.ಎಂ.ಪಿ.ಎಲ್.)	3.75	3.74
8	ಇಂಜಿನ್ ಯಂತ್ರದ ಎಣ್ಣೆ ಟಾಪ್ ಅಪ್– ಪ್ರತಿ ಲೀಟರ್‌ಗೆ ಕಿ.ಮೀ.ಗಳು	4640	4481
9	ಟೈರುಗಳ ಸರಾಸರಿ ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ)		
ಅ	ಹೊಸದು	1.00	0.93
ಆ	ಮರುಒಪ್ಪ ಮಾಡಿದ್ದು	0.54	0.51
ಇ	ಟೈರುಗಳ ಒಟ್ಟು ಸರಾಸರಿ ಜೀವಮಾನ	1.77	1.73
10	ಬ್ಯಾಟರಿಗಳ ಸರಾಸರಿ ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ)	2.16	2.08
11	ಇಂಜಿನ್‌ಗಳ ಸರಾಸರಿ ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ) (ವೋಲ್ವೋ ಹೊರತುಪಡಿಸಿ)		
ಅ	ಹೊಸದು	7.19	7.90
ಆ	ಪುನಃಶ್ಚೇತನಗೊಳಿಸಿದ್ದು	1.96	1.83

12	ಎಫ್.ಐ.ಪಂಪುಗಳ ಸರಾಸರಿ ಜೀವಮಾನ (ಲಕ್ಷ ಕಿ.ಮೀ.ಗಳಲ್ಲಿ) (ವೋಲ್ವೋ ಹೊರತುಪಡಿಸಿ)		
ಅ	ಹೊಸದು	3.78	4.62
ಆ	ಪುನಃಶ್ಚೇತನಗೊಳಿಸಿದ್ದು	0.47	0.54

4.3. ಅವಘಡಗಳು:

ದಿನಾಂಕ 31–03–2020ಕ್ಕೆ ಕೊನೆಗೊಂಡ ಅವಧಿಯಲ್ಲಿನ ಕಾರಣವಾರು ಬ್ರೇಕ್‌ಡೌನ್‌ಗಳ ಪ್ರಮಾಣದ ವಿವರಗಳನ್ನು ದಿನಾಂಕ 31–03–2019ರ ವಿವರಗಳ ಹೋಲಿಕೆಯೊಂದಿಗೆ ಪಟ್ಟಿ–13 ರಲ್ಲಿ ನೀಡಲಾಗಿದೆ.

ಪಟ್ಟಿ–13

ಕ್ರಮ ಸಂಖ್ಯೆ	ವ್ಯವಸ್ಥೆ	ಬ್ರೇಕ್‌ಡೌನ್‌ಗಳ ಸಂಖ್ಯೆ		ಒಟ್ಟು ಸಂಖ್ಯೆಗೆ ಶೇಕಡ ಪ್ರಮಾಣ		10,000 ಕಿ.ಮೀ.ಗಳಿಗೆ ಪ್ರಮಾಣ	
		2019–20	2018–19	2019–20	2018–19	2019–20	2018–19
1	ವಿದ್ಯುತ್ತಿಗೆ ಸಂಬಂಧಿಸಿದಂತೆ	209	208	16.3	16.7	0.01	0.01
2	ಯಂತ್ರ (ಶಕ್ತಿ)	109	107	8.5	8.6	0.00	0.00
3	ಟ್ರಾನ್ಸ್‌ಮಿಷನ್	581	593	45.2	47.7	0.01	0.01
4	ಮುಂದಿನ ಆಕ್ಸಲ್ ಸ್ಟೀರಿಂಗ್	16	25	1.2	2.0	0.00	0.00
5	ಬ್ರೇಕ್	157	140	12.2	11.3	0.01	0.01
6	ಸ್ಪ್ರಿಂಗ್	21	4	1.6	0.3	0.00	0.00
7	ಇಂಧನ	46	39	3.6	3.1	0.00	0.00
8	ಟೈರು ಪಂಕ್ಚರ್	129	123	10.0	9.9	0.00	0.00
9	ಇತರೆ ವೈಫಲ್ಯಗಳು	16	4	1.2	0.3	0.00	0.00
	ಒಟ್ಟು	**1284**	**1243**	**100.0**	**100.0**	**0.03**	**0.03**

4.4 ಮಾದರಿವಾರು ಕೆ.ಎಂ.ಪಿ.ಎಲ್:

2019–20ನೇ ಸಾಲಿನ ಮಾದರಿವಾರು ಕೆ.ಎಂ.ಪಿ.ಎಲ್ ವಿವರಗಳನ್ನು ಹಿಂದಿನ ವರ್ಷ 2018–19ಕ್ಕೆ ಹೋಲಿಕೆ ಮಾಡಿದ ವಿವರಗಳನ್ನು ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ.

ವಲಯ	ಲೇಲ್ಯಾಂಡ್		ಟಾಟಾ		ಐಷರ್		ವೋಲ್ವೋ		ಕರೋನಾ		ಒಟ್ಟು	
	2019–20	2018–19	2019–20	2018–19	2019–20	2018–19	2019–20	2018–19	2019–20	2018–19	2019–20	2018–19
ಪೂರ್ವ	4.35	4.34	4.04	4.05	4.31	4.27	–	–	–	–	4.25	4.24
ಪಶ್ಚಿಮ	3.98	3.94	3.79	3.78	–	–	–	–	–	–	3.84	3.83
ಉತ್ತರ	4.06	4.08	3.99	4.00	–	–	–	–	–	–	4.01	4.03
ದಕ್ಷಿಣ	4.12	4.15	3.83	3.80	–	–	–	–	–	–	4.01	4.02
ಈಶಾನ್ಯ	4.53	4.51	4.26	4.19	4.39	4.37	–	–	–	–	4.35	4.30
ಕೇಂದ್ರೀಯ	–	–	–	–	–	–	2.36	2.33	2.24	2.24	2.36	2.33
ಸಂಸ್ಥೆ	**4.16**	**4.16**	**3.95**	**3.94**	**4.35**	**4.32**	**2.36**	**2.33**	**2.24**	**2.24**	**3.75**	**3.74**

ವಲಯವಾರು ಟೈರ್, ಬ್ಯಾಟರಿ, ಇಂಜಿನ್ ಮತ್ತು ಎಫ್.ಐ.ಪಿ. ಜೀವಮಾನದ ವಿವರಗಳನ್ನು ಅನುಬಂಧ–5 ಮತ್ತು ಅನುಬಂಧ–6ರಲ್ಲಿ ನೀಡಲಾಗಿದೆ.

4.5. ಕೇಂದ್ರೀಯ ಕಾರ್ಯಾಗಾರದಲ್ಲಿ ಉತ್ಪಾದನೆ :

2019–20 ಮತ್ತು 2018–19ರ ಅವಧಿಯಲ್ಲಿ ಕೇಂದ್ರೀಯ ಕಾರ್ಯಾಗಾರದ ಉತ್ಪಾದನೆಯ ವಿವರಗಳು ಕೆಳಕಂಡಂತಿರುತ್ತವೆ.

ಪಟ್ಟಿ–14

ಕ್ರಮ ಸಂಖ್ಯೆ	ವಿವರಗಳು	2019–20	2018–19
1	ವಾರ್ಷಿಕ ಎಫ್.ಸಿ ನವೀಕರಣ	5703	4621
2	ಅಪಘಾತ ಹಾಗೂ ಭಾರಿ ಕವಚ ದುರಸ್ಥಿ/ಪುನಃಶ್ಚೇತನ	3804	1948
3	ಎಂಜಿನ್‌ಗಳ ದುರಸ್ಥಿ/ಟಾಪ್ ಓವರ್‌ಹಾಲಿಂಗ್	268	287
4	ಎಫ್.ಐ.ಪಿ.ಗಳು	3613	3616
5	ಗೇರ್‌ಬಾಕ್ಸ್‌ಗಳು	2843	2085
6	ಸ್ಟಾರ್ಟರುಗಳು	4335	4600
7	ಆಲ್ಟರ್ನೇಟರ್‌ಗಳು	2931	2503
8	ರೇಡಿಯೇಟರ್‌ಗಳು	1593	1393
9	ಮುಂದಿನ ಆ್ಯಕ್ಸಲ್	396	500
10	ಡಿಫರೆನ್ಷಿಯಲ್ಸ್	316	409
11	ಪವರ್ ಸ್ಟೀರಿಂಗ್ ಬಾಕ್ಸ್	645	625
12	ಟರ್ಬೋ ಚಾರ್ಜರ್‌ಗಳು	512	564
13	ಏರ್ ಕಂಪ್ರೆಸ್ಸರ್‌ಗಳು	1570	1676
14	ಆಟೋಮೈಸರ್ಸ್‌ಗಳು	18500	18114
15	ಟೈರುಗಳು	28432	26358
16	ಪವರ್ ಸ್ಟೀರಿಂಗ್ ವೇನ್ ಪಂಪ್‌ಗಳು	1361	1711

ಪುನಃಶ್ಚೇತನಗೊಳಿಸಿದ ಯಂತ್ರಗಳು :

ಕ್ರಮ ಸಂಖ್ಯೆ	ವಿವರ	2019–20	2018–19
1	ಪ್ರಾದೇಶಿಕ ಕಾರ್ಯಾಗಾರ ಬೆಂಗಳೂರು ಮತ್ತು ಹುಬ್ಬಳ್ಳಿಯಿಂದ ಸ್ವೀಕರಿಸಿದ ಪುನಶ್ಚೇತನಗೊಂಡ ಯಂತ್ರಗಳು	71	80

4.6. ಅಡಿಗಟ್ಟುಗಳು ಹಾಗೂ ಪೂರ್ಣ ನಿರ್ಮಿತ ಬಸ್ಸುಗಳ ಖರೀದಿ:

ಸಂಸ್ಥೆಯು ಹಿಂದಿನ ಸಾಲಿನಲ್ಲಿ ಬಾಕಿ ಉಳಿದ 2 ಬಿ.ಎಸ್–4 ಐಷರ್ ಅಡಿಗಟ್ಟುಗಳ ಮೇಲೆ ಕೇಂದ್ರೀಯ ಕಾರ್ಯಾಗಾರ–1ರಲ್ಲಿ ಹಾಗೂ ಆಜಾದ್ ಕೋಚ್‌ರವರಲ್ಲಿ ಬಸ್ಸುಗಳ ಕವಚ ನಿರ್ಮಾಣ ಮಾಡಲಾಗಿರುತ್ತದೆ ಹಾಗೂ 2019–20ನೇ ಸಾಲಿನಲ್ಲಿ 347 ಬಿ.ಎಸ್–4 ಟಾಟಾ ಹಾಗೂ 9 ವೋಲ್ವೋ ಪೂರ್ಣ ನಿರ್ಮಿತ ಬಸ್ಸುಗಳು ಸರಬರಾಜಾಗಿರುತ್ತವೆ. ವಿವರಗಳು ಈ ಕೆಳಕಂಡಂತಿರುತ್ತದೆ.

ಮಾದರಿ	31.03.2019ರ ಲ್ಲಿದ್ದ ಬಾಕಿ	2019–20ರಲ್ಲಿ ನೀಡಿದ ಆದೇಶ	ಒಟ್ಟು	2019–20ರಲ್ಲಾದ ಪೂರೈಕೆ	31.03.2020 ರಲ್ಲಿದ್ದಂತೆ ಬಾಕಿ
ಬಿ.ಎಸ್–4 ಐಷರ್	2	0	2	2	0
ಬಿ.ಎಸ್–4 ಟಾಟಾ	0	347	347	347	0
ಬಿ.ಎಸ್–4 ವೋಲ್ವೋ	0	9	9	9	0
ಒಟ್ಟು	2	356	358	358	0

*****

ಪರಿಚ್ಛೇದ – 5 ಉಗ್ರಾಣ

5.1 ದಾಸ್ತಾನು ತಪಶೀಲು ಪಟ್ಟಿ:

ಸಂಸ್ಥೆಯು ದಿನಾಂಕ 31–03–2020ರಂದು ಹೊಂದಿದ್ದ ಬಿಡಿಭಾಗಗಳ ಮತ್ತು ಇತರೆ ಸರಕುಗಳ ಮೌಲ್ಯ ಹಾಗೂ 2019–20ರ ಅವಧಿಯಲ್ಲಿ ಮಾಡಿರುವ ವಹಿವಾಟಿನ ವಿವರಗಳನ್ನು 2018–19ನೇ ಸಾಲಿನ ಹೋಲಿಕೆಯೊಂದಿಗೆ ಪಟ್ಟಿ–15 ರಲ್ಲಿ ನೀಡಲಾಗಿದೆ.

ಪಟ್ಟಿ–15

ಕ್ರಮ ಸಂಖ್ಯೆ	ವಿವರಗಳು	(ಮೌಲ್ಯ ಲಕ್ಷ ರೂ.ಗಳಲ್ಲಿ)	
		2019–20	**2018–19**
1	ಪ್ರಾರಂಭ ಶಿಲ್ಕು	3346.20	3266.24
2	ಪ್ರಸಕ್ತ ಸಾಲಿನಲ್ಲಿ ಖರೀದಿ ಇತ್ಯಾದಿಗಳಿಂದ ಹೆಚ್ಚಳ	83075.17	85941.36
3	ಒಟ್ಟು (1+2)	86421.37	89207.60
4	ವರ್ಷದ ಅವಧಿಯಲ್ಲಿ ಉಪಯೋಗಿಸಿದ್ದು	82331.17	85861.40
5	ಅಂತಿಮ ಶಿಲ್ಕು	4090.20	3346.20

ಪ್ರಧಾನ ಶೀರ್ಷಿಕೆಗಳಲ್ಲಿ ವರ್ಗೀಕರಿಸಿದಂತೆ ದಿನಾಂಕ: 31–03–2020 ರಂತೆ ಇದ್ದ ಹಿಂದಿನ ಸಾಲಿನ ಸರಕುಗಳ ದಾಸ್ತಾನನ್ನು ವಾಹನ ಸಮೂಹಕ್ಕೆ ಸಂಬಂಧಿಸಿದಂತೆ ಸರಕಿನ ದಾಸ್ತಾನು ಪ್ರಮಾಣದ ವಿವರಗಳನ್ನು ವರದಿಯ ಸಾಲಿಗೆ ಹೋಲಿಸಿ ಪಟ್ಟಿ–16 ರಲ್ಲಿ ನೀಡಲಾಗಿದೆ.

ಪಟ್ಟಿ–16

ಕ್ರಮ ಸಂಖ್ಯೆ	ವರ್ಗೀಕರಣ	ಮಾರ್ಚ್ 31 ರ ಅಂತ್ಯಕ್ಕೆ ಹೊಂದಿರುವ ದಾಸ್ತಾನು (ಲಕ್ಷ ರೂ.ಗಳಲ್ಲಿ)		ಮಾರ್ಚ್ 31 ರ ಅಂತ್ಯಕ್ಕೆ ಹೊಂದಿರುವ ದಾಸ್ತಾನಿನ ಪ್ರತಿ ವಾಹನದ ಪ್ರಮಾಣ (ರೂ.ಗಳಲ್ಲಿ)		ಮಾರ್ಚ್ 31 ರ ಅಂತ್ಯಕ್ಕೆ ಇದ್ದ ದಾಸ್ತಾನು ಪ್ರಮಾಣ (ತಿಂಗಳ ಬಳಕೆಯಂತೆ) (ಲಕ್ಷ ರೂ.ಗಳಲ್ಲಿ)	
		2019–20	**2018–19**	**2019–20**	**2018–19**	**2019–20**	**2018–19**
1	ಇಂಧನ	605.88	436.38	9057	6692	0.10	0.07
2	ಕೀಲೆಣ್ಣೆ	116.48	155.89	1741	2391	1.35	1.74
3	ಟೈರು, ಟ್ಯೂಬ್, ಫ್ಲಾಪ್ (ಮರುಒಪ್ಪ ಮಾಡಿದ್ದು ಸೇರಿ)	199.53	112.17	2983	1720	0.94	0.85
4	ಬ್ಯಾಟರಿಗಳು	2.16	4.92	32	75	0.05	0.18
5	ಬಿಡಿಭಾಗಗಳು	2545.29	2075.53	38046	31828	4.60	3.01
6	ಇತರೆ ಬಳಕೆ ವಸ್ತುಗಳು	535.81	446.52	8009	6847	10.67	8.20
7	ಟಿಕೆಟ್, ಲೇಖನ ಸಾಮಗ್ರಿ ಮತ್ತು ಸಮವಸ್ತ್ರ	85.05	114.79	1271	1760	7.92	15.30
	ಒಟ್ಟು	**4090.20**	**3346.20**	**61139**	**51314**	**0.60**	**0.47**

ದಿನಾಂಕ 31–03–2020ರಂದು ಸಂಸ್ಥೆಯು ಹೊಂದಿದ್ದ ಸರಕು ದಾಸ್ತಾನಿನ ಮೌಲ್ಯವು ರೂ.4090.20 ಲಕ್ಷಗಳಾಗಿರುತ್ತದೆ. ಹಿಂದಿನ ವರ್ಷ ಇದೇ ದಿನದಂದು ಇದ್ದ ಮೌಲ್ಯ ರೂ.3246.20 ಲಕ್ಷಗಳು. ದಿನಾಂಕ: 31–03–2020 ರಂದು ನಡೆದ ಉಗ್ರಾಣದ ತಪಶೀಲಿನಂತೆ ರೂ.2545.29 ಲಕ್ಷ ಮೌಲ್ಯದ ಬಿಡಿಭಾಗಗಳ ಲೆಕ್ಕ ದಾಖಲಾಗಿದೆ ಮತ್ತು ರೂ.535.81 ಲಕ್ಷ ಮೌಲ್ಯದ ಇತರೆ ಬಳಕೆ ವಸ್ತುಗಳ ಲೆಕ್ಕ ದಾಖಲಾಗಿದೆ.

5.2 ಸರಕು ಖರೀದಿ ಮತ್ತು ಬಳಕೆ:

2019–20ನೇ ಸಾಲಿಗೆ ಸಂಬಂಧಿಸಿದಂತೆ ಖರೀದಿಸಿ ಬಳಸಿದ ಸರಕುಗಳ ಮೌಲ್ಯ ವಿಶ್ಲೇಷಣೆಯನ್ನು 2018–19ನೇ ಸಾಲಿನ ಹೋಲಿಕೆಯೊಂದಿಗೆ ಪಟ್ಟಿ–17 ರಲ್ಲಿ ನೀಡಲಾಗಿದೆ.

ಪಟ್ಟಿ–17

ಕ್ರ. ಸಂ.	ವರ್ಗೀಕರಣ	ಖರೀದಿ				ಬಳಕೆ			
		ಲಕ್ಷ ರೂ.ಗಳಲ್ಲಿ		ವಾಹನ ಒಂದಕ್ಕೆ ಸರಾಸರಿ ರೂ. ಗಳಲ್ಲಿ		ಲಕ್ಷ ರೂ. ಗಳಲ್ಲಿ		ವಾಹನ ಒಂದಕ್ಕೆ ಸರಾಸರಿ ರೂ. ಗಳಲ್ಲಿ	
		2019-20	2018-19	2019-20	2018-19	2019-20	2018-19	2019-20	2018-19
1	ಇಂಧನ	70983.41	73757.46	1089555	1153488	70813.91	73862.31	1086953	1155127
2	ಕೀಲೆಣ್ಣೆ	995.59	1073.09	15282	16782	1035.00	1072.48	15887	16772
3	ಟೈರು, ಟ್ಯೂಬ್, ಫ್ಲಾಪ್ (ಮರುಒಪ್ಪ ಮಾಡಿದ ಟೈರ್‌ಗಳು ಸೇರಿ)	2632.41	1604.20	40406	25088	2545.05	1583.48	39065	24764
4	ಬ್ಯಾಟರಿಗಳು	568.66	321.33	8729	5025	571.42	320.16	8771	5007
5	ಬಿಡಿಭಾಗಗಳು	7103.86	8462.48	109040	132334	6634.10	8279.25	101830	129479
6	ಇತರೆ ಬಳಕೆ ವಸ್ತುಗಳು	692.09	656.52	10623	10267	602.80	653.71	9253	10223
7	ಟಿಕೆಟ್, ಲೇಖನ ಸಾಮಗ್ರಿ ಮತ್ತು ಸಮವಸ್ತ್ರ	99.15	66.28	1522	1037	128.89	90.01	1978	1408
	ಒಟ್ಟು	83075.17	85941.36	1275157	1344031	82331.17	85861.40	1263737	1342780

2019–20ನೇ ಸಾಲಿನಲ್ಲಿ ಖರೀದಿಸಿದ ಸರಕುಗಳ ಒಟ್ಟು ಮೌಲ್ಯ ರೂ.83075.17ಲಕ್ಷ ರೂಪಾಯಿಗಳಾಗಿದ್ದು ಬಳಸಿರುವ ಸರಕುಗಳ ಒಟ್ಟು ಮೌಲ್ಯವು ಪ್ರಸಕ್ತ ವರ್ಷದಲ್ಲಿ ರೂ.82331.17ಲಕ್ಷ ರೂಪಾಯಿಗಳಾಗಿದ್ದವು.

5.3 ಆಮದು ಮಾಡಿಕೊಳ್ಳಲಾದ ಬಿಡಿಭಾಗಳು/ಯಂತ್ರೋಪಕರಣಗಳು:

ವರದಿ ವರ್ಷದಲ್ಲಿ ಯಾವ ವಿಧವಾದ ಯಂತ್ರೋಪಕರಣಗಳನ್ನು ಅಥವಾ ಬಿಡಿಭಾಗಗಳನ್ನು ಆಮದು ಮಾಡಿಕೊಂಡಿರುವುದಿಲ್ಲ.

5.4 ನಿರುಪಯುಕ್ತ ಸರಕುಗಳು ಮತ್ತು ವಾಹನಗಳ ವಿಲೇವಾರಿ:

ಪ್ರಸಕ್ತ ವರ್ಷದಲ್ಲಿ ಟೆಂಡರ್–ವ–ಹರಾಜು ಮೂಲಕ ಮಾರಾಟ ಮಾಡಿದ ನಿರುಪಯುಕ್ತ ಸರಕುಗಳಿಂದ ರೂ.299.32 ಲಕ್ಷ ಹಾಗೂ ಅನುಪಯುಕ್ತ ವಾಹನಗಳ ವಿಲೇವಾರಿಯಿಂದ ರೂ.759.98 ಲಕ್ಷ ಸೇರಿದಂತೆ ಒಟ್ಟು ರೂ.1059.30 ಲಕ್ಷ ಆದಾಯ ಗಳಿಸಲಾಗಿದೆ. ಹಿಂದಿನ ವರ್ಷ 2018–19ರಲ್ಲಿ ರೂ.829.37 ಲಕ್ಷ ಆದಾಯ ಗಳಿಸಲಾಗಿತ್ತು.

*****

ಪರಿಚ್ಛೇದ – 6

ಆರ್ಥಿಕ ವ್ಯವಹಾರ

2019–20ನೇ ಸಾಲಿನ ಹಣಕಾಸು ಫಲಿತಾಂಶ ಮತ್ತು ಆರ್ಥಿಕ ವ್ಯವಸ್ಥೆಯ ನಿರ್ವಹಣೆಯನ್ನು ಈ ಕೆಳಗಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ.

ಬಂಡವಾಳ ರಚನೆ: ಸಂಸ್ಥೆಯು ಬಂಡವಾಳ ವಂತಿಕೆಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ಹೊಂದಿರುತ್ತದೆ. ಸಂಸ್ಥೆಯ ಬಂಡವಾಳ ಹೂಡಿಕೆಯ ವಿವರಣೆಯನ್ನು ಪಟ್ಟಿ–18 ರಲ್ಲಿ ಕೊಡಲಾಗಿದೆ:

ಪಟ್ಟಿ–18

ಕ್ರ. ಸಂ.	ಸಂಪನ್ಮೂಲಗಳು	31–03–2019ರಂದು ಇದ್ದಂತೆ		2019–20ರ ಅವಧಿ ಜಮಾ	2019–20ರ ಅವಧಿ ಮರುಪಾವತಿ	31–03–2020ರಂದು ಇದ್ದಂತೆ	
		ಲಕ್ಷ ರೂ.	ಶೇಕಡಾ	ಲಕ್ಷ ರೂ.	ಲಕ್ಷ ರೂ.	ಲಕ್ಷ ರೂ.	ಶೇಕಡಾ
1	ರಾಜ್ಯ ಸರ್ಕಾರದಿಂದ						
	ಅ. ಬಂಡವಾಳ ವಂತಿಕೆ	12.25	0.01	–	–	12.25	0.01
	ಆ. ಈಕ್ವಿಟಿ ಬಂಡವಾಳ	10459.48	3.75	–	–	10459.48	3.61
	ಇ. ಮೂಲಭೂತ ಸೌಕರ್ಯಗಳ ನಿಧಿ	5300.00	1.89	–	–	5300.00	1.82
	ಈ ಬದಲಿ ನಿಲ್ದಾಣಗಳ ನಿರ್ಮಾಣ ನಿಧಿ	0.00	0.00	–	–	–	–
2	ಕೇಂದ್ರ ಸರ್ಕಾರದಿಂದ						
	ಅ. ಬಂಡವಾಳ ವಂತಿಕೆ	–	–	–	–	–	–
	ಆ. ಈಕ್ವಿಟಿ ಬಂಡವಾಳ	–	–	–	–	–	–
3	ಜೆ.ಎನ್.ನರ್ಮ್, ಕರ್ನಾಟಕ ಸರ್ಕಾರ ಮತ್ತು DULT ಅನುದಾನ	35599.86	12.75	31931.96	14713.53	52818.29	18.28
4	ಆಂತರಿಕ ಸಂಪನ್ಮೂಲಗಳು	146520.05	52.51	–	3154.26	143365.79	49.63
5	**ಸಾಲಗಳು:**						
	ಅ. ಡಿಬೆಂಚರ್‌ಗಳು	–	–	–	–	–	–
	ಆ. ಗ್ರಾಮೀಣ ಡಿಬೆಂಚರ್‌ಗಳು	–	–	–	–	–	–
	ಇ. ವಾಣಿಜ್ಯ ಬ್ಯಾಂಕುಗಳು	25402.02	9.10	16000.00	4622.19	36779.83	8.06
	ಈ. ಎಲ್.ಐ.ಸಿ.	–	–	–	–	–	–
	ಉ. ಐ.ಡಿ.ಬಿ.ಐ.	–	–	–	–	–	–
	ಊ. ಕೆ.ಯು.ಐ.ಡಿ.ಎಫ್.ಸಿ.	55738.36	19.98	–	15612.38	40125.98	18.57
	ಋ. ಎ.ಸಿ.ಜಿ.ಎಲ್. ಗೋವಾ ಇವರಿಗೆ ಕೊಡಬೇಕಾದದ್ದು	–	–	–	–	–	–
	ೠ. ಎಸ್.ಐ.ಹೆಚ್.ಎಸ್. ಯೋಜನೆ	–	–	–	–	–	–

	ಎ. ಐ.ಡಿ.ಬಿ.ಐ. ಕಾಲಾವಧಿ ಸಾಲ	–	–	–	–	–	–
	ಏ. ಇತರೆ	0.44	0.01	–	0.28	0.16	0.01
	ಒಟ್ಟು	**279032.46**	**100.00**	**47931.96**	**38102.64**	**288861.78**	**100.00**

6.1 ಬಂಡವಾಳ ಜಮಾ:

ಸಂಸ್ಥೆಯ ಬಂಡವಾಳ ಹೂಡಿಕೆಯು ದಿನಾಂಕ: 31–03–2020ಕ್ಕೆ ರೂ.288861.78 ಲಕ್ಷಗಳಿರುತ್ತದೆ. ಈ ಮೊತ್ತವನ್ನು ದಿನಾಂಕ 31–03–2019 ರಲ್ಲಿ ಇದ್ದ ರೂ.279032.46 ಲಕ್ಷಗಳಿಗೆ ತುಲನೆ ಮಾಡಿದಾಗ, ಪ್ರಸಕ್ತ ವರ್ಷ ರೂ.47931.96 ಲಕ್ಷಗಳ ಸೇರ್ಪಡೆಯಾಗಿರುತ್ತದೆ. ಮತ್ತು ಸಾಲಗಳ ಮರುಪಾವತಿಗಾಗಿ ರೂ.38102.64 ಲಕ್ಷಗಳನ್ನು ಉಪಯೋಗಿಸಲಾಗಿದೆ. 2019–20ನೇ ಸಾಲಿನಲ್ಲಿ ನಡೆದ ಬಂಡವಾಳ ಹೂಡಿಕೆ ಮತ್ತು ವ್ಯವಹಾರವನ್ನು ಪಟ್ಟಿ–18ರಲ್ಲಿ ಕೊಡಲಾಗಿದೆ. ದಿನಾಂಕ : 31–03–2020ರಂತೆ ಒಟ್ಟು ಬಂಡವಾಳ ಹೂಡಿಕೆಯಲ್ಲಿ ಸರ್ಕಾರದ ಈಕ್ವಿಟಿ ಬಂಡವಾಳವು ಶೇಕಡಾ 3.62% ಗಳಷ್ಟಿದ್ದು, ಅನುದಾನಗಳು, ಸಾಲಗಳು ಮತ್ತು ಆಂತರಿಕ ಸಂಪನ್ಮೂಲಗಳು ಶೇಕಡಾ 96.38%ರ ಪ್ರಮಾಣದಲ್ಲಿರುತ್ತದೆ.

6.2 ಬಂಡವಾಳ ಖರ್ಚು:

ವರ್ಷಾಂತ್ಯದಲ್ಲಿ ಸ್ಥಿರಾಸ್ತಿಗಳ ಮೇಲೆ ಮಾಡಿದ ಬಂಡವಾಳ ಖರ್ಚುಗಳು ಮತ್ತು ಈ ವರ್ಷದಲ್ಲಿ ನಿವ್ವಳ ಸೇರ್ಪಡೆಯನ್ನು ಪಟ್ಟಿ–19 ರಲ್ಲಿ ಕೊಡಲಾಗಿದೆ.

ಪಟ್ಟಿ–19

ಕ್ರ. ಸಂ.	ಸಂಪನ್ಮೂಲಗಳು	ದಿನಾಂಕ: 31–03–2019 ರಂದು ಇದ್ದಂತೆ		ವರ್ಷದಲ್ಲಿ ಆದ ಜಮಾ	ವರ್ಷದಲ್ಲಿ ಬಳಸಿಕೊಂಡದ್ದು	ದಿನಾಂಕ: 31–03–2020 ರಂದು ಇದ್ದಂತೆ	
		ಲಕ್ಷ ರೂ.	ಶೇಕಡಾ	ಲಕ್ಷ ರೂ.	ಲಕ್ಷ ರೂ.	ಲಕ್ಷ ರೂ.	ಶೇಕಡಾ
1	ಭೂಮಿ	16211.90	5.81	–	382.57	15829.33	5.48
2	ಕಟ್ಟಡಗಳು (ನಿರ್ಮಾಣ ಹಂತದಲ್ಲಿರುವುದೂ ಸೇರಿ)	93909.02	33.66	3250.28	2358.10	94801.20	32.82
3	ಸಾರ್ವಜನಿಕ ವಾಹನಗಳು	163842.15	58.72	11547.31	2358.86	173030.61	59.90
4	ಇಲಾಖಾ ವಾಹನಗಳು	507.51	0.18	45.60	27.66	525.45	0.18
5	ಸ್ಥಾವರ ಮತ್ತು ಯಂತ್ರೋಪಕರಣ	3737.88	1.34	99.39	0.00	3837.26	1.33
6	ಪೀಠೋಪಕರಣ ಮತ್ತು ಇತರೆ ಸಲಕರಣೆಗಳು	824.00	0.29	13.93	0.00	837.93	0.29
	ಮೊತ್ತ	**279032.46**	**100.00**	**14956.51**	**5127.19**	**288861.78**	**100.00**

2019–20ನೇ ಸಾಲಿನ ಸ್ಥಿರಾಸ್ತಿಗಳ ನಿವ್ವಳ ಸೇರ್ಪಡೆಯಾದ ರೂ.14956.51 ಲಕ್ಷಗಳು ಮತ್ತು ಬಳಸಿಕೊಂಡ ರೂ.5127.19 ಲಕ್ಷಗಳೂ ಸೇರಿದಂತೆ ಒಟ್ಟಾರೆ ಸ್ಥಿರಾಸ್ತಿಗಳ ಸಂಚಿತ ಖರ್ಚು ದಿನಾಂಕ: 31–03–2020 ಕ್ಕೆ ರೂ.288861.78 ಲಕ್ಷಗಳಷ್ಟಾಗಿರುತ್ತದೆ. ಒಟ್ಟಾರೆ ಹೂಡಿಕೆಯಲ್ಲಿ ರೂ.173030.61 ಲಕ್ಷಗಳಷ್ಟು (ಶೇಕಡಾ 59.90) ಸಾರ್ವಜನಿಕ ವಾಹನಗಳಿಗೂ ಮತ್ತು ಜಮೀನು ಮತ್ತು ಕಟ್ಟಡಗಳಿಗೆ ರೂ. 110630.53 ಲಕ್ಷಗಳು (ಶೇಕಡಾ 38.30) ಹಾಗೂ ಬಾಕಿ ರೂ.5200.64 ಲಕ್ಷಗಳಷ್ಟು (ಶೇಕಡಾ 1.80) ಇತರೆ ಆಸ್ತಿಗಳಾದ ಸ್ಥಾವರ ಮತ್ತು ಯಂತ್ರೋಪಕರಣ, ಪೀಠೋಪಕರಣ ಮತ್ತು ಇತರೆ ಸಲಕರಣೆಗಳಿಗೆ ಹಾಗೂ ಇಲಾಖಾ ವಾಹನಗಳಿಗಾಗಿ ಹೂಡಲಾಗಿದೆ.

6.3 ಆದಾಯ ಸಂದಾಯ:

2019–20ನೇ ಅವಧಿಯ ಒಟ್ಟು ಆದಾಯವು 2018–19ನೇ ಸಾಲಿನಲ್ಲಿದ್ದ ರೂ.222699.51 ಲಕ್ಷಗಳಿಂದ ರೂ.229329.55 ಲಕ್ಷಗಳಿಗೆ ಏರಿಕೆಯಾಗಿರುತ್ತದೆ. ಆದಾಯ ಸಂದಾಯದ ಪೂರ್ಣ ವಿವರಣೆಯನ್ನು ಪಟ್ಟಿ–20ರಲ್ಲಿ ಕೊಡಲಾಗಿದೆ.

ಪಟ್ಟಿ–20

ಕ್ರಮ ಸಂಖ್ಯೆ	ವಿವರಗಳು	ಮೊಬಲಗು ಲಕ್ಷ ರೂ.ಗಳಲ್ಲಿ		ಒಟ್ಟು ಮೊತ್ತದ ಶೇಕಡಾ		ಪ್ರತಿ ಪರಿಣಾಮಕಾರಿ ಕಿ.ಮೀ.ಗೆ (ಪೈಸೆ)	
		2018–19	**2019–20**	**2018–19**	**2019–20**	**2018–19**	**2019–20**
ಅ	**ಸಾರಿಗೆ ಆದಾಯ:**						
1	ಪ್ರಯಾಣಿಕರಿಂದ	178930.80	176598.14	78.02	83.30	4308.63	4343.81
2	ಸಾಂದರ್ಭಿಕ ಒಪ್ಪಂದಗಳಿಂದ	4766.73	3880.06	2.08	1.83	114.78	95.44
3	ಪ್ರಯಾಣಿಕರ ಸರಕು ಸಾಗಾಣಿಕೆಯಿಂದ	92.58	126.96	0.04	0.06	2.23	3.12
4	ಪ್ರಯಾಣಿಕರಿಂದ ದಂಡ ವಸೂಲಿ	93.94	94.93	0.04	0.04	2.26	2.34
5	ಪಾರ್ಸೆಲ್ ರವಾನೆಯಿಂದ	–	–	–	–	–	–
6	ಅಂಚೆ ರವಾನೆಯಿಂದ	–	–	–	–	–	–
	ಒಟ್ಟು (ಅ)	**183884.05**	**180700.09**	**80.18**	**85.24**	**4427.90**	**4444.71**
ಆ	**ಇತರೆ ಆದಾಯ:**						
1	ಜಾಹೀರಾತು	2406.83	2461.82	1.05	1.16	57.96	60.55
2	ಬಾಡಿಗೆ	325.22	310.76	0.14	0.15	7.83	7.64
3	ಇತರೆ ಬಾಬ್ತುಗಳು:						
	ಅ) ನಿರುಪಯುಕ್ತ ವಸ್ತುಗಳ ಮಾರಾಟದಿಂದ	484.24	299.32	0.21	0.14	11.66	7.36
	ಆ) ಸಂಪೂರ್ಣ ಸವಕಳಿ ಮಾರಾಟದಿಂದ	345.13	759.98	0.15	0.36	8.31	18.69
	ಇ) ವಾಣಿಜ್ಯ ಸಂಸ್ಥೆಗಳು ಮತ್ತು ವಾಹನ ನಿಲುಗಡೆಗಳು	6685.38	6412.96	2.91	3.03	160.98	157.74
	ಈ) ಬಡ್ಡಿ	294.54	313.68	0.13	0.15	7.09	7.72
	ಉ) ಇನ್ನಿತರ ಮೂಲಗಳು	16029.12	2563.00	6.99	1.20	385.98	63.04
	ಊ) ವಿದ್ಯಾರ್ಥಿ ಪಾಸ್ ರಿಯಾಯಿತಿ ಪ್ರಯಾಣದ ಸಹಾಯ ಧನ	17672.14	16941.00	7.71	7.99	425.54	416.70
	ಋ) ಅಂಧರು, ವಿಕಲಚೇತನರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡಲಾದ ಪಾಸ್‌ಗಳ ಮತ್ತು ವೇತನ ಪರಿಷ್ಕರಣೆಯ ಸಹಾಯಧನ	1202.90	1233.90	0.53	0.58	28.97	30.35
	ಒಟ್ಟು (ಆ)	**45445.50**	**31296.42**	**19.82**	**14.76**	**1094.32**	**769.80**
ಇ	**ಒಟ್ಟು ಆದಾಯ (ಅ ಮತ್ತು ಆ)**	**229329.55**	**211996.51**	**100.00**	**100.00**	**5522.22**	**5214.51**

2019–20ನೇ ಸಾಲಿನಲ್ಲಿ ಸಂಸ್ಥೆಯ ಸಾರಿಗೆ ಆದಾಯವು ರೂ.180700.09 ಲಕ್ಷಗಳಾಗಿದ್ದು, ಅದು ಒಟ್ಟಾರೆ ಆದಾಯದ ಶೇಕಡಾ 85.24 ರಷ್ಟು ಇರುತ್ತದೆ ಮತ್ತು ಇತರೆ ಆದಾಯ 31296.42 ಲಕ್ಷಗಳಾಗಿದ್ದು, ಒಟ್ಟಾರೆ ಆದಾಯದ

ಶೇಕಡಾ.14.76ರಷ್ಟಿರುತ್ತದೆ. ಸಂಸ್ಥೆಯು ರಾಜ್ಯ ಸರ್ಕಾರದಿಂದ ಪಡೆದಿರುವ ವಿದ್ಯಾರ್ಥಿ ರಿಯಾಯಿತಿ, ಅಂಧರು, ವಿಕಲಚೇತನರು, ಸ್ವಾತಂತ್ರ್ಯ ಹೋರಾಟಗಾರರು ಇವರುಗಳಿಗೆ ನೀಡಲಾದ ಪಾಸುಗಳು ಮತ್ತು ವೇತನ ಪರಿಷ್ಕರಣೆ ಇವುಗಳ ಬಾಬ್ತು ರೂ.18174.90 ಲಕ್ಷಗಳನ್ನೊಳಗೊಂಡಂತೆ ಇತರೆ ಆದಾಯ ರೂ.31296.42 ಲಕ್ಷಗಳಾಗಿರುತ್ತದೆ.

2019–20ನೇ ಸಾಲಿನಲ್ಲಿ ಪ್ರತಿ ಪರಿಣಾಮಕಾರಿ ಕಿ.ಮೀ.ಗೆ ಗಳಿಸಿದ ಒಟ್ಟಾರೆ ಆದಾಯ 5214.51 ಪೈಸೆಗಳಾಗಿದ್ದು, ಇದರಲ್ಲಿ ಸಾರಿಗೆ ಆದಾಯವು ಪ್ರತಿ ಕಿ.ಮೀ.ಗೆ 4444.71 ಪೈಸೆಗಳಾಗಿರುತ್ತದೆ. ಇದು ಕಳೆದ ಸಾಲಿನಲ್ಲಿ 4427.90 ಪೈಸೆಗಳಾಗಿತ್ತು.

6.4 ಕಾರ್ಯಾಚರಣೆ ವೆಚ್ಚ:

2019–20ನೇ ಸಾಲಿನಲ್ಲಿ ಒಟ್ಟಾರೆ ರೂ.266930.83 ಲಕ್ಷಗಳ ಕಾರ್ಯಾಚರಣೆ ವೆಚ್ಚವಾಗಿದ್ದು, ಹಿಂದಿನ ವರ್ಷದ ಅವಧಿಯಲ್ಲಿ ರೂ.264278.29 ಲಕ್ಷಗಳ ಕಾರ್ಯಾಚರಣೆ ವೆಚ್ಚವುಂಟಾಗಿತ್ತು. ಮುಖ್ಯ ಶೀರ್ಷಿಕೆಗಳಡಿಯಲ್ಲಿ ಮಾಡಿದ ಖರ್ಚಿನ ವಿವರಗಳ ವಿಶ್ಲೇಷಣೆಯನ್ನು ಪಟ್ಟಿ–21ರಲ್ಲಿ ಕೊಡಲಾಗಿದೆ.

ಪಟ್ಟಿ–21

ಕ್ರ. ಸಂ.	ವಿವರಗಳು	ಮೊಬಲಗು (ರೂ. ಲಕ್ಷಗಳಲ್ಲಿ)		ಶೇಕಡಾವಾರು ಪ್ರಮಾಣ		ಪ್ರತಿ ಕಿ.ಮಿ. ಗೆ ಪೈಸೆಗಳಲ್ಲಿ	
		2018–19	2019–20	2018–19	2019–20	2018–19	2019–20
ಅ	ಕಾರ್ಯಾಚರಣೆ ವೆಚ್ಚ						
1	ಸಿಬ್ಬಂದಿ						
	ಅ. ಸಂಚಾರ	102492.96	107349.55	38.78	40.22	2468.01	2640.49
	ಆ. ಕಾರ್ಯಾಗಾರ & ನಿರ್ವಹಣೆ	12769.98	12038.04	4.83	4.51	307.50	296.10
	ಇ. ಇತರೆ	2730.85	2734.05	1.03	1.02	65.76	67.25
	ಈ. ಭವಿಷ್ಯನಿಧಿ ಕಲ್ಯಾಣ ಇತರೆ	22017.73	24582.33	8.33	9.21	530.18	604.66
	ಒಟ್ಟು	**140011.52**	**146703.97**	**52.97**	**54.96**	**3371.45**	**3608.50**
2	ಇಂಧನ (ಡೀಸೆಲ್)	73984.06	70842.94	27.99	26.54	1781.52	1742.54
3	ಲ್ಯೂಬ್ರಿಕೆಂಟ್ಸ್	1072.48	1035.00	0.41	0.39	25.83	25.46
4	ಬಿಡಿಭಾಗಗಳು	8279.25	6630.50	3.13	2.48	199.36	163.09
5	ಟೈರು ಮತ್ತು ಟ್ಯೂಬುಗಳು	1583.48	2545.04	0.60	0.95	38.13	62.60
6	ಬ್ಯಾಟರಿಗಳು	320.16	571.42	0.12	0.21	7.71	14.06
7	ಇತರೆ ಬಳಕೆ ಸಾಮಗ್ರಿ	653.76	606.40	0.25	0.23	15.74	14.92
8	ಮರುಒಪ್ಪ (ಪುನಶ್ಚೇತನ ವೆಚ್ಚ)	1583.22	1330.23	0.60	0.50	38.12	32.72
	ಒಟ್ಟು	**87476.41**	**83561.53**	**33.10**	**31.30**	**2106.41**	**2055.38**
9	**ತೆರಿಗೆ:**						
	ಅ. ವಾಹನ ತೆರಿಗೆ	10205.56	10028.85	3.86	3.76	245.75	246.88
	ಆ. ಪ್ರಯಾಣಿಕರ ತೆರಿಗೆ	–	–	–	–	–	–
	ಇ. ವಾಹನಗಳ ಮೇಲೆ ಇತರೆ ತೆರಿಗೆಗಳು	46.08	39.55	0.02	0.01	1.11	0.97
	ಒಟ್ಟು ತೆರಿಗೆಗಳು	10251.64	10068.40	3.88	3.77	246.86	247.65
10	**ಬಡ್ಡಿಗಳು:**						
	ಅ. ಕೇಂದ್ರ ಸರ್ಕಾರಕ್ಕೆ	–	–	–	–	–	–
	ಆ. ರಾಜ್ಯ ಸರ್ಕಾರಕ್ಕೆ	0.77	0.77	0.01	0.01	0.02	0.02
	ಇ. ಇತರೆ ಸಾಲಗಳ ಮೇಲೆ ಬಡ್ಡಿ	2642.63	1415.77	1.00	0.53	63.63	34.82
	ಒಟ್ಟು ಬಡ್ಡಿಗಳು	**2643.40**	**1416.54**	**1.01**	**0.54**	**63.65**	**34.84**
11	**ಸವಕಳಿ:**						
	ಅ. ವಾಹನಗಳ ಮೇಲೆ	12107.99	10763.45	4.58	4.03	291.56	264.75

	ಆ. ಇತರೆ ಆಸ್ತಿಗಳ ಮೇಲೆ	2195.70	2232.75	0.83	0.84	52.87	54.92
	ಒಟ್ಟು (ಅ ಮತ್ತು ಆ)	**14303.69**	**12996.20**	**5.41**	**4.87**	**344.43**	**319.67**
12	ಇತರೆ ಬಾಬ್ತುಗಳು	9591.63	12184.19	3.63	4.56	230.96	299.70
13	ಖಾಸಗಿ ವಾಹನಗಳ ಬಾಡಿಗೆ ವೆಚ್ಚ	–	–	–	–	–	–
	ಒಟ್ಟು (1 ರಿಂದ 13 ರವರೆಗೆ)	**264278.29**	**266930.83**	**100.00**	**100.00**	**6363.76**	**6565.74**

ಕಾರ್ಯಾಚರಣೆ ವೆಚ್ಚವು ಎಲ್ಲಾ ಆದಾಯ ಖರ್ಚುಗಳನ್ನು ಮತ್ತು ಬಂಡವಾಳ ಖರ್ಚುಗಳಾದ ಸವಕಳಿ, ಬಂಡವಾಳ ಮತ್ತು ಸಾಲಗಳ ಮೇಲಿನ ಬಡ್ಡಿ ಹಾಗೂ ಇತರೆಗಳನ್ನು ಒಳಗೊಂಡಿರುತ್ತದೆ. ಪ್ರಸ್ತುತ ವರ್ಷದಲ್ಲಿ ಕಾರ್ಯಾಚರಣೆಯ ಗಾತ್ರದ ಹೆಚ್ಚಳದಿಂದ ಕಾರ್ಯಾಚರಣೆಯ ವೆಚ್ಚದಲ್ಲಿ ಹೆಚ್ಚಳಕ್ಕೆ ಕಾರಣವಾಗಿದೆ. ಆದಾಗ್ಯೂ ಈ ವರ್ಷದಲ್ಲಿ ಕಾರ್ಯಾಚರಣೆ ವೆಚ್ಚದ ಹೆಚ್ಚಳಕ್ಕೆ ಈ ಕೆಳಗಿನ ಇತರ ಕಾರಣಗಳನ್ನು ಗುರುತಿಸಲಾಗಿದೆ.

1 ನೌಕರರಿಗೆ ನೀಡಲಾದ ಹೆಚ್ಚುವರಿ ತುಟ್ಟಿ ಭತ್ಯೆಯ ಹೆಚ್ಚಳದಿಂದಾಗಿ, ಪ್ರಸ್ತುತ ವರ್ಷದಲ್ಲಿ ರೂ.31.68 ಕೋಟಿಗಳ ಆರ್ಥಿಕ ಒತ್ತಡ ಉಂಟಾಗಿದೆ.

2 ಬಿಡಿಭಾಗಗಳು, ಟೈರುಗಳು ಮತ್ತು ಇತರೆ ಬಳಕೆ ಸಾಮಗ್ರಿಗಳ ಮೇಲಿನ ಬೆಲೆ ಏರಿಕೆಯಿಂದಾಗಿ ಉಂಟಾದ ಹೆಚ್ಚಳ

3 ಕೋವಿಡ್–19 ಸಾಂಕ್ರಾಮಿಕವು ಹರಡುವುದನ್ನು ತಡೆಗಟ್ಟುವ ಸಲುವಾಗಿ ಲಾಕ್‌ಡೌನ್ ಜಾರಿಮಾಡಿದ ಪರಿಣಾಮವಾಗಿ ಸಾರಿಗೆ ಆದಾಯದಲ್ಲಿನ ನಷ್ಟ

4 ಗ್ರಾಮಾಂತರ ಮತ್ತು ನಗರ ಸಂಚಾರದಲ್ಲಿ ಲಾಭದಾಯಕವಲ್ಲದ ಮಾರ್ಗಗಳಲ್ಲಿ ವಾಹನಗಳನ್ನು ಕಾರ್ಯಾಚರಣೆ ಮಾಡುತ್ತಿರುವುದರಿಂದ

ಸಂಸ್ಥೆಯು ಖರ್ಚುವೆಚ್ಚಗಳನ್ನು ನಿಯಂತ್ರಿಸಲು ಮತ್ತು ಆದಾಯವನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳನ್ನು ಈ ಕೆಳಗೆ ನೀಡಲಾಗಿದೆ.

1. ವಾಹನಗಳ ಬಳಕೆಯನ್ನು ಹೆಚ್ಚಿಸುವುದರಿಂದ ಪ್ರತಿ ಕಿ.ಮೀ. ವೆಚ್ಚವನ್ನು ಕಡಿಮೆ ಮಾಡುವುದು.
2. ನವೀನ ರೀತಿಯಲ್ಲಿ ಜಾಗೃತ ದಳದ ಕಾರ್ಯವನ್ನು ತೀವ್ರಗೊಳಿಸುವುದು.
3. ಹೊಸ ಪದ್ಧತಿಗಳನ್ನು ಬಳಸಿ ವಾಹನಗಳನ್ನು ನಿರ್ವಹಿಸಿ ಸಂಚಾರ ದಟ್ಟಣೆಯಿಂದ ಉಂಟಾಗುವ ರದ್ಧತಿ ಮತ್ತು ಅವಘಡಗಳನ್ನು ಕಡಿಮೆಗೊಳಿಸುವುದು.
4. ಯೋಜನೆಯಂತೆ (ಕಾರ್ಯನಿರ್ವಹಣೆ ಮುಂಗಡ ಆಯವ್ಯಯ) ಕಾರ್ಯಾಚರಣೆ ನಿರ್ವಹಣೆಗೊಳಿಸಿ ಮತ್ತು ಪ್ರತಿ ಹಂತದಲ್ಲೂ ಅವುಗಳನ್ನು ಪರಿಶೀಲಿಸಿ ಯೋಜನೆಯಲ್ಲಿ ಗೊತ್ತುಪಡಿಸಿರುವ ಗುರಿಯನ್ನು ಸಾಧಿಸುವುದು.

6.5 ಕಾರ್ಯಾಚರಣೆಯ ಫಲಿತಾಂಶಗಳು:

ಈ ವರದಿ ಸಾಲಿನಲ್ಲಿ ಸಂಸ್ಥೆಯ ಹೂಡಿಕೆಗಳ ಬೆಳವಣಿಗೆಯಲ್ಲಿನ ಆರ್ಥಿಕ ಫಲಿತಾಂಶಗಳು ಮತ್ತು ಆರ್ಥಿಕ ಪ್ರಮಾಣಗಳನ್ನು ಹಿಂದಿನ ಸಾಲಿಗೆ ಹೋಲಿಸಿದಂತೆ ಪಟ್ಟಿ – 22ರಲ್ಲಿ ನೀಡಲಾಗಿದೆ.

ಪಟ್ಟಿ–22

ಕ್ರ.ಸಂ.	ವಿಷಯ	2018-19	2019-20
1	ಬಂಡವಾಳ ಹೂಡಿಕೆ (ಮಧ್ಯಸ್ಥದ ಲಕ್ಷಗಳಲ್ಲಿ)	15771.73	15771.73
2	ಆದಾಯ ವಹಿವಾಟು (ಒಟ್ಟು)		
	ಎ) ರೂ. ಲಕ್ಷಗಳಲ್ಲಿ	229329.55	211996.51
	ಬಿ) ಬಂಡವಾಳ ಮಧ್ಯಸ್ಥದ ಪ್ರಮಾಣ	14.54	13.44
3	**ಒಟ್ಟು ವೆಚ್ಚ**		

	ಎ) ರೂ. ಲಕ್ಷಗಳಲ್ಲಿ	264278.29	266930.84
	ಬಿ) ಆದಾಯಕ್ಕೆ ಶೇಕಡಾವಾರು	115.24	125.93
4	ನಿವ್ವಳ ಲಾಭ/ನಷ್ಟ ಆದಾಯ ತೆರಿಗೆಗೆ ಮೊದಲು		
	ಎ) ರೂ. ಲಕ್ಷಗಳಲ್ಲಿ	(–)34948.74	(–)54934.33
	ಬಿ) ಬಂಡವಾಳ ಮಧ್ಯಸ್ಥ ಹೂಡಿಕೆ ಶೇಕಡಾವಾರು	(–)221.59	(–)348.31
5	ಬಂಡವಾಳಕ್ಕೆ ದೊರೆತ ಪ್ರತಿಫಲ(ನಿವ್ವಳ ಲಾಭ + ಬಡ್ಡಿಗಳು)		
	ಎ) ರೂ. ಲಕ್ಷಗಳಲ್ಲಿ	(–)34949.51	(–)54934.33
	ಬಿ) ಬಂಡವಾಳ ಮಧ್ಯಸ್ಥದ ಶೇಕಡಾವಾರು ಪ್ರತಿಫಲ	(–)221.59	(–)348.31

ಆದಾಯ ವಹಿವಾಟಿನ ಪ್ರಮಾಣವು 2019–20ರಲ್ಲಿ 13.44:1 ಇದ್ದು, ಇದು ಕಳೆದ ಸಾಲಿನಲ್ಲಿ 14.54:1 ಆಗಿತ್ತು. ಬಿಡಿಭಾಗ ಇತ್ಯಾದಿ ಬಳಕೆ ವಸ್ತುಗಳ ಬೆಲೆ ಏರಿಕೆಯಿಂದಾಗಿ ಮತ್ತು ತುಟ್ಟಿಭತ್ಯೆಯನ್ನು ಹೆಚ್ಚಿಸಿದ ಪರಿಣಾಮವಾಗಿ ಕಾರ್ಯಾಚರಣೆ ವೆಚ್ಚವು ಹೆಚ್ಚಳಗೊಂಡಿರುತ್ತದೆ. ವರದಿ ಸಾಲಿನಲ್ಲಿ ಕಾರ್ಯಾಚರಣೆ ಪ್ರಮಾಣವು ಶೇಕಡಾ 125.93 ಇದ್ದು, 2018–19ನೇ ಸಾಲಿನಲ್ಲಿ ಇದ್ದ ಪ್ರಮಾಣ ಶೇಕಡಾ 115.24 ಕ್ಕಿಂತ ಹೆಚ್ಚಾಗಿರುತ್ತದೆ ಹಾಗೂ ವರದಿ ವರ್ಷದಲ್ಲಿ ನಿವ್ವಳ ನಷ್ಟ ರೂ. 54934.33 ಲಕ್ಷಗಳಾಗಿರುತ್ತದೆ. ಕಳೆದ ಸಾಲಿನಲ್ಲಿ ನಷ್ಟವು ರೂ. 34948.74 ಲಕ್ಷಗಳಾಗಿದ್ದು, ಇದರಿಂದಾಗಿ ಬಂಡವಾಳಕ್ಕೆ ದೊರೆತ ಪ್ರತಿಫಲದ ಶೇಕಡಾ ಪ್ರಮಾಣವು ಪ್ರಸ್ತುತ ವರ್ಷದಲ್ಲಿ (–)348.31% ಗಳಷ್ಟಾಗಿರುತ್ತದೆ.

6.6 ನಿಧಿ ಮತ್ತು ಮೀಸಲು:

ಸಂಸ್ಥೆಯ 2019–20ನೇ ಸಾಲಿನ ವಿವಿಧ ಆಂತರಿಕ ನಿಧಿ ಮತ್ತು ಮೀಸಲುಗಳು ಸ್ಥಿತಿಯ ವಿವರಣೆ ಪಟ್ಟಿ–23ರಲ್ಲಿ ಕೊಡಲಾಗಿದೆ.

ಪಟ್ಟಿ–23

ಕ್ರಮ ಸಂಖ್ಯೆ	ನಿಧಿಗಳ ವಿವರ	1–4–2019ರಂದು ಪ್ರಾರಂಭ ಶಿಲ್ಕು	2019–20 ರಲ್ಲಿನ ಸೇರ್ಪಡೆ	2019–20ರಲ್ಲಿ ಉಪಯೋಗಿಸಿ ಕೊಂಡಿದ್ದು	31–03–2020 ರಲ್ಲಿ ಇದ್ದಂತೆ ಅಂತಿಮ ಶಿಲ್ಕು
1	ಸವಕಳಿ ನಿಧಿ	2672.95	7133.05	–	9806.00
2	ವಾಹನಗಳ ವಿಮಾನಿಧಿ (3ನೇ ಕಕ್ಷಿಗಾರರ ನಷ್ಟ ಭರ್ತಿಗೆ ಮಾತ್ರ)	20.00	990.55	990.55	20.00
3	ಇತರ ಸ್ವತ್ತುಗಳಿಗಾಗಿ ವಿಮಾನಿಧಿ (ವಾಹನಗಳಿಗೂ ಸೇರಿದಂತೆ)	6468.71	479.98	–	6948.69
4	ಸಾಮಾನ್ಯ ಮೀಸಲು ನಿಧಿ	–51168.31	–	54934.33	–106102.64
5	ವಿಸ್ತರಣಾ ಕಾರ್ಯಕ್ರಮಗಳಿಗೆ ಒದಗಿಸಲಾಗುವ ಬಂಡವಾಳ ಮೀಸಲು ನಿಧಿ	5300.00	1115.14	0.00	1115.14
6	ಮಾಹಿತಿ ತಂತ್ರಜ್ಞಾನ ನಿಧಿ	–	–	–	5300.00
7	ಜೆ.ಎನ್.ನರ್ಮ್ ಮೀಸಲು ಬಸ್ಸುಗಳು	1082.60	–	–	1082.60
8	ಜೆ.ಎನ್.ನರ್ಮ್ ಮೀಸಲು ಮಾದಪ್ಪನಹಳ್ಳಿ	354.00	–	–	354.00
9	ವಿಕಲಚೇತನ ನಿಧಿ	–	73.00	–	73.00
10	ಬಿಟಿಎಂ ಲೇಔಟ್ ನಲ್ಲಿ ಪ್ರಯಾಣಿಕ ಸೌಲಭ್ಯ ಕೇಂದ್ರ	3389.00		–	3389.00

11	ಕಲಾಸಿ ಪಾಳ್ಯದಲ್ಲಿ ಬಸ್ ನಿಲ್ದಾಣದ ನಿರ್ಮಾಣ	2500.00	1000.00	–	3500.00
12	ಕೆ.ಬಿ.ಎಸ್. ನಲ್ಲಿ ಪಾದಚಾರಿ ಮೇಲ್ಸೇತುವೆಗೆ ಹೊದಿಕೆ	375.00	–	375.00	0.00
13	DULT ಅಡಿಯಲ್ಲಿ ಬಸ್ಸುಗಳ ಖರೀದಿ ನಿಧಿ	23.36	–	23.36	0.00
14	ಚಿಕ್ಕಮಾರನಹಳ್ಳಿಯಲ್ಲಿ ಬಸ್ ನಿಲ್ದಾಣದ ನಿರ್ಮಾಣ	35.00		–	35.00
15	ಚಾಲಕರ ತರಬೇತಿ ಸಿಮ್ಯುಲೇಟರ್‌ಗಾಗಿ ಅನುದಾನ	50.00		–	50.00
16	DULT ಅನುದಾನ–ಕಾವಲ್ ಬೈರಸಂದ್ರ	7.50		–	7.50
17	ರಾಜ್ಯಸರ್ಕಾರದಿಂದ ಸಾಲ ಮರುಪಾವತಿ	7474.61	8096.97	851.59	14719.99
18	ರಾಜ್ಯ ಸರ್ಕಾರದಿಂದ SDP ಅನುದಾನ	1962.00	427.00	1962.00	427.00
19	ರಾಜ್ಯ ಸರ್ಕಾರದಿಂದ SDP-SCSP ಅನುದಾನ	917.70	–	718.98	198.72
20	ರಾಜ್ಯ ಸರ್ಕಾರದಿಂದ SDP-TSP ಅನುದಾನ	457.60	–	339.66	117.94
21	ರಾಜ್ಯ ಸರ್ಕಾರದಿಂದ ಬಂಡವಾಳ ವೆಚ್ಚ	11432.53	14909.00	3670.36	22671.16
22	ನಿರ್ಭಯಾ ನಿಧಿ	3208.36	2397.23	620.10	4985.49
23	ಎಲೆಕ್ಟ್ರಿಕ್ ಬಸ್ ನಿಧಿ	1916.53	33.87	1950.40	0.00
24	ಕೌಶಲ್ಯ ಕರ್ನಾಟಕ ಯೋಜನೆ	414.07	0.00	322.31	91.76
	ಒಟ್ಟು	**–1106.80**	**36655.79**	**66758.64**	**–31209.65**

ವರ್ಷದ ಪ್ರಾರಂಭದಲ್ಲಿ ಆಂತರಿಕ ನಿಧಿಯು ಒಟ್ಟಾರೆ ರೂ.–1106.80ಲಕ್ಷಗಳಿತ್ತು. ಈ ಸಾಲಿನಲ್ಲಿ ಬೇರೆ ಬೇರೆ ನಿಧಿಗಳಿಗೆ ರೂ.36655.79 ಲಕ್ಷಗಳು ಸೇರ್ಪಡೆಯಾಗಿದ್ದು ರೂ.66758.64 ಲಕ್ಷಗಳನ್ನು ಬಳಸಿಕೊಂಡಿರುವ ಕಾರಣ ನಿಧಿಗಳ ಬಾಕಿಯು ರೂ.–31209.65 ಲಕ್ಷಗಳಷ್ಟು ಇರುತ್ತದೆ.

*****

ಪರಿಚ್ಛೇದ – 7

ಕಾಮಗಾರಿ ವಿಭಾಗ

7.1 ಭೂಮಿಯ ಬೆಲೆ:

ದಿನಾಂಕ 31–03–2020ರಲ್ಲಿದ್ದಂತೆ ಸಂಸ್ಥೆಯು ಹೊಂದಿದ್ದ ಭೂಮಿಯ ಮೌಲ್ಯ ರೂ.158.29 ಕೋಟಿಗಳಿದ್ದು, ದಿನಾಂಕ 31–03–2019ರಂತೆ ಹೊಂದಿದ್ದ ಭೂಮಿಯ ಮೌಲ್ಯ ರೂ. 162.12 ಕೋಟಿಗಳಷ್ಟಿತ್ತು.

7.2 ಕಾಮಗಾರಿ ಕೆಲಸ ಕಾರ್ಯಗಳ ಪ್ರಗತಿ:

2013–14 ಹಾಗೂ 2014–15 ನೇ ಆರ್ಥಿಕ ಸಾಲಿನಲ್ಲಿ 02 ಸ್ಥಳಗಳಾದ ದೇವನಹಳ್ಳಿ ಹಾಗೂ ಬಿಡದಿಗಳಲ್ಲಿ ಬಸ್ ಘಟಕಗಳನ್ನು ಒಟ್ಟು ರೂ. 869.00 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಯೋಜಿಸಿದ್ದು, ಪ್ರಸ್ತುತ ಎರಡೂ ಬಸ್ ಘಟಕಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಕಾರ್ಯಾಚರಣೆಗೆ ಸಿದ್ದವಾಗಿರುತ್ತವೆ. ಈ ಕಾಮಗಾರಿಗಳಿಗಾಗಿ 2019–20 ನೇ ಆರ್ಥಿಕ ಸಾಲಿನಲ್ಲಿ ಒಟ್ಟು ರೂ.78.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2013–14, 2014–15 ಹಾಗೂ 2015–16 ಗಳಲ್ಲಿ 03 ಬಸ್ ನಿಲ್ದಾಣಗಳನ್ನು ಒಟ್ಟು ರೂ. 7068.00 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಉದ್ದೇಶಿಸಿದ್ದು, ಈ ಪೈಕಿ ಮಲ್ಲಸಂದ್ರ ಬಸ್ ನಿಲ್ದಾಣದ ಹಂತ–2 ರ ಕಾಮಗಾರಿಯು ಪೂರ್ಣಗೊಂಡಿರುತ್ತದೆ ಹಾಗೂ ಕೆಂಗೇರಿ ಸ್ಯಾಟಲೈಟ್ ಟೌನ್, ಬಿ ಟಿ ಎಂ ಲೇ ಔಟ್ ಬಸ್ ನಿಲ್ದಾಣಗಳ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಈ ಕಾಮಗಾರಿಗಳಿಗಾಗಿ 2019–20 ನೇ ಆರ್ಥಿಕ ಸಾಲಿನಲ್ಲಿ ಒಟ್ಟು ರೂ.240.00 ಲಕ್ಷಗಳು ವೆಚ್ಚ ಮಾಡಲಾಗಿದೆ ಹಾಗೂ ಕಲಾಸಿಪಾಳ್ಯದಲ್ಲಿ ನೂತನ ಮಾದರಿಯ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡುವ ಕೆಲಸವನ್ನು ಒಟ್ಟು ರೂ.5000.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಪ್ರಾರಂಭಿಸಿದ್ದು, ಕೆಲಸಗಳು ಪ್ರಗತಿಯಲ್ಲಿರುತ್ತವೆ. ಸದರಿ ಕಾಮಗಾರಿಗಾಗಿ 2019–20 ನೇ ಆರ್ಥಿಕ ಸಾಲಿನಲ್ಲಿ ಒಟ್ಟು ರೂ. 500.00 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

2019–20ನೇ ಸಾಲಿನಲ್ಲಿ ಚೊಕ್ಕನಹಳ್ಳಿಯಲ್ಲಿ ವಾಹನ ತಪಾಸಣಾ ಕೇಂದ್ರವನ್ನು ರೂ.199.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಈ ಯೋಜನೆಯು ಪ್ರಗತಿಯಲ್ಲಿರುತ್ತದೆ.

2019–20ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ. 1127.00 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಈ ಪೈಕಿ ಮುಂದುವರೆದ ಕೆಲಸವಾದ ಹೊಸಕೋಟೆಯ ಬಸ್ ಟರ್ಮಿನಲ್ ಕಾಮಗಾರಿಯನ್ನು ಪೂರ್ಣಗೊಳಿಸಿ, ಆಚರಣೆಗೆ ಬಿಟ್ಟುಕೊಡಲಾಗಿರುತ್ತದೆ ಹಾಗೂ ಈ ಕಾಮಗಾರಿಗಾಗಿ ಬಿಡುಗಡೆಯಾಗಿದ್ದ ಅನುದಾನದ ಮೊತ್ತ ರೂ. 700.00 ಲಕ್ಷಗಳನ್ನು 2019–20 ನೇ ಸಾಲಿನಲ್ಲಿ ವೆಚ್ಚ ಮಾಡಲಾಗಿರುತ್ತದೆ ಹಾಗೂ ಉಳಿದ ಅನುದಾನದ ಮೊತ್ತವಾದ ರೂ. 427.00 ಲಕ್ಷಗಳಲ್ಲಿ ಹೊಸಕೋಟೆ ತಾಲೂಕಿನ ಜಡಿಗೇನಹಳ್ಳಿಯಲ್ಲಿ ಸ್ವಯಂಚಾಲಿತ ವಾಹನ ತಪಾಸಣಾ ಹಾಗೂ ಪ್ರಮಾಣೀಕರಣ ಕೇಂದ್ರವನ್ನು ನಿರ್ಮಿಸಲು ಯೋಜಿಸಲಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಾರಂಭದ ಹಂತದಲ್ಲಿದ್ದು, 2019–20ನೇ ಸಾಲಿನಲ್ಲಿ ರೂ. 100.00 ಲಕ್ಷಗಳನ್ನು ವೆಚ್ಚಮಾಡಲಾಗಿರುತ್ತದೆ.

2019–20 ನೇ ಸಾಲಿಗೆ ಇತರೆ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸುವ 09 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಅಂದಾಜು ಮೊತ್ತ ರೂ. 867.20 ಲಕ್ಷಗಳಾಗಿರುತ್ತದೆ. ಈ ಪೈಕಿ 06 ಕಾಮಗಾರಿಗಳು ಪೂರ್ಣಗೊಂಡಿದ್ದು, 2019–20 ನೇ ಸಾಲಿನಲ್ಲಿ ಈ ಕಾಮಗಾರಿಗಳಿಗಾಗಿ ರೂ. 323.14 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ವಿವಿಧ ನಿರ್ಮಾಣ ಕಾಮಗಾರಿಗಳಿಗೆ 2019–20ನೇ ಸಾಲಿನಲ್ಲಿ ಮಾಡಲಾದ ವೆಚ್ಚದ ವಿವರಗಳನ್ನು ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ:

ಪಟ್ಟಿ–24

ಕ್ರಮ. ಸಂಖ್ಯೆ	ಕಾಮಗಾರಿ ವಿವರ	ಮಂಜೂರಾಗಿರುವ ಕೆಲಸಗಳ ಸಂಖ್ಯೆ	ಪ್ರಸಕ್ತ 2019–20ನೇ ಸಾಲಿನಲ್ಲಿ ಮಾಡಲಾದ ವೆಚ್ಚ (ರೂ. ಲಕ್ಷಗಳಲ್ಲಿ)
1	ಘಟಕಗಳು	2	78.00
2	ಬಸ್ ನಿಲ್ದಾಣಗಳು	4	740.00
3	ಮೂಲಭೂತ ಸೌಕರ್ಯ ಮತ್ತು ಅಭಿವೃದ್ಧಿ ಕೆಲಸಗಳು	9	323.14
4	ವಿಶೇಷ ಅಭಿವೃದ್ದಿ ಯೋಜನೆ	2	800.00
	ಒಟ್ಟು	**17**	**1941.14**

7.3

ಮೂಲ ಸೌಕರ್ಯಗಳ ನಿರ್ವಹಣೆ, ದುರಸ್ಥಿ ಕೆಲಸಗಳು ಹಾಗೂ ಭಾರಿ ಕಾಮಗಾರಿ ಕೆಲಸಗಳೊಂದಿಗೆ ಅರೆಖಾಯಂ, ಹಂಗಾಮಿ ಹಾಗೂ ಇತರೆ ಸಣ್ಣ ಪುಟ್ಟ ಕಾಮಗಾರಿಗಳನ್ನು ಪ್ರಸಕ್ತ ವರ್ಷದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

*****

ಪರಿಚ್ಛೇದ –8 **ಕಾರ್ಮಿಕ**

8.1 ಆಡಳಿತದಲ್ಲಿ ಕಾರ್ಮಿಕರ ಪಾತ್ರ:

ಸಂಸ್ಥೆಯ ಎಲ್ಲಾ ನೊಂದಾಯಿತ ಕಾರ್ಮಿಕ ಸಂಘಗಳೊಂದಿಗೆ ಕಾಲಕಾಲಕ್ಕೆ ಸಭೆ ನಡೆಸಲಾಗುತ್ತಿದೆ. ನೌಕರರು ಮತ್ತು ಅವರ ಪ್ರತಿನಿಧಿಗಳು ನೀಡುವ ಸಲಹೆಗಳನ್ನು ಪರಿಶೀಲಿಸಿ ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಉಳಿದಂತೆ, ಸಂಸ್ಥೆಯು ತನ್ನದೇ ಆದ ಭವಿಷ್ಯನಿಧಿ, ಡಿ.ಆರ್.ಬಿ.ಎಫ್. ಮತ್ತು ವಿದ್ಯಾ ಸಹಾಯನಿಧಿ ಸಮಿತಿಯನ್ನು ಹೊಂದಿದ್ದು, ಆ ಸಮಿತಿಯಲ್ಲಿ ಸಹ ನೌಕರರ ಪ್ರತಿನಿಧಿಗಳು ಇರುತ್ತಾರೆ.

8.2 ಔದ್ಯಮಿಕ ಬಾಂಧವ್ಯ :

ವರದಿ ವರ್ಷದಲ್ಲಿ ಉತ್ತಮ ಕೈಗಾರಿಕಾ ಬಾಂಧವ್ಯವನ್ನು ಕಾಯ್ದುಕೊಳ್ಳಲಾಗಿದೆ.

8.3 ವೇತನ ಸಹಿತ ರಜಾ ದಿನಗಳು:

ಸಂಸ್ಥೆಯ ನೌಕರರು ಕ್ಯಾಲೆಂಡರ್ ವರ್ಷದಲ್ಲಿ 10 ದಿನಗಳ ವೇತನ ಸಹಿತ ರಜೆಗೆ ಅರ್ಹರಿದ್ದು, ವರದಿಯ ವರ್ಷದಲ್ಲಿ ರಜಾ ದಿನಗಳಂದು ಕರ್ತವ್ಯ ನಿರ್ವಹಿಸಿದ 31060 ಕಾರ್ಮಿಕರಿಗೆ ಒಟ್ಟು ರೂ. 10,55,39,163/– ಗಳನ್ನು ವೇತನ ಸಹಿತ ರಜೆ ರೂಪದಲ್ಲಿ ಹೆಚ್ಚುವರಿ ವೇತನವನ್ನು ಪಾವತಿಸಲಾಗಿದೆ.

8.4 ಉಪಧನ:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಉಪಧನ ನಿಯಮಾವಳಿ ಮತ್ತು ಉಪಧನ ಪಾವತಿ ಕಾಯಿದೆ 1972 ಇವೆರಡೂ ಪದ್ಧತಿಯಲ್ಲಿ ಉಪಧನವನ್ನು ಲೆಕ್ಕಚಾರ ಮಾಡಲಾಗುವುದು. ಉಪಧನ ಕಾಯಿದೆ ಪ್ರಕಾರ ಪ್ರತಿ ವರ್ಷದ ಪೂರ್ಣ ಸೇವೆಗೆ ಅರ್ಧ ತಿಂಗಳ ವೇತನ (ಮೂಲ ವೇತನ+ತುಟ್ಟಿ ಭತ್ಯೆ) ಮತ್ತು ಉಪಧನ ನಿಯಮಾವಳಿ ಪ್ರಕಾರ ಪೂರ್ಣಗೊಳಿಸಿದ ಪ್ರತಿ ವರ್ಷದ ಸೇವೆಗೆ ಒಂದು ತಿಂಗಳ ಮೂಲ ವೇತನಕ್ಕೆ ಸಮನಾದ ಮೊತ್ತದನ್ವಯ ಲೆಕ್ಕಾಚಾರ ಮಾಡಿ, ಇವೆರಡರಲ್ಲಿ ಯಾವುದು ಅಧಿಕವೋ ಅದನ್ನು ನೀಡಲಾಗುವುದು. ವರದಿ ಸಾಲಿನಲ್ಲಿ ಸಂಸ್ಥೆಯ ಸೇವೆಯಿಂದ ನಿಧನ, ನಿವೃತ್ತಿ, ವಜಾ, ರಾಜೀನಾಮೆ ಹಾಗೂ ಇತರೆ ಸ್ವಯಂ ನಿವೃತ್ತಿಯಾದ ನೌಕರರು/ಅವಲಂಬಿತರು ರೂ.15.54 ಕೋಟಿಗಳನ್ನು ಉಪಧನವಾಗಿ ಪಡೆದಿರುತ್ತಾರೆ.

8.5 ನೌಕರರ ಭವಿಷ್ಯ ನಿಧಿ ಯೋಜನೆ:

ಸಂಸ್ಥೆಯು ಭವಿಷ್ಯ ನಿಧಿ ಕಾಯಿದೆಯಿಂದ ವಿನಾಯಿತಿ ಪಡೆದಿದೆ ಮತ್ತು ಭವಿಷ್ಯ ನಿಧಿ ಉಸ್ತುವಾರಿಯನ್ನು ಆಡಳಿತ ವರ್ಗ ಮತ್ತು ನೌಕರರ ಪ್ರತಿನಿಧಿಗಳನ್ನೊಳಗೊಂಡ ಟ್ರಸ್ಟ್ ನಿರ್ವಹಿಸುತ್ತಿದೆ. ವರದಿ ಸಾಲಿನಲ್ಲಿ ಹಿಂತಿರುಗಿಸದ ಮುಂಗಡ ಅರ್ಜಿಗಳ ಸಂಖ್ಯೆ: 2536ಕ್ಕೆ ಒಟ್ಟು ರೂ. 74,87,32,700/–ಗಳು, ಹಿಂತಿರುಗಿಸುವ ಅರ್ಜಿಗಳ ಸಂಖ್ಯೆ:5641ಕ್ಕೆ ಒಟ್ಟು ರೂ.77,92,37,260/–ಗಳು ಹಿಂತಿರುಗಿಸಿದ ಮುಂಗಡ ಅರ್ಜಿಗಳ ಸಂಖ್ಯೆ:1838ಕ್ಕೆ ಒಟ್ಟು ರೂ.17,75,92,500/–ಗಳು ಮತ್ತು ನಿವೃತ್ತಿ/ನಿಧನ/ರಾಜೀನಾಮೆ ಪ್ರಕರಣಗಳಲ್ಲಿ ಒಟ್ಟು 9058 ಪ್ರಕರಣಗಳಿಗೆ ಒಟ್ಟು ಮೊತ್ತ ರೂ.73,18,74,872/–ಗಳನ್ನು ಪಾವತಿಸಲಾಗಿದೆ.

8.6 ಉಪಹಾರ ಗೃಹಗಳು:

ಸಂಸ್ಥೆಯ ಕೇಂದ್ರೀಯ ಕಾರ್ಯಾಗಾರ–1 ಹಾಗೂ 2ರಲ್ಲಿ ಸಹಕಾರಿ ಉಪಹಾರಗೃಹ ಕಾರ್ಯಾನಿರ್ವಹಿಸುತ್ತಿವೆ. ತತ್ಸಂಬಂಧ ಜಾರಿಯಲ್ಲಿರುವ ಸುತ್ತೋಲೆ ಸೂಚನೆಯನ್ವಯ ರೂ. 3.50 ಲಕ್ಷಗಳನ್ನು ಕೇಂದ್ರೀಯ ಕಾರ್ಯಾಗಾರ–1ರಲ್ಲಿರುವ ಸಹಕಾರಿ ಉಪಹಾರಗೃಹಕ್ಕೆ ವಾರ್ಷಿಕ ಸಹಾಯಧನವಾಗಿ ಸಂಸ್ಥೆಯು ನೀಡುತ್ತಿದ್ದು, ಸದರಿ ಸಹಕಾರಿ ಉಪಹಾರಗೃಹದ ಕಾರ್ಮಿಕರಿಗೆ ವೇತನ, ಅಡುಗೆ ಅನಿಲದ ವೆಚ್ಚ ಮತ್ತು ಬಹುಪಯೋಗಿ ಅಡುಗೆ ಸಲಕರಣೆಗಳನ್ನು ಸಹ ಸಂಸ್ಥೆಯ ವತಿಯಿಂದ ನೀಡಲಾಗುತ್ತಿದೆ. ಈ ಬಾಬ್ತು ವರದಿಯ ಸಾಲಿನಲ್ಲಿ ನೌಕರರ ಸಂಬಳ ಮತ್ತು ಅನಿಲದ ವೆಚ್ಚ ಎರಡು ಸೇರಿ ಕೇಂದ್ರೀಯ

ಕಾರ್ಯಗಾರ–1ರ ಉಪಹಾರಗೃಹಕ್ಕೆ ರೂ.7,10,892/–ಗಳನ್ನು ನೀಡಲಾಗಿದೆ. ಅದೇ ರೀತಿ ಸಂಸ್ಥೆಯ ಕೇಂದ್ರೀಯ ಕಾರ್ಯಗಾರ–2ರಲ್ಲಿರುವ ಉಪಹಾರ ಗೃಹಕ್ಕೆ ಸಂಸ್ಥೆಯ ವತಿಯಿಂದ ಪ್ರಸ್ತುತ ಸಾಲಿನಲ್ಲಿ ರೂ. 4,26,720/–ಗಳನ್ನು ನೀಡಲಾಗಿದೆ. ಉಳಿದಂತೆ ಘಟಕಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಟೆಂಡರ್ ಕರೆದು ಉಪಹಾರ ಗೃಹಗಳನ್ನು ನಡೆಸಲಾಗುತ್ತಿದೆ. ಈ ಪದ್ದತಿಯಡಿ ಬಾಡಿಗೆ ರಹಿತ ಕಟ್ಟಡ, ನೀರು, ವಿದ್ಯುಚ್ಚಕ್ತಿ ಉಪಯೋಗಕ್ಕೆ ಅವಕಾಶವನ್ನು ಮಾಡಿಕೊಡಲಾಗಿದೆ

8.7 ವೈದ್ಯಕೀಯ ಮರುಪಾವತಿ ಸೌಲಭ್ಯಗಳು:

ನೌಕರರು ಕರಾರಸಾ ನಿಗಮದ ನೌಕರರ (ಮೆಡಿಕೆಲ್ ಅಟೆಂಡೆನ್ಸ್) ನಿಯಮಾವಳಿಗಳು 1970ರ ಪ್ರಕಾರ ವೈದ್ಯಕೀಯ ಮರುಪಾವತಿಗೆ ಅರ್ಹರಿರುತ್ತಾರೆ ಹಾಗೂ ಸಿಜಿಹೆಚ್ಎಸ್–2014(Non NABH) ದರಗಳನ್ನು ಅಳವಡಿಸಿಕೊಳ್ಳಲಾಗಿದ್ದು, ನೌಕರರ ಅವಲಂಬಿತರು ಸಹ ವೈದ್ಯಕೀಯ ವೆಚ್ಚದ ಮರುಪಾವತಿಗೆ ಅರ್ಹರಿರುತ್ತಾರೆ. ವರದಿ ಸಾಲಿನಲ್ಲಿ ಸಂಸ್ಥೆಯ 7900 ಮಂದಿ ಕಾರ್ಮಿಕರು ರೂ. 705.10 ಲಕ್ಷಗಳನ್ನು ವೈದ್ಯಕೀಯ ಮರುಪಾವತಿ ರೂಪದಲ್ಲಿ ಪಡೆದಿರುತ್ತಾರೆ.

ಸಂಸ್ಥೆಯು ತನ್ನ ನೌಕರರು ಮತ್ತು ಅವರ ಅವಲಂಬಿತರಿಗೆ ಉತ್ತಮ ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ರಾಜ್ಯ ಸರ್ಕಾರದಿಂದ ಅನುಮೋದಿಸಲ್ಪಟ್ಟ ಮತ್ತು ಸರ್ಕಾರವು ಮಾನ್ಯತೆ ನೀಡಿರುವ ಉತ್ತಮ ಸೌಕರ್ಯಗಳನ್ನು ಹೊಂದಿರುವ ಖಾಸಗಿ ಆಸ್ಪತ್ರೆಗಳಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆ ಪಡೆಯುವ ಸಲುವಾಗಿ ವೈದ್ಯರ ಬೇಡಿಕೆ ಪತ್ರ ಮತ್ತು ಅಂದಾಜು ಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಿದ 652 ಕಾರ್ಮಿಕರು ರೂ.2,07,76,160/–ಗಳ ಮುಂಗಡ ಹಣವನ್ನು ಪಡೆದಿರುತ್ತಾರೆ.

8.8 ಕಾರ್ಮಿಕ ಕಲ್ಯಾಣ ನಿಧಿ:

ಪ್ರತಿ ವರ್ಷದಂತೆ 2019–20ನೇ ಸಾಲಿನಲ್ಲಿ ಕಾರ್ಮಿಕರಿಂದ ರೂ.20/–ವಂತಿಕೆಯನ್ನು ಹಾಗೂ ಉದ್ಯೋಗದಾತರ ವಂತಿಕೆ ರೂ.40/–ನ್ನು ಸೇರಿಸಿ ಕರ್ನಾಟಕ ಕಾರ್ಮಿಕ ಕಲ್ಯಾಣ ಇಲಾಖೆಗೆ ಒಟ್ಟು ರೂ.19.28 ಲಕ್ಷಗಳನ್ನು ಪಾವತಿಸಲಾಗಿದೆ.

8.9 ಕಾರ್ಮಿಕ ಪರಿಹಾರ ನಿಧಿ:

ಸಂಸ್ಥೆಯ ನೌಕರರು ಕಾರ್ಮಿಕ ಪರಿಹಾರ ಕಾಯ್ದೆಯನ್ವಯ ಪರಿಹಾರಕ್ಕೆ ಅರ್ಹರಿರುತ್ತಾರೆ.

8.10 ಹಬ್ಬದ ಮುಂಗಡ:

ಸಂಸ್ಥೆಯ ಎಲ್ಲಾ ಅಧಿಕಾರಿಗಳು ಮತ್ತು ಕಾರ್ಮಿಕರು ವಾರ್ಷಿಕ ರೂ.5000/–ಗಳ ಹಬ್ಬದ ಮುಂಗಡ ಪಡೆಯಲು ಅರ್ಹರಿದ್ದು, ಅದನ್ನು 10 ಸಮಾನ ಕಂತುಗಳಲ್ಲಿ ಹಿಡಿದುಕೊಳ್ಳಲಾಗುತ್ತದೆ. ಪ್ರಸ್ತುತ ವರದಿಯ ಸಾಲಿನಲ್ಲಿ 12820 ಕಾರ್ಮಿಕರು ರೂ. 641.00 ಲಕ್ಷಗಳನ್ನು ಮುಂಗಡವಾಗಿ ಪಡೆದಿರುತ್ತಾರೆ.

8.11 ಮರಣ–ವ–ನಿವೃತ್ತಿ ಸಹಾಯ ನಿಧಿ:

ಸಂಸ್ಥೆಯ ಎಲ್ಲಾ ನೌಕರರು ತಿಂಗಳಿಗೆ ರೂ.100/–ಗಳ ವಂತಿಗೆ ನೀಡಿ ಮರಣ–ವ–ನಿವೃತ್ತಿ ಸಹಾಯನಿಧಿಗೆ ಸದಸ್ಯರಾಗಿರುತ್ತಾರೆ. ಈ ರೂ.100/–ರಲ್ಲಿ ರೂ.35/–ನ್ನು ಮರಣ ಪರಿಹಾರ ಹಣವಾಗಿ (ಡೆತ್ ಕವರೇಜ್) ಮತ್ತು ಉಳಿದ ರೂ.65/–ನ್ನು ನೌಕರರ ಉಳಿತಾಯ ಖಾತೆಗೆ ಜಮಾ ಮಾಡಲಾಗುತ್ತದೆ.

ಸದಸ್ಯ ನೌಕರರು ಸೇವೆಯಲ್ಲಿರುವಾಗ ಮರಣ ಹೊಂದಿದಲ್ಲಿ ಅಂತ್ಯ ಸಂಸ್ಕಾರಕ್ಕಾಗಿ ರೂ.5,000/–ಗಳನ್ನು ಮರಣ–ವ–ನಿವೃತ್ತಿ ನಿಧಿಯಿಂದ ಬಿಡುಗಡೆ ಮಾಡಲಾಗುವುದು. ಮರಣ–ವ–ನಿವೃತ್ತಿ ನಿಧಿಯ ಅಂತಿಮ ಇತ್ಯರ್ಥದ ಹಣವಾಗಿ ರೂ.1,25,000/–ಗಳೊಂದಿಗೆ ಉಳಿಕೆ ವಂತಿಗೆ ಹಣವನ್ನು ಶೇಕಡ 8ರ ಬಡ್ಡಿ ಸಮೇತ ಮೃತರ ಅವಲಂಬಿತರಿಗೆ ನೀಡಲಾಗುತ್ತಿದೆ.

ಸೇವೆಯಿಂದ ವಜಾ/ನಿವೃತ್ತಿ ಹೊಂದಿದ/ರಾಜೀನಾಮೆ ನೀಡಿದ ನೌಕರರು ಮರಣ–ವ–ನಿವೃತ್ತಿ ನಿಧಿಯಿಂದ ತಮ್ಮ ವಂತಿಗೆಯನ್ನು ಶೇಕಡ 8ರ ಬಡ್ಡಿ ಸಮೇತ ಪಡೆಯಲು ಅರ್ಹರಿರುತ್ತಾರೆ.

8.12 ವಿದ್ಯಾ ಸಹಾಯ ನಿಧಿ:

ನೌಕರರ ಮಕ್ಕಳಿಗೆ ವಿದ್ಯಾ ಸಹಾಯ ನಿಧಿಯಿಂದ ನೀಡುತ್ತಿರುವ ವಿದ್ಯಾರ್ಥಿ ವೇತನದ ವಿವರಗಳು ಈ ಕೆಳಕಂಡಂತಿದೆ.

1	ಐ.ಟಿ.ಐ ಕೋರ್ಸ್‌ಗಳು	ರೂ.75/– ತಿಂಗಳಿಗೆ
2	ಡಿಪ್ಲೋಮಾ ಕೋರ್ಸ್‌ಗಳು	ರೂ.110/– ತಿಂಗಳಿಗೆ
3	ಪದವಿ:– ಬಿಇ/ಬಿವಿಎಸ್‌ಸಿ ಕೋರ್ಸ್‌ಗಳು	ರೂ.900/– ಪ್ರತಿ ಸೆಮಿಸ್ಟರ್‌ಗೆ
4	ಸ್ನಾತಕೊತ್ತರ ಪದವಿ ಕೋರ್ಸ್‌ಗಳು	ರೂ.225/– ತಿಂಗಳಿಗೆ

ಈ ಸೌಲಭ್ಯವನ್ನು ನೌಕರರ ಕುಟುಂಬದ ಒಬ್ಬ ಸದಸ್ಯರು ಮಾತ್ರ ಪಡೆಯಬಹುದಾಗಿದೆ. ವರದಿ ಸಾಲಿನಲ್ಲಿ 49 ಜನ ನೌಕರರು ಈ ಸೌಲಭ್ಯವನ್ನು ಪಡೆದುಕೊಂಡಿದ್ದು, ಅದಕ್ಕಾಗಿ ರೂ. 2,69,300/–ಗಳನ್ನು ಪಾವತಿಸಲಾಗಿದೆ.

8.13 ಕಾರ್ಮಿಕ ಕಲ್ಯಾಣ ಯೋಜನೆಗಳು:

1. ಶೈಕ್ಷಣಿಕ ಸಾಲ:

ಈ ಯೋಜನೆಯಡಿ ಬಿಇ, ಎಂಬಿಬಿಎಸ್, ಬಿಡಿಎಸ್, ಬಿಎಂಎಸ್, ಮುಂತಾದ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ನೌಕರರು/ಅಧಿಕಾರಿಗಳ ಮಕ್ಕಳ ವ್ಯಾಸಂಗದ ಬೋಧನಾ ಶುಲ್ಕದ ಪಾವತಿಗಾಗಿ ರೂ.50,000/– ವರೆಗೆ ಶೈಕ್ಷಣಿಕ ಸಾಲ ಮಂಜೂರು ಮಾಡಲಾಗುತ್ತದೆ.

2. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ:

ಈ ಯೋಜನೆಯಡಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿಯಲ್ಲಿ ಶೇ.70 ಮತ್ತು ಹೆಚ್ಚು ಅಂಕಗಳನ್ನು ಹಾಗೂ ಪದವಿ ಮತ್ತು ಸ್ನಾತ್ತಕೋತ್ತರ ಪರೀಕ್ಷೆಗಳಲ್ಲಿ ಶೇ.60 ಕ್ಕಿಂತ ಹೆಚ್ಚಿನ ಅಂಕ ಗಳಿಸಿದ ನೌಕರರ/ಅಧಿಕಾರಿಗಳ ಮಕ್ಕಳಿಗೆ ರೂ.2000/– ರಿಂದ ರೂ.6000/–ವರೆಗೆ ನಗದು ಪುರಸ್ಕಾರ ನೀಡಲಾಗುತ್ತಿದೆ.

3. ಮದ್ಯವ್ಯಸನಿ ಚಿಕಿತ್ಸಾ ಕಾರ್ಯಕ್ರಮ:

ಮದ್ಯವ್ಯಸನಿ ನೌಕರರು ಕುಡಿತದ ಚಟದಿಂದ ಹೊರಬರಲು ಸಂಸ್ಥೆಯಲ್ಲಿ ಮದ್ಯವ್ಯಸನಿ ಚಿಕಿತ್ಸಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಇದಕ್ಕಾಗಿ ಕರಾರಸಾ ನಿಗಮದ ಜಯನಗರ ಆಸ್ಪತ್ರೆಯಲ್ಲಿ 40 ಹಾಸಿಗೆಗಳ ಘಟಕವನ್ನು ಸ್ಥಾಪಿಸಲಾಗಿದೆ. ಈ ಚಿಕಿತ್ಸೆಗಾಗಿ ಪ್ರತಿ ಮದ್ಯವ್ಯಸನಿ ನೌಕರರಿಗೆ ಗರಿಷ್ಠ ರೂ.8000/– ವರೆಗೆ ಸಂಸ್ಥೆಯೇ ವೆಚ್ಚ ಮಾಡುತ್ತಿದೆ.

4. ಪ್ರಿವೆಂಟಿವ್ ಮೆಡಿಸಿನ್ ಮತ್ತು ಹೆಲ್ತಿ ಲೈಫ್ ಸ್ಟೈಲ್ ಕ್ಲಿನಿಕ್:

ಶಾಂತಿನಗರದಲ್ಲಿನ ಸಂಸ್ಥೆಯ ಚಿಕಿತ್ಸಾಲಯದಲ್ಲಿ ನುರಿತ ವೈದ್ಯಾಧಿಕಾರಿಗಳನ್ನು ನೇಮಿಸಿಕೊಂಡು ಅವರಿಂದ ನೌಕರರಿಗೆ ಮತ್ತು ಅವರ ಕುಟುಂಬದವರಿಗೆ ವೈದ್ಯಕೀಯ ಚಿಕಿತ್ಸೆಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಅಲ್ಲದೇ, ಸಂಸ್ಥೆಯ ಪ್ರಮುಖ ಬಸ್ ನಿಲ್ದಾಣಗಳಾದ ಕೆಂಪೇಗೌಡ ಬಸ್‌ನಿಲ್ದಾಣದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

5. ಇಲಾಖಾ ಗುಂಪು ವಿಮಾ ಯೋಜನೆ:

ಸಂಸ್ಥೆಯಲ್ಲಿ ನೌಕರರ ಕುಟುಂಬ ಕಲ್ಯಾಣ ಯೋಜನೆಯಡಿ ಆಂತರಿಕ ವಿಮಾ ಪರಿಹಾರ ಯೋಜನೆಯನ್ನು ದಿನಾಂಕ.01.01.2008 ರಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಸದಸ್ಯತ್ವ ಹೊಂದಿದ ನೌಕರರು ಸೇವೆಯಲ್ಲಿದ್ದಾಗ ನಿಧನ ಹೊಂದಿದಲ್ಲಿ ಅವರ ಅವಲಂಬಿತರು ರೂ.3.00 ಲಕ್ಷಗಳ ಪರಿಹಾರ ಪಡೆಯಲು ಅರ್ಹರಿರುತ್ತಾರೆ. ಈ ಯೋಜನೆಯ ಮಾಸಿಕ ಕಂತು ರೂ.100/– ಆಗಿದ್ದು, ಅದರಲ್ಲಿ ನೌಕರನ ವಂತಿಕೆ ರೂ. 70/– ಮತ್ತು ಸಂಸ್ಥೆಯ ವಂತಿಕೆ ರೂ.30/–ಆಗಿರುತ್ತದೆ. ಈ ಯೋಜನೆಯಡಿ ವರದಿ ಸಾಲಿನಲ್ಲಿ ಸೇವೆಯಲ್ಲಿರುವಾಗಲೇ ನಿಧನರಾದ 100 ನೌಕರರ ಅವಲಂಬಿತರು/ನಾಮನಿರ್ದೇಶಿತರಿಗೆ ಒಟ್ಟು ರೂ. 2,73,39,237/–ಗಳನ್ನು ಪಾವತಿಸಲಾಗಿದೆ.

6. ಹೆರಿಗೆ ರಜೆ:

ಸಂಸ್ಥೆಯಲ್ಲಿ ಮಹಿಳಾ ನೌಕರರಿಗೆ ರಾಜ್ಯ ಸರ್ಕಾರದ ಮಾದರಿಯಲ್ಲಿ ಹೆರಿಗೆ ರಜೆಯನ್ನು 180 ದಿನಗಳಿಗೆ ಹೆಚ್ಚಿಸಲಾಗಿದೆ. ಪ್ರಸ್ತುತ ಮಹಿಳಾ ನೌಕರರು 90 ದಿನಗಳ ಹೆರಿಗೆ ಪೂರ್ವ ರಜೆಯನ್ನು ಮತ್ತು 90 ದಿನಗಳ ಹೆರಿಗೆ ನಂತರದ ರಜೆಯನ್ನು ಪಡೆದುಕೊಳ್ಳಬಹುದಾಗಿದೆ.

7. ಮಾಸಿಕ ಮಗು ಪೋಷಣಾ ಭತ್ಯೆ:

ಸಂಸ್ಥೆಯ ಮಹಿಳಾ ನೌಕರರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಮಗುವಿಗೆ ಎರಡು ವರ್ಷ ತುಂಬುವವರೆಗೆ ರೂ. 1250/–ಗಳನ್ನು ಮಾಸಿಕ ಶಿಶು ಪಾಲನಾ ಭತ್ಯೆಯಾಗಿ ಮಂಜೂರು ಮಾಡಲಾಗಿದೆ.

8. ನೌಕರರ ಅವಲಂಬಿತರಿಗೆ ಎಕ್ಸ್‌ಗ್ರೇಷಿಯ ಪಾವತಿ:

ಸಂಸ್ಥೆಯ ನೌಕರರು ಮರಣ ಹೊಂದಿದ ಸಂದರ್ಭದಲ್ಲಿ ಅವರ ಅವಲಂಬಿತರಿಗೆ ಅಂತ್ಯಕ್ರಿಯೆ ಕಾರ್ಯಗಳನ್ನು ಮಾಡಲು ಅನುಕೂಲವಾಗುವಂತೆ ಸಂಸ್ಥೆಯ ವತಿಯಿಂದ ರೂ.10,000/–ಗಳನ್ನು ಎಕ್ಸ್‌ಗ್ರೇಷಿಯಾ ರೂಪದಲ್ಲಿ ನೀಡಲಾಗುತ್ತಿದೆ.

9. ಲೀವ್ ಕಿಯೋಸ್ಕ್(ಎಲ್‌ಎಂಎಸ್):

ರಜೆ ಮಂಜೂರಾತಿ ವಿಚಾರದಲ್ಲಿ ಪಾರದರ್ಶಕತೆಯನ್ನು ತರುವ ಪ್ರಯುಕ್ತ ಲೀವ್ ಮ್ಯಾನೆಜ್‌ಮೆಂಟ್ ಸಿಸ್ಟಮ್(ಕಿಯೋಸ್ಕ್‌ಗಳನ್ನು) ಘಟಕಗಳಲ್ಲಿ ಅಳವಡಿಸಲಾಗಿದೆ.

10. ಸ್ವಯಂ ನಿವೃತ್ತಿ ಯೋಜನೆ ಮತ್ತು ಕಲ್ಯಾಣ ನಿಧಿ:

ನೌಕರರು ಸೇವೆಯಲ್ಲಿರುವಾಗಲೇ ತೀವ್ರ ಸ್ವರೂಪದ ಅನಾರೋಗ್ಯಕ್ಕೀಡಾಗಿ ನೇಮಕಗೊಂಡ ಹುದ್ದೆಯ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥರಾದಲ್ಲಿ, ಅಂತಹ ಅರ್ಹ ನೌಕರರಿಗೆ ಅನುಕೂಲ ಕಲ್ಪಿಸಲು ವೈದ್ಯಕೀಯ ಅಸಮರ್ಥತಾ ಮತ್ತು ಕಲ್ಯಾಣ ನಿಧಿಯನ್ನು 2004–05ರಲ್ಲಿ ಸ್ಥಾಪಿಸಿದ್ದು, ಪ್ರಸ್ತುತ ಯೋಜನೆಯಡಿಯಲ್ಲಿ ಸ್ವಯಂ ನಿವೃತ್ತಿ ಪಡೆಯಲು ಕನಿಷ್ಟ ಶೇ.45 ಮತ್ತು ಅದಕ್ಕೆ ಮೇಲ್ಪಟ್ಟು ಶಾಶ್ವತ ಅಂಗವಿಕಲತೆ ಹೊಂದಿರುವ ನೌಕರರು, ಸೇವಾ ಸೌಲಭ್ಯಗಳ ಜೊತೆಗೆ ಈ ಕೆಳಕಂಡ ಆರ್ಥಿಕ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.

ಬಾಕಿ ಉಳಿದಿರುವ ಕನಿಷ್ಠ ಸೇವಾವಧಿ 6 ವರ್ಷಗಳು ಹಾಗೂ ಮೇಲ್ಪಟ್ಟು ರೂ. 10.00 ಲಕ್ಷಗಳು
ಬಾಕಿ ಉಳಿದಿರುವ ಕನಿಷ್ಠ ಸೇವಾವಧಿ 5 ವರ್ಷಗಳು ಹಾಗೂ ಮೇಲ್ಪಟ್ಟು ರೂ. 08.00 ಲಕ್ಷಗಳು
ಬಾಕಿ ಉಳಿದಿರುವ ಕನಿಷ್ಠ ಸೇವಾವಧಿ 4 ವರ್ಷಗಳು ಹಾಗೂ ಮೇಲ್ಪಟ್ಟು ರೂ. 06.00 ಲಕ್ಷಗಳು
ಬಾಕಿ ಉಳಿದಿರುವ ಕನಿಷ್ಠ ಸೇವಾವಧಿ 3 ವರ್ಷಗಳು ಹಾಗೂ ಮೇಲ್ಪಟ್ಟು ರೂ. 04.00 ಲಕ್ಷಗಳು
ಬಾಕಿ ಉಳಿದಿರುವ ಕನಿಷ್ಠ ಸೇವಾವಧಿ 2 ವರ್ಷಗಳು ಹಾಗೂ ಮೇಲ್ಪಟ್ಟು ರೂ. 03.00 ಲಕ್ಷಗಳು

ಹಾಗೂ ನೇಮಕಗೊಂಡ ಹುದ್ದೆಯ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥರಾದ ನೌಕರರಿಗೆ ವೈದ್ಯಕೀಯ ಪ್ರಮಾಣ ಪತ್ರದ ಮೇಲೆ ಈ ಕೆಳಕಂಡ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

ಬಾಕಿ ಉಳಿದಿರುವ ಕನಿಷ್ಠ ಸೇವಾವಧಿ 5 ವರ್ಷಗಳು ಹಾಗೂ ಮೇಲ್ಪಟ್ಟು ರೂ. 06.00 ಲಕ್ಷಗಳು
ಬಾಕಿ ಉಳಿದಿರುವ ಕನಿಷ್ಠ ಸೇವಾವಧಿ 4 ವರ್ಷಗಳು ಹಾಗೂ ಮೇಲ್ಪಟ್ಟು ರೂ. 05.00 ಲಕ್ಷಗಳು
ಬಾಕಿ ಉಳಿದಿರುವ ಕನಿಷ್ಠ ಸೇವಾವಧಿ 3 ವರ್ಷಗಳು ಹಾಗೂ ಮೇಲ್ಪಟ್ಟು ರೂ. 04.00 ಲಕ್ಷಗಳು
ಬಾಕಿ ಉಳಿದಿರುವ ಕನಿಷ್ಠ ಸೇವಾವಧಿ 2 ವರ್ಷಗಳು ಹಾಗೂ ಮೇಲ್ಪಟ್ಟು ರೂ. 03.00 ಲಕ್ಷಗಳು

2019–20ನೇ ಸಾಲಿನಲ್ಲಿ ಈ ಯೋಜನೆಯನ್ವಯ 43 ನೌಕರರು ಹೆಚ್ಚಿನ ಆರ್ಥಿಕ ಸೌಲಭ್ಯದೊಂದಿಗೆ ಸ್ವಯಂ ನಿವೃತ್ತಿಯನ್ನು ಹೊಂದಿದ್ದು, ಅವರುಗಳಲ್ಲಿ ಅರ್ಹ ಫಲಾನುಭವಿಗಳಿಗೆ ಒಟ್ಟು ರೂ. 2,24,50,000/–ಗಳನ್ನು ಪಾವತಿಸಲಾಗಿರುತ್ತದೆ.

11. ನೌಕರರ ಅಭ್ಯುದಯಕ್ಕಾಗಿ ಕಲ್ಯಾಣ ಮಂಟಪ ನಿರ್ಮಿಸಿರುವುದು:

ಸಂಸ್ಥೆಯ ನೌಕರರ ಮತ್ತು ಅವರ ಮಕ್ಕಳ ಮದುವೆ ಹಾಗೂ ಇತರೇ ಸಮಾರಂಭಗಳನ್ನು ಏರ್ಪಡಿಸಲು ಅನುವಾಗುವಂತೆ ಬೆಂಗಳೂರಿನ ಘಟಕ–13ಕ್ಕೆ ಹೊಂದಿಕೊಂಡಂತೆ ಆಧುನಿಕ ಸೌಕರ್ಯವುಳ್ಳ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ ಮತ್ತು ಅದನ್ನು ರಿಯಾಯಿತಿ ದರದಲ್ಲಿ ಸಂಸ್ಥೆಯ ನೌಕರರಿಗೆ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ 19 ಮಂದಿ ನೌಕರರು/ಅವಲಂಬಿತರು ಈ ಸೌಲಭ್ಯವನ್ನು ಪಡೆದುಕೊಂಡಿರುತ್ತಾರೆ.

12. ಮನೆ ಕಟ್ಟಲು/ಕೊಳ್ಳಲು ಪಡೆಯಲಾದ ಸಾಲಕ್ಕೆ ಶೇ.4 ರಷ್ಟು ಬಡ್ಡಿ ಸಹಾಯಧನ:

ಸಂಸ್ಥೆಯ ನೌಕರರು/ಅಧಿಕಾರಿಗಳು ಮನೆ ಕಟ್ಟಲು/ಕೊಳ್ಳಲು ರಾಷ್ಟ್ರೀಕೃತ ಬ್ಯಾಂಕಿನಿಂದ ಅಥವಾ ಅಧಿಕೃತ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲದ ಗರಿಷ್ಠ ಮಿತಿ ರೂ.5 ಲಕ್ಷಗಳಿಗೆ ಶೇ.4 ರಷ್ಟು ಬಡ್ಡಿ ರಿಯಾಯಿತಿಯನ್ನು ರೂ. 20,000/–ಗಳ ವರೆಗೆ ಪ್ರತಿ ವರ್ಷ ನೀಡಲಾಗುತ್ತಿದೆ. ಈ ಸೌಲಭ್ಯದ ಗರಿಷ್ಠ ಮಿತಿಯನ್ನು ರೂ. 1,00,000/–ಗಳಿಗೆ ಸೀಮಿತಗೊಳಿಸಲಾಗಿದೆ. ವರದಿ ಸಾಲಿನಲ್ಲಿ 184 ನೌಕರರು/ಅಧಿಕಾರಿಗಳಿಗೆ ಒಟ್ಟು ರೂ.27,45,173/–ಗಳನ್ನು ಪಾವತಿಸಲಾಗಿದೆ.

13. ಅಪಘಾತರಹಿತ ಚಾಲಕರಿಗೆ ಪ್ರಶಸ್ತಿ:

ಅಪಘಾತರಹಿತ ಚಾಲಕರಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕ ಹಾಗೂ ಸಂಸ್ಥೆಯ ಬೆಳ್ಳಿಯ ಪದಕಗಳನ್ನು ನೀಡುವ ಯೋಜನೆಯು ಸಂಸ್ಥೆಯಲ್ಲಿ ಜಾರಿಯಲ್ಲಿದೆ. ಈ ಯೋಜನೆಯಡಿ ಚಿನ್ನ ಮತ್ತು ಬೆಳ್ಳಿ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ.5,000/– ಮತ್ತು ರೂ.2,000/– ಗಳ ನಗದು ಬಹುಮಾನ ಹಾಗೂ ಮಾಸಿಕ ಭತ್ಯೆಯನ್ನು ನೀಡಲಾಗುತ್ತದೆ.

14. ಲೈಂಗಿಕ ಕಿರುಕುಳ ತಡೆಗಟ್ಟುವುದು ಮತ್ತು ಕೌಟುಂಬಿಕ ಆಪ್ತ ಸಲಹೆ:

ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದನ್ವಯ ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರಿಗೆ ಆಗುವ ಲೈಂಗಿಕ ಕಿರುಕುಳ ತಡೆಗಟ್ಟಲು ದೂರು ನಿವಾರಣಾ ಸಮಿತಿಯನ್ನು ರಚಿಸಲಾಗಿದ್ದು, ಸಂಸ್ಥೆಯ ಎಲ್ಲಾ ಘಟಕಗಳಲ್ಲಿ ಮತ್ತು ಮೂರು ಕೇಂದ್ರೀಯ ಕಾರ್ಯಗಳಲ್ಲಿ ಹಾಗೂ ನಿಗಮ ಮಟ್ಟದಲ್ಲಿ ಒಂದು ಪ್ರಮುಖ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಸದಸ್ಯೆ ಕಾರ್ಯದರ್ಶಿ/ಹಿರಿಯ ಕೌನ್ಸಲರ್‌ರವರು ಆಗಿಂದಾಗ್ಗೆ ಘಟಕಗಳಿಗೆ ಭೇಟಿ ನೀಡಿ ಮಹಿಳಾ ಸಿಬ್ಬಂದಿಗಳನ್ನು ವಿಚಾರಣೆಗೊಳಪಡಿಸುತ್ತಾರೆ ಮತ್ತು ಸ್ವೀಕರಿಸುವ ದೂರು/ಕುಂದುಕೊರತೆಗಳನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡುತ್ತಾರೆ.

15. ಕ್ರೀಡಾ ಹಾಗೂ ಸಾಂಸ್ಕೃತಿಕ ನಿಧಿ:

2019–20ನೇ ಸಾಲಿನಲ್ಲಿ ರೂ. 37,832/–ಗಳನ್ನು ಕ್ರೀಡಾ ಹಾಗೂ ಸಾಂಸ್ಕೃತಿಕ ನಿಧಿಯಿಂದ ವೆಚ್ಚ ಮಾಡಲಾಗಿದೆ.

16. ಇತರೆ ಸೌಲಭ್ಯಗಳು:

ಅ) ನಿವೃತ್ತ ನೌಕರರು ವರ್ಷಕ್ಕೆ ರೂ.500/– ಪಾವತಿಯೊಂದಿಗೆ ನಾಲ್ಕು ನಿಗಮಗಳ ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ಯಾವುದೇ ಕಿ.ಮೀ ನಿರ್ಬಂಧವಿಲ್ಲದೇ ವರ್ಷಪೂರ್ತಿ ಪ್ರಯಾಣಿಸಲು ಅನುವಾಗುವಂತೆ ಉಚಿತ ಪಾಸ್ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಆ) ನಿಗಮದ ಅಂಧ ಮತ್ತು ಅಂಗವಿಕಲ ನೌಕರರಿಗೆ ವಾಹನ ಭತ್ಯೆಯ ದರವನ್ನು ಸರ್ಕಾರದಲ್ಲಿರುವಂತೆ ಅವರ ಮೂಲ ವೇತನದ ಶೇಕಡ 6ರ ದರದಲ್ಲಿ ಯಾವುದೇ ಗರಿಷ್ಠ ಮಿತಿಯಿಲ್ಲದೆ ನೀಡಲಾಗುತ್ತಿದೆ.

ಇ) ನೌಕರರ ಅವಲಂಬಿತ ಅಂಧ ಅಥವಾ ಚಲನವೈಕಲ್ಯತೆ ಹೊಂದಿರುವ ಮಕ್ಕಳ ಶಿಕ್ಷಣಕ್ಕಾಗಿ ಒಂದು ಮಗುವಿಗೆ ತಲಾ ರೂ.500/– ಗಳಂತೆ ಶಿಕ್ಷಣ ಭತ್ಯೆಯನ್ನು ಮತ್ತು ಅಂಗವಿಕಲತೆ ಹೊಂದಿರುವ ನೌಕರರ ಮಕ್ಕಳ ಪಾಲನೆ/ಪೋಷಣೆ

ಮಾಡುವುದಕ್ಕಾಗಿ ಮಾಸಿಕ ರೂ.500/–ಗಳ ದರದಲ್ಲಿ ಪೋಷಣಾ ಭತ್ಯೆಯನ್ನು ನಿಗಮದ ನೌಕರರಿಗೆ ಮಂಜೂರು ಮಾಡಲಾಗುತ್ತಿದೆ.

ಈ) ಬುದ್ದಿಮಾಂದ್ಯ/ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ನೌಕರರಿಗೆ ಸೇವಾ ಅವಧಿಯಲ್ಲಿ ಒಟ್ಟು 730 ದಿವಸಗಳ "ಶಿಶುಪಾಲನಾ ರಜೆ"ಯನ್ನು ವೇತನ ಸಹಿತವಾಗಿ ಮಂಜೂರು ಮಾಡಲಾಗುತ್ತಿದೆ.

ಉ) ವರದಿ ಸಾಲಿನಲ್ಲಿ, ಸಂಸ್ಥೆಯ ವಿವಿಧ ಘಟಕಗಳು ಮತ್ತು ಕಾರ್ಯಗಾರಗಳಲ್ಲಿ 75 ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಪರಿಚ್ಛೇದ – 9

ವೈದ್ಯಕೀಯ

ಬೆಂ.ಮ.ಸಾ.ಸಂಸ್ಥೆಯ ವೈದ್ಯಕೀಯ ಇಲಾಖೆಯ, ಶಾಂತಿನಗರ ಚಿಕಿತ್ಸಾಲಯವು ಕ.ರಾ.ರ.ಸಾ.ಸಂಸ್ಥೆಯಿಂದ ಬೇರ್ಪಟ್ಟ ನಂತರ, ದಿನಾಂಕ 02.11.2002ರಿಂದ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದು ಮುಖ್ಯ ವೈದ್ಯಾಧಿಕಾರಿಗಳು ಈ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. 2019–20ನೇ ಸಾಲಿನ ಕಾರ್ಯ ಚಟುವಟಿಕೆಗಳ ವಿವರಗಳನ್ನು ಈ ಕೆಳಗೆ ನೀಡಿದೆ.

9.1. ವೈದ್ಯಕೀಯ ಇಲಾಖೆಯು ತನ್ನ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿಕೊಂಡಿದ್ದು, ಇದರನ್ವಯ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಚಿಕಿತ್ಸಾಲಯ ತೆರೆದಿದೆ. ಈ ಚಿಕಿತ್ಸಾಲಯದಲ್ಲಿ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಗಳವರೆಗೆ ಹಾಗೂ ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆಗಳವರೆಗೆ ಇಬ್ಬರು ಗೌರವ ಸಂಭಾವನಾನ್ವಿತ ವೈದ್ಯರುಗಳ ನೆರವಿನಿಂದ ಕಾರ್ಯನಿರ್ವಹಿಸುತ್ತಿರುತ್ತವೆ.

9.2. 2019–20 ನೇ ಸಾಲಿನಲ್ಲಿ ಸರಾಸರಿ ಆಧಾರದನ್ವಯ ಶಾಂತಿನಗರ ಚಿಕಿತ್ಸಾಲಯದಲ್ಲಿ ಸುಮಾರು 1505 ಹಾಗೂ ಕೆಂಬನಿ ಚಿಕಿತ್ಸಾಲಯದಲ್ಲಿ 455 ಉದ್ಯೋಗಿಗಳು ಮತ್ತು ಅವರ ಅವಲಂಬಿತರು ಚಿಕಿತ್ಸೆಯನ್ನು ಪಡೆದಿರುತ್ತಾರೆ.

9.3. ನೌಕರರು ಮತ್ತು ಅವರ ಅವಲಂಬಿತರಿಗೆ ಹೆಚ್ಚಿನ ಚಿಕಿತ್ಸೆ ಅವಶ್ಯಕತೆಯಿದ್ದಲ್ಲಿ ಅವರನ್ನು ಸಂಸ್ಥೆಯು ಹೊಂದಿರುವ ಮತ್ತು ಸದಾಕಾಲವೂ ಕಾರ್ಯ ನಿರ್ವಹಿಸುವ ಆಂಬುಲೆನ್ಸ್ ವಾಹನದಲ್ಲಿ ಅರ್ಹ ತಜ್ಞ ವೈದ್ಯರಲ್ಲಿ ತಪಾಸಣೆಗೆ ಒಳಪಡಲು ಕಳುಹಿಸಿಕೊಡಲಾಗುವುದು.

9.4. ಸಂಸ್ಥೆಯು ತನ್ನ ನೌಕರರಿಗೆ ಹೆಚ್ಚಿನ ವೈದ್ಯಕೀಯ ಸೌಲಭ್ಯವನ್ನು ನೀಡುವ ನಿಟ್ಟಿನಲ್ಲಿ ಕೆಲವು ವಿಶೇಷ ಪರಿಣಿತ ಆಸ್ಪತ್ರೆಗಳೊಂದಿಗೆ ವೈದ್ಯಕೀಯ ಒಡಂಬಡಿಕೆಯನ್ನು ಮಾಡಿಕೊಂಡಿದ್ದು ಅದರನ್ವಯ ಸಂಸ್ಥೆಯ ಉದ್ಯೋಗಿಗಳು ಚಿಕಿತ್ಸೆ ಪಡೆಯುವ ಪ್ರಾರಂಭದಲ್ಲಿ ಯಾವುದೇ ರೀತಿಯ ಮುಂಗಡ ಹಣವನ್ನು ನೀಡದೆ ಚಿಕಿತ್ಸೆ ಪಡೆಯಬಹುದಾಗಿರುತ್ತದೆ. ಚಿಕಿತ್ಸೆ ನಂತರ ಆಸ್ಪತ್ರೆ ವತಿಯಿಂದ ನೀಡಿರುವ ಬಿಲ್ಲುಗಳ ಮೊತ್ತವನ್ನು ವೈದ್ಯಕೀಯ ಇಲಾಖೆಯ ಸಹಮತದ ನಂತರ CGHS ದರದನ್ವಯ ಸಂಸ್ಥೆಯ ವತಿಯಿಂದ ಮರುಪಾವತಿಸಲಾಗುತ್ತದೆ ಹಾಗೂ ಉದ್ಯೋಗಿಗಳ ಅವಲಂಬಿತರು ಸದರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಚಿಕಿತ್ಸಾ ವೆಚ್ಚವನ್ನು ಅವರೇ ಭರಿಸಿ ನಂತರ ಸಂಸ್ಥೆಯಿಂದ ಮರುಪಾವತಿ ಪಡೆಯಬಹುದಾಗಿರುತ್ತದೆ.

9.5. ನೌಕರರು ಮತ್ತು ಅವರ ಅವಲಂಬಿತರಿಗೆ ಸಂಸ್ಥೆಯ ಚಿಕಿತ್ಸಾಲಯಗಳಲ್ಲಿ ಔಷಧಗಳನ್ನೂ ಸಹ ವಿತರಿಸುವ ವ್ಯವಸ್ಥೆಯನ್ನು ಸಂಸ್ಥೆಯು ಹೊಂದಿದ್ದು ಮಧುಮೇಹ ಮತ್ತು ರಕ್ತದೊತ್ತಡದಿಂದ ಬಳಲುವರಿಗೆ ನಿರಂತರವಾಗಿ ಔಷಧಿಯನ್ನು ನೀಡುವ ವ್ಯವಸ್ಥೆ ಇರುತ್ತದೆ. ಈ ಔಷಧಿಗಳು ಚಿಕಿತ್ಸಾಲಯದ ಉಗ್ರಾಣದಲ್ಲಿ ಲಭ್ಯವಿಲ್ಲದೆ ಅವುಗಳನ್ನು ಖರೀದಿಸಿದ್ದಲ್ಲಿ ಸದರಿ ಹಣವನ್ನು ವೈದ್ಯಕೀಯ ಇಲಾಖೆಯ ಸಹಮತದ ನಂತರ ಮರುಪಾವತಿಸುವ ಅವಕಾಶವಿರುತ್ತದೆ. 2019–20ನೇ ಸಾಲಿನಲ್ಲಿ 1380 ಬಿಲ್‌ಗಳಿಗೆ ಸಹಮತ ನೀಡಲಾಗಿದೆ.

9.6. ನೌಕರರು ಮತ್ತು ಅವರ ಅವಲಂಬಿತರು ತುರ್ತು ಸಮಯದಲ್ಲಿ ವೈದ್ಯಕೀಯ ಒಡಂಬಡಿಕೆ ಮಾಡಿಕೊಂಡಿರುವ ಹಾಗೂ ಸರ್ಕಾರಿ ಆಸ್ಪತ್ರೆಗಳನ್ನು ಹೊರತುಪಡಿಸಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಲ್ಲಿ ವೈದ್ಯಕೀಯ ಇಲಾಖೆಯ ಸಹಮತವನ್ನು ಪಡೆದ ನಂತರ ಅವರ ಚಿಕಿತ್ಸಾ ವೆಚ್ಚದ ಮರುಪಾವತಿಯನ್ನು ಸುತ್ತೋಲೆ ಸಂಖ್ಯೆ 1203/ದಿ:01.07.1999ರ ಅನ್ವಯ ಸಂಸ್ಥೆಯು ನೀಡುತ್ತಿದ್ದು 2019–20ನೇ ಸಾಲಿನಲ್ಲಿ 2099 ಪ್ರಕರಣಗಳನ್ನು ವೈದ್ಯಕೀಯ ಇಲಾಖೆಯು ಶಿಫಾರಸ್ಸು ಮಾಡುತ್ತದೆ.

9.7. ಹೃದಯ ಕಾಯಿಲೆ, ಕ್ಯಾನ್ಸರ್, ಮೂತ್ರಪಿಂಡ ಜೋಡಣೆ ಹಾಗೂ ಮೆದುಳು ಮತ್ತು ಸ್ಪೈನಲ್ ಕಾರ್ಡ್‌ಗಳಿಗೆ ಸಂಬಂಧಿಸಿದ ಮಾರಣಾಂತಿಕ ಕಾಯಿಲೆಗಳಿಗೆ ಸಂಸ್ಥೆಯ ನೌಕರರು ಮತ್ತು ಅವರ ಅವಲಂಬಿತರು ಈಡಾದಲ್ಲಿ, ಕಾಯಿಲೆಗಳ ತೀವ್ರತೆ ಮತ್ತು ಭಾರಿ ಚಿಕಿತ್ಸಾ ವೆಚ್ಚವನ್ನು ಮನಗಂಡು ಅವರಿಗೆ ತುರ್ತಾಗಿ ವೈದ್ಯಕೀಯ ಮುಂಗಡವನ್ನು ನೀಡಲು ವೈದ್ಯಕೀಯ ಇಲಾಖೆಯು ಸುತ್ತೋಲೆ ಸಂಖ್ಯೆ 1059/ದಿ:15.04.1998ರ ಪ್ರಕಾರ ಶಿಫಾರಸ್ಸು ಮಾಡುತ್ತದೆ. 2019–20ನೇ ಸಾಲಿನಲ್ಲಿ ವೈದ್ಯಕೀಯ ಇಲಾಖೆಯಿಂದ ಒಟ್ಟು 574 ಪ್ರಕರಣಗಳಲ್ಲಿ ವೈದ್ಯಕೀಯ ಮುಂಗಡವನ್ನು ನೀಡಲು ಶಿಫಾರಸ್ಸು ಮಾಡಲಾಗಿದೆ.

9.8. ಉದ್ಯೋಗಿಯು, ಸಂಸ್ಥೆಯು ವೈದ್ಯಕೀಯ ಒಡಂಬಡಿಕೆ ಮಾಡಿಕೊಂಡಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ನೀಡಿದ ಚಿಕಿತ್ಸಾ ವಿವರ ಮತ್ತು ಬಿಲ್ಲುಗಳನ್ನು ವೈದ್ಯಕೀಯ ಇಲಾಖೆಗೆ ಕೂಲಂಕುಶವಾಗಿ ಪರಿಶೀಲಿಸಲು ಮತ್ತು ಸಹಮತ ಪಡೆಯಲು ಕಳುಹಿಸಿಕೊಡುವ ಪದ್ದತಿ ಇದ್ದು, ಚಿಕಿತ್ಸೆ ನೀಡಿದ ವಿವರ ಮತ್ತು ಬಿಲ್ಲುಗಳನ್ನು ಪರೀಶೀಲಿಸಿ ಪಾವತಿಗಾಗಿ ಅನುಮೋದನೆ ನೀಡಲಾಗುತ್ತದೆ. 2019–20ನೇ ಸಾಲಿನಲ್ಲಿ 96 ಬಿಲ್ಲುಗಳನ್ನು ಪರಿಶೀಲಿಸಿ ಅನುಮೋದನೆ ನೀಡಲಾಗಿದೆ.

9.9. ಬೆ.ಮ.ನ.ಸಾ.ಸಂಸ್ಥೆಯ ಚಿಕಿತ್ಸಾಲಯಗಳಲ್ಲಿ ಔಷಧಗಳನ್ನು ವಿತರಿಸುವ ಬಗ್ಗೆ :

ನೌಕರರು ಮತ್ತು ಅವರ ಅವಲಂಬಿತರಿಗೆ ಸಂಸ್ಥೆಯ ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ನೀಡುವುದಲ್ಲದೆ, ಔಷಧಗಳನ್ನೂ ಸಹ ವಿತರಿಸುವ ವ್ಯವಸ್ಥೆಯನ್ನು ಸಂಸ್ಥೆಯು ಹೊಂದಿದ್ದು 2019–20ನೇ ಸಾಲಿನಲ್ಲಿ ಸಂಸ್ಥೆಯ ಚಿಕಿತ್ಸಾಲಯಗಳಲ್ಲಿ ವಿತರಿಸಿದ ಔಷಧಿಗಳ ಒಟ್ಟಾರೆ ಮೊತ್ತವು ಈ ಕೆಳಕಂಡಂತಿದೆ.

ಕ್ರ.ಸಂ.	ಚಿಕಿತ್ಸಾಲಯ	ವಿತರಿಸಿದ ಔಷಧಗಳ ಒಟ್ಟು ಮೊತ್ತ(ರೂ.ಗಳಲ್ಲಿ)
1	ಶಾಂತಿನಗರ ಚಿಕಿತ್ಸಾಲಯ	21,22,447.27
2	ಕೆಂಪೇಗೌಡ ಬಸ್ ನಿಲ್ದಾಣ ಚಿಕಿತ್ಸಾಲಯ	1,98,014.34
	ಒಟ್ಟಾರೆ ಮೊತ್ತ (ರೂ.ಗಳಲ್ಲಿ)	**23,20,461.61**

ಪರಿಚ್ಛೇದ – 10

ಭದ್ರತಾ ಮತ್ತು ಜಾಗೃತ ಇಲಾಖೆ

ಭದ್ರತಾ ಮತ್ತು ಜಾಗೃತಾ ಇಲಾಖೆಯು ಸಾರ್ವಜನಿಕ ಪ್ರಯಾಣಿಕರಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವ ಧ್ಯೇಯೋದ್ದೇಶದಿಂದ ರಚಿತವಾಗಿರುವ ಸಾರಿಗೆ ಸಂಸ್ಥೆಗೆ ಸಧೃಡವಾದ ಬೆಂಬಲವನ್ನು ಪ್ರತಿದಿನವು ನೀಡುತ್ತಿದ್ದು, ಸಂಸ್ಥೆಯಲ್ಲಿ ಈ ಇಲಾಖೆಯ ಕಾರ್ಯ ವೈಖರಿಯನ್ನು **"ಕಣ್ಣು ಮತ್ತು ಕಿವಿ"** ಇದ್ದಂತೆ ಎಂದು ಬಣ್ಣಿಸಲಾಗಿದೆ.

ಭದ್ರತಾ ಮತ್ತು ಜಾಗೃತಾ ಇಲಾಖೆಯು ತನ್ನ ದೈನಂದಿನ ಕಾರ್ಯಚರಣೆಯ ಜೊತೆಯಲ್ಲಿ ಸಂಸ್ಥೆಯ ಆಸ್ತಿ ಪಾಸ್ತಿಯನ್ನು, ಕಳ್ಳತನ, ಬೆಂಕಿ ಅವಘಡ ಇತ್ಯಾಧಿಗಳಿಂದ ರಕ್ಷಿಸಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುವುದರ ಜೊತೆಯಲ್ಲಿ ಘಟಕ/ಕಾರ್ಯಾಗಾರ/ವಾಹನ ನಿಲ್ದಾಣ ಹಾಗೂ ಕೇಂದ್ರ ಕಛೇರಿಗಳಲ್ಲಿ ನಿರ್ವಹಣೆ ಮಾಡಲಾಗುವ ನಗದು, ಇಂಧನ, ಉಗ್ರಾಣ, ಟಿಕೇಟ್ ಹಾಗೂ ವಿವಿಧ ಮುಖ ಬೆಲೆಯ ಪಾಸುಗಳ ದಾಸ್ತಾನುಗಳನ್ನು ಪರಿಶೀಲನೆಗೆ ಒಳಪಡಿಸಿ, ನ್ಯೂನತೆಗಳಿದ್ದಲ್ಲಿ ವರದಿ ನೀಡಲಾಗುತ್ತಿದೆ.

ಅಲ್ಲದೆ ಸಂಸ್ಥೆಯಲ್ಲಿ ಶಿಸ್ತು ಪಾಲನೆ ಉದ್ದೇಶದಿಂದ ಜಾರಿಗೆ ತರಲಾಗಿರುವ ಆದೇಶಗಳು, ಸುತ್ತೋಲೆಗಳು, ಸಾಮಾನ್ಯ ಸ್ಥಾಯಿ ಆದೇಶಗಳು ಇತ್ಯಾಧಿಗಳನ್ನು ಉಲ್ಲಂಘಿಸಿ, ಅವ್ಯವಹಾರ/ಭ್ರಷ್ಟಾಚಾರ, ವಂಚನೆಯಿಂದ ಸಾರಿಗೆ ಆದಾಯ ಇತ್ಯಾಧಿಗಳ ಸೋರಿಕೆಗಳಿಗೆ ಯತ್ನಿಸುವ ಪ್ರಕರಣಗಳನ್ನು ಪತ್ತೆಹಚ್ಚಿ ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ದ ಅಗತ್ಯ ಶಿಸ್ತಿನ ಕ್ರಮ ಜರುಗಿಸಲು ಶಿಸ್ತುಪಾಲನಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಲಾಗುತ್ತದೆ. ಇದಲ್ಲದೆ, ಸಾರಿಗೆ ಆದಾಯವನ್ನು ಹೆಚ್ಚಿಸುವಲ್ಲಿ ಭದ್ರತಾ ಮತ್ತು ಜಾಗೃತ ಇಲಾಖಾ ವತಿಯಿಂದ ಮಾರ್ಗ ತನಿಖಾ ಸಿಬ್ಬಂದಿಗಳನ್ನು ದಿನನಿತ್ಯ ವಿವಿಧ ಪಾಳಿಗಳಿಗೆ ನಿಯೋಜಿಸಿ ವಾಹನಗಳನ್ನು ತನಿಖೆಗೊಳಪಡಿಸಿ ಸಾರಿಗೆ ಆದಾಯ ಸೋರಿಕೆಯನ್ನು ತಡೆಗಟ್ಟಲಾಗುತ್ತಿದೆ ಮತ್ತು ಸಾರಥಿ ಸಿಬ್ಬಂದಿಗಳನ್ನು ನಿಯೋಜಿಸಿ ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿರುವ ಚಾಲನಾ ಸಿಬ್ಬಂದಿಗಳಲ್ಲಿ ಶಿಸ್ತಿನ ಅರಿವು ಮೂಡಿಸಲಾಗುತ್ತದೆ.

ಅಲ್ಲದೆ, ಸಂಸ್ಥೆಯಲ್ಲಿರುವ ವಿವಿಧ ಕಾರ್ಮಿಕ ಸಂಘಟನೆಗಳು ಆಡಳಿತ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾದ ಪಕ್ಷದಲ್ಲಿ ಮತ್ತು ಇಂತಹ ಸಂಘಟನೆಗಳ ಸದಸ್ಯರುಗಳು ಆಡಳಿತ ವರ್ಗದ ಹಿತಾಸಕ್ತಿಗೆ ವಿರುದ್ದವಾಗಿ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶ ಹೊಂದಿದ್ದಲ್ಲಿ ಅಂತಹ ಗೌಪ್ಯ ಮಾಹಿತಿಗಳನ್ನು ಸಂಗ್ರಹಿಸಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

10.1. ಭದ್ರತಾ ಮತ್ತು ಜಾಗೃತ ಸಿಬ್ಬಂದಿ ವರ್ಗದ ಕಾರ್ಯಾಚರಣೆ:

ಪ್ರಸ್ತುತ 2019–20 ನೇ ಸಾಲಿನಲ್ಲಿ ಭದ್ರತಾ ಮತ್ತು ಜಾಗೃತಾ ಸಿಬ್ಬಂದಿ ವರ್ಗದವರು ಸಂಸ್ಥೆಯಲ್ಲಿ ಘಟಿಸಬಹುದಾದ ಹಣದ ದುರ್ವ್ಯವಹಾರ, ಭ್ರಷ್ಟತೆ, ನಿರ್ವಾಹಕರಿಂದ ಹಣದ ದುರ್ವ್ಯವಹಾರ, ಸಂಸ್ಥೆಯ ಸ್ವತ್ತಿಗಾದ ಹಾನಿ ಮತ್ತು ನಷ್ಟ ಇತ್ಯಾದಿಗಳ ಬಗ್ಗೆ 2977 ವಿವಿಧ ಪ್ರಕರಣಗಳನ್ನು ವರದಿ ಮಾಡಿದ್ದು, ಅವುಗಳ ಮೌಲ್ಯ ರೂ, 10,12,857 ಗಳಾಗಿರುತ್ತದೆ. ಮತ್ತು ಹಿಂದಿನ ವರ್ಷ 2018–19 ರಲ್ಲಿ 2749 ಪ್ರಕರಣಗಳು ವರದಿಯಾಗಿದ್ದು, ಅವುಗಳ ಮೌಲ್ಯ ರೂ, ರೂ, 23,45,616 ಗಳಾಗಿರುತ್ತದೆ. ಪ್ರಸ್ತುತ ಮತ್ತು ಹಿಂದಿನ ವರ್ಷಕ್ಕೆ ಸಂಬಂಧಿಸಿದ ವಿಷಯವಾರು ಅಂಕಿ–ಅಂಶಗಳ ತುಲನಾತ್ಮಕ ವಿವರಣೆಗಳನ್ನು ತಃಖ್ತೆ–1 ರಲ್ಲಿ ನಮೂದಿಸಲಾಗಿದೆ.

ಪಟ್ಟಿ–27

ಪ್ರಕರಣಗಳ ವಿವರ	2019–2020		2018–2019	
	ಪ್ರಕರಣಗಳ ಸಂಖ್ಯೆ	ಸಂಸ್ಥೆಗೆ ಆದ ನಷ್ಟ ರೂ	ಪ್ರಕರಣಗಳ ಸಂಖ್ಯೆ	ಸಂಸ್ಥೆಗೆ ಆದ ನಷ್ಟ ರೂ
ಸಾರಿಗೆ ಕ್ರಮಬಾಹಿರತೆ	22	–	19	3,228
ಬೆಂಕಿ,ಅಪಘಾತ ಮತ್ತು ಮುಷ್ಕರದಿಂದ ಬೆಂ.ಮ.ಸಾ.ಸಂಸ್ಥೆಗೆ ಉಂಟಾದ ಒಟ್ಟು ನಷ್ಟ	ಬೆಂಕಿಯಿಂದ–06	8,69,150	ಬೆಂಕಿಯಿಂದ – 01	1,50,000
	ಅಪಘಾತ	––	ಅಪಘಾತ	–
	ಪ್ರತಿಭಟನೆ/ಮುಷ್ಕರ–01	2,930	ಪ್ರತಿಭಟನೆ/ಮುಷ್ಕರ–05	13,04,616
	ಗುಂಪು	––	ಗುಂಪು	7,89,914

	ಘರ್ಷಣೆ/ಬಂದ್ –02		ಘರ್ಷಣೆ/ಬಂದ್–03	
	ಜಖಂ – 02	7,428	ಜಖಂ – 01	28,183
	11	8,79,508	10	22,72,713
ನಿಗಮದ ಆಸ್ತಿಯ ಕಳವು ಪ್ರಕರಣಗಳು	05	82,246	–	–
ಸಂಸ್ಥೆಯ ಸ್ವತ್ತಿನ ದುರ್ಬಳಕೆ ಪ್ರಕರಣಗಳು	02	48,380	03	–
ಅನುಚಿತ ವರ್ತನೆ/ದುರುಪಯೋಗಗಳು	04	2,723	02	–
ಹಲ್ಲೆ ಪ್ರಕರಣಗಳು	18+5=23	–	42	53,585
ಪಹರೆ ಮತ್ತು ಕಾವಲು ಸಿಬ್ಬಂದಿಯ ಕರ್ತವ್ಯ ಲೋಪ ಪ್ರಕರಣಗಳು	73+2815+10=2898	–	2663	–
ಇತರೆ ಪ್ರಕರಣಗಳು	12	–	10	16,090
ಒಟ್ಟು	**2977**	**10,12,857**	**2749**	**23,45,616**

10.2. ಸಂಸ್ಥೆಯ ಸ್ವತ್ತುಗಳ ಕಳವು:–

2018–19 ಮತ್ತು 2019–20ನೇ ಸಾಲಿನಲ್ಲಿ ಸಂಸ್ಥೆಯಲ್ಲಾದ ಕಳವು ಪ್ರಕರಣಗಳ ತುಲನಾತ್ಮಕ ವಿವರಣೆ ಕೆಳಕಂಡಂತಿದೆ

ಪಟ್ಟಿ– 28

ವರ್ಷ	ಪ್ರಕರಣಗಳ ಸಂಖ್ಯೆ	ಕಳುವಾದ ಸ್ವತ್ತಿನ ಮೌಲ್ಯ (ರೂ.ಗಳಲ್ಲಿ)	ಆಪಾದಿತ ಉದ್ಯೋಗಿಗಳ ಸಂಖ್ಯೆ	ಹೊರಗಿನ ಆಪಾದಿತರ ಸಂಖ್ಯೆ
2018–19	10	2,20,857	–	08
2019–20	05	8,22,456	–	05

10.3 ದೂರುಗಳ ವಿಚಾರಣೆ:

ದೂರುಗಳು:

ಪ್ರಸ್ತುತ 2019–20 ರ ಅವಧಿಯಲ್ಲಿ ಒಟ್ಟು 239 ದೂರುಗಳು, ಸ್ವೀಕೃತವಾಗಿರುತ್ತವೆ. 2018–19 ನೇ ಸಾಲಿನ 130 ಪ್ರಕರಣಗಳು ಬಾಕಿಯಿದ್ದು, ಅವುಗಳನ್ನು ಸೇರಿಸಿದರೆ ಒಟ್ಟು 369 ದೂರುಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ, ಅವುಗಳಲ್ಲಿ 115 ದೂರುಗಳು ಮುಕ್ತಾಯವಾಗಿರುತ್ತವೆ. 88 ದೂರುಗಳ ವಿಚಾರಣಾ ವರದಿಗಳನ್ನು ವಿವಿಧ ಶಿಸ್ತುಪಾಲನಾಧಿಕಾರಿಗಳಿಗೆ ಸಂಬಂಧಪಟ್ಟವರುಗಳ ವಿರುದ್ದ ಶಿಸ್ತು ಕ್ರಮಕ್ಕಾಗಿ ಕಳುಹಿಸಲಾಗಿರುತ್ತದೆ. 166 ದೂರುಗಳು ಉಳಿಕೆಯಲ್ಲಿರುತ್ತವೆ.

2019–20ನೇ ಸಾಲಿನಲ್ಲಿ ಮಾಹಿತಿ ಹಕ್ಕು ಅಧಿನಿಯಮದ ಒಟ್ಟು 33 ಪ್ರಕರಣಗಳು ಸ್ವೀಕೃತವಾಗಿದ್ದು, ಎಲ್ಲಾ 33 ಅರ್ಜಿಗಳಿಗೆ ಮಾಹಿತಿಯನ್ನು ಒದಗಿಸಲಾಗಿರುತ್ತದೆ. ಮಾನವ ಹಕ್ಕು ಆಯೋಗದ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. ಮಹಿಳಾ ಆಯೋಗದ 01 ಪ್ರಕರಣವು ಮುಕ್ತಾಯಗೊಂಡಿರುತ್ತದೆ. ಈ–ಜನಸ್ಪಂದನದ 04 ಪ್ರಕರಣಗಳು ಮುಕ್ತಾಯಗೊಂಡಿರುತ್ತವೆ.

ಮೃತಾವಲಂಬಿ/ಎಂ.ವಿ.ಸಿ./ಶಾಲಾ ವರ್ಗಾವಣೆ ಪತ್ರ/ಅಂಕಪಟ್ಟಿ/ಇತರೆ:

ಪ್ರಸ್ತುತ 2019–20 ರ ಅವಧಿಯಲ್ಲಿ ಮೃತಾವಲಂಭಿತರ 91 ಅರ್ಜಿಗಳು, 13 ಎಂ.ವಿ.ಸಿ ಪ್ರಕರಣಗಳು, 01 ಅಂಕಪಟ್ಟಿ, 07 ಶಾಲಾ ವರ್ಗಾವಣೆ ಪ್ರಮಾಣ ಪತ್ರದ ಪ್ರಕರಣಗಳು, ಇತರೆ 20 ಪ್ರಕರಣಗಳು, ಒಟ್ಟು 132 ಪ್ರಕರಣಗಳು ವಿಚಾರಣೆಗೆ ಸ್ವೀಕೃತವಾಗಿರುತ್ತವೆ. ಹಿಂದಿನ ಸಾಲಿನ ಬಾಕಿ 32 ಪ್ರಕರಣಗಳು ಸೇರಿ ಒಟ್ಟು 164 ಪ್ರಕರಣಗಳನ್ನು ತನಿಖೆಗೊಳಪಡಿಸಿ, ಪರಿಶೀಲನೆಯ ನಂತರ 148 ಪ್ರಕರಣಗಳನ್ನು ವಿವಿಧ ಇಲಾಖೆಯ ಸೂಕ್ತಾಧಿಕಾರಿ/ಶಿಸ್ತುಪಾಲನಾಧಿಕಾರಿಗಳಿಗೆ ಸಂಬಂಧಪಟ್ಟರವರುಗಳ ವಿರುದ್ಧ ಮುಂದಿನ ಕ್ರಮಕ್ಕಾಗಿ ತನಿಖಾ ವರದಿಗಳನ್ನು ಕಳುಹಿಸಲಾಗಿರುತ್ತದೆ. ಕಾರ್ಯಪ್ರಗತಿಯಲ್ಲಿ ಒಟ್ಟು 16 ಪ್ರಕರಣಗಳು ಇರುತ್ತದೆ.

10.4. ಮಾರ್ಗ ತನಿಖಾಪಡೆಯ ಕಾರ್ಯ ವರದಿ:

2019–2020 ನೇ ಸಾಲಿನ ಮಾರ್ಗ ತನಿಖಾ ಪಡೆಯ ಕಾರ್ಯ ಚಟುವಟಿಕೆಗಳನ್ನು ಈ ಕೆಳಗಿನಂತೆ ಕೊಡಲಾಗಿದೆ.

ಪಟ್ಟಿ–29

ಕ್ರ.ಸಂ	ವಿವರಗಳು	2019–20	2018–19
1	ತನಿಖಾಧಿಕಾರಿಗಳ ಸಂಖ್ಯೆ	63	58
2	ತನಿಖಾ ದಿನಗಳು	18049	18,916
3	ತನಿಖಾ ಟ್ರಿಪ್‌ಗಳ ಸಂಖ್ಯೆ	225310	263232
4	ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ	32837	29889
5	ಸೋರಿಕೆ ಹಣದ ಮೊತ್ತ (ರೂ.ಗಳಲ್ಲಿ)	10,41,080	10,33,176
6	ಟಿಕೇಟ್ ರಹಿತ ಪ್ರಯಾಣಿಕರಿಂದ ಸಂಗ್ರಹಿಸಲಾದ ದಂಡದ ಹಣ(ರೂ.ಗಳಲ್ಲಿ) ಪ್ರಕರಣಗಳ ಸಂಖ್ಯೆ– 62,435	1,13,66,730	1,08,38,550
7	ಮಹಿಳಾ ಆಸನಗಳಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ಪುರುಷ ಪ್ರಯಾಣಿಕರಿಂದ ವಸೂಲಾದ ದಂಡದ ಹಣ(ರೂ.ಗಳಲ್ಲಿ) ಪ್ರಕರಣಗಳ ಸಂಖ್ಯೆ–3,308	3,30,800	4,02,500
8	ಒಟ್ಟು ದಂಡ ತೆತ್ತ ಪ್ರಯಾಣಿಕರ ಸಂಖ್ಯೆ (62,435 +3,308)	65,743	71,746
9	ಪ್ರಕರಣ ದಾಖಲಿಸಿದ ಮಾಸಿಕ ಪಾಸುಗಳ ಸಂಖ್ಯೆ	––	––
10	ಪ್ರಕರಣ ದಾಖಲಿಸಿದ ವಿದ್ಯಾರ್ಥಿ ರಿಯಾಯಿತಿ ಪಾಸುಗಳ ಸಂಖ್ಯೆ	02	01
11	ಪ್ರಕರಣ ದಾಖಲಿಸಿದ ಸಂಸ್ಥೆಯ ನೌಕರರ ಮಕ್ಕಳಿಗೆ ನೀಡುವ ಉಚಿತ ಪಾಸ್‌ಗಳ ಸಂಖ್ಯೆ	––	––
12	ಪ್ರಕರಣ ದಾಖಲಿಸಿದ ಸಂಸ್ಥೆಯ ನೌಕರರಿಗೆ ನೀಡುವ ಉಚಿತ ಪಾಸ್‌ಗಳ ಸಂಖ್ಯೆ	01	––
13	ಪ್ರಕರಣ ದಾಖಲಿಸಿದ ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುವ ಉಚಿತ ಪಾಸ್‌ಗಳ ಸಂಖ್ಯೆ	––	––
14	ಪ್ರಕರಣ ದಾಖಲಿಸಿದ ಅಂಗವಿಕಲರಿಗೆ ನೀಡುವ ಉಚಿತ ಪಾಸ್‌ಗಳ ಸಂಖ್ಯೆ	––	––

10.5. ಸಾರಥಿ ಗಸ್ತು ಪಡೆಯ ಕಾರ್ಯವರದಿ:

ಸಂಸ್ಥೆಯ ಚಾಲನಾ ಸಿಬ್ಬಂದಿಯಲ್ಲಿ ಶಿಸ್ತು ಮೂಡಿಸುವ ಸಂಬಂಧ ಸಾರಥಿ ಗಸ್ತು ಪಡೆಯು, ಮಾರ್ಗದ ಮೇಲೆ ಸಂಚಾರ ನಿಯಮಗಳ ಉಲ್ಲಂಘನೆ, ನಿಗದಿತ ಸ್ಥಳದಲ್ಲಿ ಬಸ್ಸನ್ನು ನಿಲುಗಡೆ ಮಾಡದಂತಹ, ಮಹಿಳೆಯರಿಗೆ ಮೀಸಲಾದ ಆಸನಗಳಲ್ಲಿ ಪುರುಷ ಪ್ರಯಾಣಿಕರು ಕುಳಿತಿರುವಂತಹ, ಚಾಲನಾ ಸಿಬ್ಬಂದಿ ಕರ್ತವ್ಯದ ಮೇಲೆ ದೂಮಪಾನ, ಮದ್ಯಪಾನ ಮಾಡಿರುವಂತಹ, ವಾಹನ ಚಾಲನೆಯಲ್ಲಿದ್ದಾಗ ಮೊಬೈಲ್ ಬಳಸುವಂತಹ ಪ್ರಕರಣಗಳನ್ನು ದಾಖಲಿಸುತ್ತಿದೆ. 2019–20ರ ಸಾಲಿನಲ್ಲಿ ಇಂತಹ ಒಟ್ಟು 71332

ಪ್ರಕರಣಗಳನ್ನು ದಾಖಲಿಸಿ ಮುಂದಿನ ಕ್ರಮ ಜರುಗಿಸಲು ಸಂಬಂದಪಟ್ಟ ಶಿಸ್ತುಪಾಲನಾಧಿಕಾರಿಗಳಿಗೆ ಕಳುಹಿಸಲಾಗಿದೆ. 2018–19ರ ಸಾಲಿನಲ್ಲಿ ಇಂತಹ ಒಟ್ಟು 48140 ಪ್ರಕರಣಗಳನ್ನು ದಾಖಲಿಸಲಾಗಿತ್ತು.

10.6. ಶಿಸ್ತು ಪ್ರಕರಣ:

2019–20 ನೇ ಸಾಲಿನಲ್ಲಿ ಭದ್ರತಾ ಮತ್ತು ಜಾಗೃತಾ ಸಿಬ್ಬಂದಿ ಹಾಗೂ ತನಿಖಾ ದಳ ಸಿಬ್ಬಂದಿ ವರ್ಗದವರು ಕೇಂದ್ರ ಕಛೇರಿಯ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಿದ ಪ್ರಕರಣಗಳ ಇತ್ಯರ್ಥದ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ವಿವರಗಳು	2019–20	2018–19
1	ಸೇವೆಯಿಂದ ವಜಾ ಮಾಡಿದ್ದು / ತೆಗೆದು ಹಾಕಿದ್ದು	16	16
2	ವೇತನ ಕಡಿಮೆ ಮಾಡಿದ್ದು	361	714
3	ವಾರ್ಷಿಕ ವೇತನ ಬಡ್ತಿಯ ಮುಂದೂಡಿಕೆ	300	529
4	ವಾಗ್ದಂಡನೆ / ಎಚ್ಚರಿಕೆ	472	681
5	ವೇತನದಲ್ಲಿ ಕಡಿತ	2063	3657
6	ತರಬೇತಿ ಅವಧಿ ಮುಂದೂಡಿಕೆ	07	28
7	ಇತರೆ	240	–
	ಒಟ್ಟು	**3459**	**5625**

10.7. ಪುರಸ್ಕಾರಗಳು:

ಪ್ರಸ್ತುತ 2019–20ನೇ ಸಾಲಿನಲ್ಲಿ ವಿದ್ಯಾರ್ಥಿಯಲ್ಲದವರು ವಿದ್ಯಾರ್ಥಿ ರಿಯಾಯಿತಿ ಪಾಸ್ ಹೊಂದಿ ಪ್ರಯಾಣಿಸುತ್ತಿದ್ದದನ್ನು ಪತ್ತೆ ಹಚ್ಚಿದ ಪ್ರಕರಣದಲ್ಲಿ ಓರ್ವ ಚಾಲನಾ ಸಿಬ್ಬಂದಿಗೆ ಮತ್ತು ಮೂವರು ಭದ್ರತಾ ಸಿಬ್ಬಂದಿಗೆ ತಲಾ ರೂ 500/– ಬಹುಮಾನ ನೀಡಿ ಪ್ರೋತ್ಸಾಹಿಸಲಾಗಿದೆ.

*****

ಪರಿಚ್ಛೇದ – 11

ಮಾನವ ಸಂಪನ್ಮೂಲ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ದಿನಾಂಕ: 01–12–2004 ರಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ ಬೆಂ.ಮ.ಸಾ.ಸಂಸ್ಥೆಯ ಕೇಂದ್ರ ಕಛೇರಿಯ ತರಬೇತಿ ಕೇಂದ್ರ ಹಾಗೂ ವಡ್ಡರಹಳ್ಳಿಯಲ್ಲಿರುವ ಅತ್ಯಾಧುನಿಕ ಚಾಲಕರ ತರಬೇತಿ ಕೇಂದ್ರದಲ್ಲಿ ವಿವಿಧ ತರಬೇತಿಗಳನ್ನು ನೀಡಲಾಗುತ್ತಿದೆ.

11.1 ಇಲಾಖೆಯ ಧ್ಯೇಯ:

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ಕಾಲ ಕಾಲಕ್ಕೆ ಬದಲಾಗುತ್ತಿರುವ ಪರಿಸ್ಥಿತಿ ಮತ್ತು ತಂತ್ರಜ್ಞಾನಕ್ಕೆ ತಕ್ಕಂತೆ ಸಂಸ್ಥೆಯ ಮಾನವ ಸಂಪನ್ಮೂಲದ ಕೌಶಲ್ಯ, ಜ್ಞಾನ ಮತ್ತು ವ್ಯಕ್ತಿತ್ವವನ್ನು ವಿಕಸನಗೊಳಿಸಿ ಬದಲಾದ ಪರಿಸ್ಥಿತಿಗಳನ್ನು ಸಮರ್ಪಕವಾಗಿ ನಿಭಾಯಿಸಲು ಅನುಕೂಲವಾಗುವಂತೆ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ವರ್ಗದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಇದಕ್ಕಾಗಿಯೇ ಸಂಸ್ಥೆಯು ಬೆಂಗಳೂರು ಉತ್ತರ ಭಾಗದಲ್ಲಿರುವ ವಡ್ಡರಹಳ್ಳಿ ಎಂಬಲ್ಲಿ 22 ಎಕರೆ ವಿಸ್ತಾರ ಪ್ರದೇಶದಲ್ಲಿ ತರಬೇತಿ ಕೇಂದ್ರವನ್ನು ಹೊಂದಿರುತ್ತದೆ. ಇಲ್ಲಿ ಸಂಸ್ಥೆಯ ಚಾಲನಾ ಸಿಬ್ಬಂದಿಗಳು ಹಾಗೂ ಇನ್ನಿತರೆ ಸಿಬ್ಬಂದಿಗಳಿಗೆ ನಿರಂತರವಾಗಿ ತರಬೇತಿ ನೀಡಲಾಗುತ್ತಿದೆ.

11.2 ಸಂಸ್ಥೆಯ ಸಿಬ್ಬಂದಿಗಳಿಗೆ ಪುನಶ್ಚೇತನಾ/ ಪ್ರಾಥಮಿಕ ತರಬೇತಿ:

ಸಂಸ್ಥೆಯ ಸಿಬ್ಬಂದಿಗಳಿಗೆ ಪುನಶ್ಚೇತನಾ/ ಪ್ರಾಥಮಿಕ ತರಬೇತಿಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ತರಬೇತಿ ಕೇಂದ್ರದಲ್ಲಿ ನಡೆಸಲಾಗುತ್ತಿದ್ದು, 2019–20ನೇ ಸಾಲಿನಲ್ಲಿ ಒಟ್ಟು 21844 ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿರುತ್ತದೆ.

11.3 ಚಾಲನಾ ಸಿಬ್ಬಂದಿಗಳಿಗೆ ತರಬೇತಿ:

ಚಾಲಕರಿಗೆ ಪುನಶ್ಚೇತನ ತರಬೇತಿಯನ್ನು ನೀಡಲಾಗುತ್ತಿದ್ದು, ಸದರಿ ತರಬೇತಿಯಲ್ಲಿ ಇಂಧನ ಉಳಿತಾಯ ಮತ್ತು ಉತ್ತಮ ಚಾಲನಾ ಹವ್ಯಾಸ, ಅಪಘಾತ ರಹಿತ ಚಾಲನೆ ಕುರಿತು ಅರಿವು ಮೂಡಿಸುವುದು, ಸಂಚಾರ ನಿಯಮಗಳು, ವ್ಯಕ್ತಿತ್ವ ವಿಕಸನ ಹಾಗೂ ಪರಿಣಾಮಕಾರಿ ಸಂಪರ್ಕ ಕೌಶಲ್ಯ, ಲಿಂಗ ಸಂವೇದನಾ ತರಬೇತಿ, ಗೈರುಹಾಜರಿ ಪರಿಣಾಮಗಳು, ಬಸ್ ಆದ್ಯತಾ ಪಥ (Bus Priority Lane) ಬಗ್ಗೆ ಅರಿವು, ಸದರಿ ಪಥದಲ್ಲಿ ವಾಹನ ಚಲಾಯಿಸುವಾಗ ಅನುಸರಿಸ ಬೇಕಾದ ಕ್ರಮಗಳು, ಚತುರ ಸಾರಿಗೆ ವ್ಯವಸ್ಥೆ (ITS) ಬಗ್ಗೆ ಮಾಹಿತಿ, ವಾಹನಗಳ ಬಗ್ಗೆ ಹಾಗೂ ವಾಹನಗಳ ದೋಷಗಳ ಬಗ್ಗೆ ಪ್ರಾಥಮಿಕ ತಿಳುವಳಿಕೆ, ಜೊತೆಗೆ ಸಂಚಾರಿ ನಿಯಮಗಳ ಮಾಹಿತಿ, ಅವುಗಳ ಪಾಲನೆ, ಅದರ ಉಲ್ಲಂಘನೆಯಿಂದಾಗಿ ಆಗುವ ಅವ್ಯವಸ್ಥೆ ಮತ್ತು ತೊಂದರೆ ಬಗ್ಗೆ ತಿಳಿಸಲಾಗುತ್ತಿದೆ. ಪೋಲೀಸ್ ಇಲಾಖೆ ವತಿಯಿಂದ ಸಂಚಾರಿ ದೀಪಗಳು ಇರುವಲ್ಲಿ ಅಳವಡಿಸಿದ ಕ್ಯಾಮೆರಾಗಳ ಕಾರ್ಯಾಚರಣೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಕರ್ತವ್ಯದ ಮೇಲಿದ್ದಾಗ ಅಪಘಾತಗಳಲ್ಲಿ ಭಾಗಿಯಾದ ಚಾಲಕರಿಗೆ ಪ್ರತ್ಯೇಕವಾಗಿ ಸುರಕ್ಷಿತ ಚಾಲನಾ ತರಬೇತಿಯನ್ನು ನೀಡಲಾಗುತ್ತಿದೆ. 2019–20ನೇ ಸಾಲಿನಲ್ಲಿ ಸಂಸ್ಥೆಯ 15370 ಚಾಲಕರಿಗೆ ವಿವಿಧ ವಿಷಯಗಳಲ್ಲಿ ತರಬೇತಿ ನೀಡಲಾಗಿದೆ.

ಸಂಸ್ಥೆಗೆ ಹೊಸದಾಗಿ ಚಾಲಕರಾಗಿ ನೇಮಕಗೊಳ್ಳುವ ಎಲ್ಲರನ್ನೂ ಕಡ್ಡಾಯವಾಗಿ ಸಂಸ್ಥೆಯ ತರಬೇತಿ ಕೇಂದ್ರದಲ್ಲಿ ಪ್ರಾರಂಭಿಕ ತರಬೇತಿಗೆ ಒಳಪಡಿಸಿ, ಅವರ ಚಾಲನಾ ಕ್ಷಮತೆ ಖಾತ್ರಿಪಡಿಸಿಕೊಂಡ ನಂತರ ಕರ್ತವ್ಯ ನಿರ್ವಹಿಸಲು ಘಟಕಗಳಿಗೆ ನಿಯೋಜಿಸಲಾಗುತ್ತಿದ್ದು, 2019–20ನೇ ಸಾಲಿನಲ್ಲಿ 49 ಚಾಲಕರಿಗೆ ಪ್ರಾರಂಭಿಕ ಹಾಗೂ ಪರಿಚಯ ತರಬೇತಿ ನೀಡಲಾಗಿರುತ್ತದೆ. ಹೊಸದಾಗಿ ಆಯ್ಕೆಯಾಗುವ ಇತರೆ ಸಿಬ್ಬಂದಿಗೆ ಅವರ ವೃತ್ತಿಗನುಗುಣವಾಗಿ ಕನಿಷ್ಠ ಒಂದು ವಾರದಿಂದ ಗರಿಷ್ಠ ಒಂದು ತಿಂಗಳವರೆಗೆ ಪ್ರಾಥಮಿಕ ತರಬೇತಿಯನ್ನು ನೀಡಲಾಗುತ್ತಿದೆ.

11.4 ನಿರ್ವಾಹಕರಿಗೆ ಪುನಶ್ಚೇತನ ತರಬೇತಿ:

ನಿರ್ವಾಹಕ ಮತ್ತು ಚಾಲಕ ಕಂ ನಿರ್ವಾಹಕ ಸಿಬ್ಬಂದಿಗಳಿಗೆ ಸಾರ್ವಜನಿಕ ಪ್ರಯಾಣಿಕರೊಂದಿಗೆ ತಾಳ್ಮೆಯಿಂದ ವರ್ತಿಸುವ ಬಗ್ಗೆ, ಒತ್ತಡ ನಿರ್ವಹಣೆ, ಯೋಗ, ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಿಕೆ, ಸಾರಿಗೆ ಆದಾಯ ಉತ್ತಮಗೊಳಿಸುವಿಕೆ, ವ್ಯಕ್ತಿತ್ವ ವಿಕಸನ ಹಾಗೂ ಪರಿಣಾಮಕಾರಿ ಸಂಪರ್ಕ ಕೌಶಲ್ಯ, ಲಿಂಗ ಸಂವೇದನಾ ತರಬೇತಿ, ಚತುರ ಸಾರಿಗೆ ವ್ಯವಸ್ಥೆ (ITS), ಬಸ್ ಆದ್ಯತಾ ಪಥ (Bus Priority Lane) ಬಗ್ಗೆ ಅರಿವು, ಗೈರುಹಾಜರಿ ಪರಿಣಾಮಗಳು, ಇವೇ ಮೊದಲಾದ ವಿಷಯಗಳ ಬಗ್ಗೆ

ತರಬೇತಿ ನೀಡಲಾಗುತ್ತಿದೆ. 2019–20ನೇ ಸಾಲಿನಲ್ಲಿ ಸಂಸ್ಥೆಯ ಒಟ್ಟು 5485 ನಿರ್ವಾಹಕರುಗಳಿಗೆ ತರಬೇತಿಯನ್ನು ಹಾಗೂ ಹೊಸದಾಗಿ ನೇಮಕಗೊಂಡ 62 ನಿರ್ವಾಹಕರುಗಳಿಗೆ ಪ್ರಾರಂಭಿಕ ಹಾಗೂ ಪರಿಚಯ ತರಬೇತಿ ನೀಡಲಾಗಿರುತ್ತದೆ.

ಸಾರ್ವಜನಿಕ ದೂರುಗಳ ಕುರಿತು ಸಿಬ್ಬಂದಿಗೆ ಅರಿವು ಮೂಡಿಸುವ ಹಾಗೂ ಸದರಿ ದೂರುಗಳು ಪುನರಾವರ್ತನೆಯಾಗದಂತೆ ತಡೆಯಲು ಸಾರ್ವಜನಿಕರ ದೂರಿಗೆ ಕಾರಣರಾದ ನಿರ್ವಾಹಕ/ಚಾಲಕ–ಕಂ–ನಿರ್ವಾಹಕರಿಗೆ ವಿಶೇಷ ತರಬೇತಿ ನೀಡಲಾಗಿದೆ.

11.5 ತಾಂತ್ರಿಕ ಸಿಬ್ಬಂದಿಗೆ ಪುನಶ್ಚೇತನ ತರಬೇತಿ:

ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಗಳಿಗೆ ವಾಹನಗಳ ಮುನ್ನೆಚ್ಚರಿಕಾ ನಿರ್ವಾಹಣಾ ಕ್ರಮಗಳು, ವಾಹನಗಳಿಗೆ ಪ್ರತಿ ದಿನ ನಿರ್ವಹಿಸಬೇಕಾದ ನಿರ್ವಹಣಾ ಕ್ರಮ, ವಾಹನಗಳಿಗೆ ನಿಯತಕಾಲಿಕವಾಗಿ ನಿರ್ವಹಿಸಬೇಕಾದ ನಿರ್ವಹಣಾ ಕ್ರಮ, ಕೀಲೆಣ್ಣೆ/ ಆಯಿಲ್ (ಲೂಬ್ರಿಕೆಂಟ್), ಕೂಲೆಂಟ್‌ಗಳ ನಿರ್ವಹಣೆ ಹಾಗೂ ಬದಲಾವಣೆ, ಟೈರ್‌ಗಳ ನಿರ್ವಹಣೆ, ಬ್ಯಾಟರಿಗಳ ನಿರ್ವಹಣೆ, ಟಬ್ರೋಚಾರ್ಜ್‌ರ್ ದುರಸ್ತಿ ಮತ್ತು ನಿರ್ವಹಣೆ, ಏರ್ ಸಸ್ಪೆನ್‌ಷನ್ ದುರಸ್ತಿ ಮತ್ತು ನಿರ್ವಹಣೆ, ಬ್ರೇಕ್ ದುರಸ್ತಿ ಮತ್ತು ನಿರ್ವಹಣೆ, ವೃತ್ತಿ ಕೌಶಲ್ಯ ವೃದ್ಧಿ, ಕಾಲಕಾಲಕ್ಕೆ ವಾಹನಗಳಲ್ಲಿ ಬದಲಾಗುತ್ತಿರುವ ನೂತನ ತಂತ್ರಜ್ಞಾನಗಳ ಬಗ್ಗೆ ಪುನಶ್ಚೇತನ ತರಬೇತಿ, ಗೈರುಹಾಜರಿ ಪರಿಣಾಮಗಳು, ಒತ್ತಡ ನಿರ್ವಹಣೆ, ಯೋಗ, ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಿಕೆ ಮುಂತಾದ ವಿಷಯಗಳ ಬಗ್ಗೆ ತರಬೇತಿ ಆಯೋಜಿಸಲಾಗುತ್ತಿದ್ದು, 2019–20ನೇ ಸಾಲಿನಲ್ಲಿ 357 ತಾಂತ್ರಿಕ ಸಿಬ್ಬಂದಿಗೆ ತರಬೇತಿಯನ್ನು ನೀಡಲಾಗಿದೆ. ಹೊಸದಾಗಿ ನೇಮಕಗೊಂಡ 64 ತಾಂತ್ರಿಕ ಸಿಬ್ಬಂದಿಗಳಿಗೆ ಪ್ರಾರಂಭಿಕ ಹಾಗೂ ಪರಿಚಯ ತರಬೇತಿ ನೀಡಲಾಗಿರುತ್ತದೆ.

11.6 ಇತರೆ ಸಿಬ್ಬಂದಿಗೆ ಪುನಶ್ಚೇತನ ತರಬೇತಿ:

ಕಿರಿಯ ಸಹಾಯಕರು, ಸಹಾಯಕರು, ಸಹಾಯಕ ಲೆಕ್ಕಿಗ, ಸಹಾಯಕ ಉಗ್ರಾಣ ರಕ್ಷಕ, ಅಂಕಿಅಂಶ ಸಹಾಯಕ, ಭದ್ರತಾ ಸಿಬ್ಬಂದಿಗಳಿಗೆ ಪುನಶ್ಚೇತನಾ ತರಬೇತಿ, ಅವರ ಹುದ್ದೆಯ ಕೆಲಸಗಳ ನಿರ್ವಹಣೆ ಕುರಿತು ಅಗತ್ಯಕ್ಕೆ ತಕ್ಕಂತೆ ಅವಶ್ಯವಿರುವ ತರಬೇತಿಗಳು, ಒತ್ತಡ ನಿರ್ವಹಣೆ, ಆರೋಗ್ಯ, ಯೋಗ ಹಾಗೂ ಇತರೆ ಅಗತ್ಯ ವಿಷಯಗಳ ಕುರಿತು ತರಬೇತಿಗಳನ್ನು ನೀಡಲಾಗುತ್ತಿದ್ದು, 2019–20ನೇ ಸಾಲಿನಲ್ಲಿ 315 ಸಿಬ್ಬಂದಿಗೆ ತರಬೇತಿಯನ್ನು ನೀಡಲಾಗಿದೆ.

11.7 ಮೇಲ್ವಿಚಾರಕ ಸಿಬ್ಬಂದಿಗೆ ಪುನಶ್ಚೇತನ ತರಬೇತಿ:

ಸಿಬ್ಬಂದಿ ಮೇಲ್ವಿಚಾರಕರು, ತಾಂತ್ರಿಕ ಮೇಲ್ವಿಚಾರಕರು, ಸಂಚಾರ ಮೇಲ್ವಿಚಾರಕರು, ಲೆಕ್ಕಪತ್ರ ಮೇಲ್ವಿಚಾರಕರು, ಭದ್ರತಾ ಮೇಲ್ವಿಚಾರಕರುಗಳಿಗೆ ಉತ್ತಮ/ಪರಿಣಾಮಕಾರಿ ಕಾರ್ಯನಿರ್ವಹಣೆ, ಕೌಶಲ್ಯ ತರಬೇತಿ, ಪುನಶ್ಚೇತನಾ ತರಬೇತಿ, ಒತ್ತಡ ನಿರ್ವಹಣೆ ಹಾಗೂ ಇತರೆ ಅಗತ್ಯ ವಿಷಯಗಳ ಕುರಿತು ತರಬೇತಿಗಳನ್ನು ನೀಡಲಾಗುತ್ತಿದ್ದು, 2019–20ನೇ ಸಾಲಿನಲ್ಲಿ 48 ಮೇಲ್ವಿಚಾರಕರುಗಳಿಗೆ ತರಬೇತಿಯನ್ನು ನೀಡಲಾಗಿದೆ.

11.8 ಸಂಸ್ಥೆಯ ಅಧಿಕಾರಿ/ಸಿಬ್ಬಂದಿಗೆ ಪ್ರತಿಷ್ಠಿತ ಸಂಸ್ಥೆಗಳಲ್ಲಿ ತರಬೇತಿ:

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ತರಬೇತಿ ಸಂಸ್ಥೆಗಳು, ಸಿ.ಐ.ಆರ್.ಟಿ, ಡಿ.ಪಿ.ಇ., ಫಿಸ್ಕಲ್ ಪಾಲಿಸಿ ಇನ್ಸ್‌ಟ್ಯೂಟ್ ಮತ್ತು ಇತರೆ ಪ್ರತಿಷ್ಠಿತ ಸಂಸ್ಥೆಗಳು ಆಯೋಜಿಸುವ ವಿಚಾರ ಸಂಕಿರಣ, ಸಮ್ಮೇಳನ, ಕಾರ್ಯಾಗಾರ, ಹಾಗೂ ತರಬೇತಿಗಳಿಗೆ ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದ್ದು, ಜೊತೆಗೆ ಸಂಸ್ಥೆಯಲ್ಲಿಯೂ ಸಹ ಅಧಿಕಾರಿಗಳಿಗೆ ತರಬೇತಿಯನ್ನು ಆಯೋಜಿಸಲಾಗುತ್ತಿದೆ. 2019–20ನೇ ಸಾಲಿನಲ್ಲಿ 84 ಅಧಿಕಾರಿಗಳು ತರಬೇತಿಯನ್ನು ಹೊಂದಿರುತ್ತಾರೆ.

11.9 ವಿಶೇಷ ತರಬೇತಿ ಕಾರ್ಯಕ್ರಮಗಳು:

ಮೇಲೆ ತಿಳಿಸಲಾದ ತರಬೇತಿ ಕಾರ್ಯಕ್ರಮಗಳ ಜೊತೆಗೆ ಸಂಸ್ಥೆಯ ಸಿಬ್ಬಂದಿಗಳಿಗೆ ಈ ಕೆಳಕಂಡ ವಿಶೇಷ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ಸಂಸ್ಥೆಯ ಸಿಬ್ಬಂದಿಗಳಿಗೆ "ನಿರ್ಭಯಾ" ಯೋಜನೆ ಅಡಿಯಲ್ಲಿ ಲಿಂಗ ಸಂವೇದನಾ ತರಬೇತಿ:

ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುವ ಸುಮಾರು 27000 ಚಾಲನಾ ಸಿಬ್ಬಂದಿಗಳಿಗೆ ನಿರ್ಭಯಾ ಯೋಜನೆ ಅಡಿಯಲ್ಲಿ ಅವರು ಸಾರ್ವಜನಿಕ ಪ್ರಯಾಣಿಕರೊಂದಿಗೆ ಅದರಲ್ಲೂ ವಿಶೇಷವಾಗಿ ಮಹಿಳೆ ಮತ್ತು ಮಕ್ಕಳೊಂದಿಗೆ ಉತ್ತಮ ನಡವಳಿಕೆಗಳನ್ನು ರೂಢಿಸಿಕೊಳ್ಳಲು ಅನುವಾಗುವಂತೆ ಲಿಂಗ ಸಂವೇದನಾ ಮತ್ತು ಮಹಿಳೆಯರ ಸುರಕ್ಷತೆ ಬಗ್ಗೆ ತರಬೇತಿ ನೀಡುವುದರೊಂದಿಗೆ ನೌಕರರ ನಡವಳಿಕೆಯಲ್ಲಿ ಉತ್ತಮ ಬದಲಾವಣೆ ತರಲು ಯೋಜಿಸಲಾಗಿದೆ.

11.10 ಗೈರುಹಾಜರಾಗುವ ಸಿಬ್ಬಂದಿಗಳಿಗೆ ಅರಿವು ಕಾರ್ಯಕ್ರಮ:

ಗೈರುಹಾಜರಿ ಪರಿಣಾಮಗಳು, ಗೈರುಹಾಜರಿಯಿಂದ ಸಿಬ್ಬಂದಿಗಳಿಗಾಗುವ ಆರ್ಥಿಕ ನಷ್ಟಗಳು, ಶಿಕ್ಷಾದೇಶಗಳು. ವಿಚಾರಣಾ ನಡಾವಳಿಗಳು, ಸಂಸ್ಥೆ ಹಾಗೂ ಪ್ರಯಾಣಿಕರ ಮೇಲಾಗುವ ಪರಿಣಾಮಗಳು, ಮುಂತಾದವುಗಳ ಬಗ್ಗೆ ಸಿಬ್ಬಂದಿಗಳಿಗೆ ತರಬೇತಿಯಲ್ಲಿ ಅರಿವು ಮೂಡಿಸಲಾಗುತ್ತಿದೆ. 2019–20ನೇ ಸಾಲಿನಲ್ಲಿ 152 ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ.

11.11 ಅಪಘಾತ ರಹಿತ ಸುರಕ್ಷಿತ ಚಾಲನೆ ತರಬೇತಿ:

ಚಾಲಕರುಗಳು ಪದೇ ಪದೇ ಮಾರಣಾಂತಿಕ ಅಪಘಾತಗಳನ್ನು ಮಾಡಿದಲ್ಲಿ ಅಂತಹ ಚಾಲಕರುಗಳನ್ನು ಗುರುತಿಸಿ ಅಪಘಾತ ರಹಿತ ಮತ್ತು ಸುರಕ್ಷಿತ ಚಾಲನಾ ತರಬೇತಿಯನ್ನು ನೀಡಲಾಗುತ್ತಿದ್ದು, ಈ ತರಬೇತಿಯಲ್ಲಿ ಉತ್ತಮ ಚಾಲನೆ, ಸಂಚಾರಿ ನಿಯಮಗಳ ಪಾಲನೆ, ವಾಹನಗಳ ದೋಷಗಳ ಬಗ್ಗೆ ಪ್ರಾಥಮಿಕ ತಿಳುವಳಿಕೆ, ಒತ್ತಡ ನಿರ್ವಹಣೆ, ಯೋಗ, ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಿಕೆ ಬಗ್ಗೆ ತರಬೇತಿ ನೀಡಲಾಗುತ್ತಿದೆ. 2019–20ನೇ ಸಾಲಿನಲ್ಲಿ 304 ಚಾಲಕರುಗಳಿಗೆ ತರಬೇತಿ ನೀಡಲಾಗಿದೆ.

11.12 ಬಾಹ್ಯ ಅಭ್ಯರ್ಥಿಗಳಿಗೆ ವಾಹನ ಚಾಲನಾ ತರಬೇತಿ.

ಸಂಸ್ಥೆಯ ತರಬೇತಿ ಕೇಂದ್ರವು ವಾಹನ ಚಾಲನಾ ತರಬೇತಿ ಶಾಲೆಯ ಪರವಾನಗಿಯನ್ನು ಹೊಂದಿದ್ದು, ಆಸಕ್ತ ಬಾಹ್ಯ ಅಭ್ಯರ್ಥಿಗಳಿಗೆ 30 ದಿನಗಳ ಭಾರಿ/ಲಘು ವಾಹನ ಚಾಲನಾ ತರಬೇತಿಯನ್ನು ನೀಡುವ ವ್ಯವಸ್ಥೆ ಮಾಡಲಾಗಿದೆ. 2019–20ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ, ಎಸ್.ಸಿ.ಎಸ್.ಪಿ., ಟಿ.ಎಸ್.ಪಿ., ನಿರ್ಭಯಾ ಯೋಜನೆಗಳ ಅಡಿಯಲ್ಲಿ ಒಟ್ಟು 812 ಭಾಹ್ಯ ಅಭ್ಯರ್ಥಿಗಳಿಗೆ ಭಾರಿ ವಾಹನ ಚಾಲನಾ ತರಬೇತಿ ಹಾಗೂ 1874 ಭಾಹ್ಯ ಅಭ್ಯರ್ಥಿಗಳಿಗೆ ಲಘು ವಾಹನ ಚಾಲನಾ ತರಬೇತಿ ನೀಡಿ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ವಾಹನ ಚಾಲನಾ ಅನುಜ್ಞಾ ಪತ್ರ ಕೊಡಿಸಲಾಗಿರುತ್ತದೆ.

11.13 ಉನ್ನತ ವ್ಯಾಸಂಗ ಮಾಡುವ ವಿಧ್ಯಾರ್ಥಿಗಳಿಗೆ ಸಂಸ್ಥೆಯಲ್ಲಿ ಪ್ರಾಜೆಕ್ಟ್ ಮಾಡಲು ಅವಕಾಶ:

ಸಂಸ್ಥೆಯು ವಿವಿಧ ಕಾಲೇಜುಗಳಲ್ಲಿ ಪದವಿ ಹಾಗೂ ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ನಮ್ಮ ಸಂಸ್ಥೆಯ ಕಾರ್ಯನಿರ್ವಹಣೆ ಬಗ್ಗೆ ಅಧ್ಯಯನ ಮಾಡಲು ಅವಕಾಶ ನೀಡಲಾಗುತ್ತಿದ್ದು, ಪ್ರಸಕ್ತ ವರ್ಷದಲ್ಲಿ 550 ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಾಗಿದೆ.

11.14 ಬೆಂ.ಮ.ಸಾ.ಸಂಸ್ಥೆಯ ಆಂತರಿಕ ಪತ್ರಿಕೆಯಾದ "ಸಂಚಾರ"ದ ಸಂಪಾದಕರಾಗಿ/ಪ್ರಕಟಣೆ ಹಂಚಿಕೆಗಳ ಕಾರ್ಯ ನಿರ್ವಹಣೆ:

ಸಂಸ್ಥೆಯ ಸಿಬ್ಬಂದಿಗಳಿಗಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಮೂಲಕ **"ಸಂಚಾರ"** ಎಂಬ ಆಂತರಿಕ ಪತ್ರಿಕೆಯನ್ನು (ತ್ರೈಮಾಸಿಕ) ಪ್ರಕಟಿಸಿ ಉಚಿತವಾಗಿ ಹಂಚಲಾಗುತ್ತಿದೆ. ಈ ಪತ್ರಿಕೆಯು ಸಂಸ್ಥೆಯಲ್ಲಿರುವ ಸೌಲಭ್ಯ/ ಆದೇಶ/ ಮಾಹಿತಿ, ಲೇಖನಗಳನ್ನು ಪ್ರಕಟಿಸುತ್ತಿದ್ದು, ಸಂಸ್ಥೆಯ ನೌಕರರಿಗೆ ಹೆಚ್ಚು ಉಪಯುಕ್ತವಾಗಿದೆ.

*****

ಪರಿಚ್ಛೇದ – 12 ಮಾಹಿತಿ ತಂತ್ರಜ್ಞಾನ

12.1 ಬೆಂ.ಮ.ಸಾ.ಸಂಸ್ಥೆಯ ಅಂತರ್ಜಾಲ

ಬೆ.ಮ.ಸಾ.ಸಂಸ್ಥೆಯಲ್ಲಿ mybmtc.karnataka.gov.in ಅಂತರ್ಜಾಲವನ್ನು ಸಿ.ಐ.ಜಿ.ಡಬ್ಲ್ಯೂ. (Guidelines for Indian Governement Websites) ಮಾರ್ಗದರ್ಶನದ ಪ್ರಕಾರ ನಿರ್ಮಿಸಿ ಅನುಷ್ಠಾನಗೊಳಿಸಲಾಗಿರುತ್ತದೆ. ಸದರಿ ಅಂತರ್ಜಾಲದಲ್ಲಿ ಬೆ.ಮ.ಸಾ.ಸಂಸ್ಥೆಗೆ ಸೇರಿದ ತಾಜಾ ಸುದ್ದಿಗಳು, ಮಾರ್ಗದ ವಿವರಗಳು, ಅನುಸೂಚಿಯ ವಿವರಗಳು ಮತ್ತು ಬಸ್ ನಿಲ್ದಾಣಗಳ ವಿವರಗಳು ಲಭ್ಯವಿರುತ್ತವೆ. ಇದರಿಂದ ಪ್ರಯಾಣಿಕರು ತಮ್ಮ ಪ್ರವಾಸದ ಸಿದ್ಧತೆಯನ್ನು ಮಾಡಿಕೊಳ್ಳಲು ಅನುಕೂಲವಾಗಿರುತ್ತದೆ.

ಈ ಅಂತರ್ಜಾಲದ ಮುಖ್ಯ ವಿಶೇಷಗಳು

- ಸುತ್ತುವಳಿ ಮಾಹಿತಿ: ಈ ತಾಂತ್ರಾಂಶದಿಂದ ಪ್ರಯಾಣಿಕರು ತಮ್ಮ ಪ್ರಯಾಣಕ್ಕೆ ಸಂಬಂಧಪಟ್ಟ ದರಪಟ್ಟಿ, ವೇಳೆ, ತೆಗೆದುಕೊಳ್ಳುವ ಸಮಯ, ಪ್ರಯಾಣದ ದೂರ ಮತ್ತು ಸೇವೆಯ ವಿವರಗಳನ್ನು ಪಡೆಯಬಹುದಾಗಿದೆ.
- ಮಾರ್ಗ ಹುಡುಕುವಿಕೆ: ಅವಶ್ಯಕತೆಯಿರುವ ಅನುಸೂಚಿಯ ವಿವರವನ್ನು ಪಡೆಯಬಹುದಾಗಿದೆ.
- ವೇಳಾಪಟ್ಟಿ: ಎಲ್ಲಾ ಸೇವೆಗಳ ವೇಳಾಪಟ್ಟಿಯು ಲಭ್ಯವಿರುತ್ತದೆ.
- ದರಪಟ್ಟಿ: ಎಲ್ಲಾ ಸೇವೆಗಳ ದರಪಟ್ಟಿಯು ಲಭ್ಯವಿರುತ್ತದೆ.
- ಪಾಸುಗಳು: ಸಂಸ್ಥೆಯಲ್ಲಿ ಲಭ್ಯವಿರುವ ಎಲ್ಲಾ ಪಾಸುಗಳ ವಿವರಗಳನ್ನು ಒಳಗೊಂಡಿರುತ್ತದೆ.
- ವಾರ್ತೆ ಮತ್ತು ಪರಿಷ್ಕರಣೆ: ಬೆ.ಮ.ಸಾ.ಸಂಸ್ಥೆಯು ಸದಾ ಪ್ರಸಾರ ಮಾಡುವ ತಾಜಾ ಸುದ್ದಿಯನ್ನು ಸಂಸ್ಕರಣೆ ಮಾಡಿದ ಇ ಮೈಲ್ ಐಡಿಗೆ ಒದಗಿಸುತ್ತದೆ.
- ಪತ್ರಿಕಾ ಪ್ರಕಟಣೆ: ಬೆ.ಮ.ಸಾ.ಸಂಸ್ಥೆಯಿಂದ ಹೊರಡಿಸಿದ ಪತ್ರಿಕಾ ಪ್ರಕಟಣೆಯ ಮಾಹಿತಿಯನ್ನು ಸಂಸ್ಕರಣೆ ಮಾಡಿದ ಇ ಮೈಲ್ ಐಡಿಗೆ ಕಳುಹಿಸಲು ವ್ಯವಸ್ಥೆ ಮಾಡಲಾಗಿದೆ.
- ಸೇವೆಗಳು: ಸಾಮಾನ್ಯ ಸೇವೆ, ವಜ್ರ ಸೇವೆ, ವಿಮಾನ ನಿಲ್ದಾಣ ವಾಯುವಜ್ರ ಸೇವೆ, ಸಾಂದರ್ಭಿಕ ಒಪ್ಪಂದದ ಸೇವೆ, ಚಾರ್ಟರ್ಡ್ ಸೇವೆ, ವಂಡರ್‌ಲಾ ಸೇವೆ, ಜಾಹಿರಾತು ಮತ್ತು ಸಿನೆಮಾ ಒಪ್ಪಂದದ ದರಗಳ ವಿವರಗಳು ಲಭ್ಯವಿರುತ್ತದೆ.
- ಸಹಾಯ ಹಸ್ತ ಪಾಸುಗಳು: ಕಟ್ಟಡ ಕಾರ್ಮಿಕರಿಗೆ ಒದಗಿಸುವ ಸಹಾಯಹಸ್ತದ ಪಾಸುಗಳ ವಿವರ ಲಭ್ಯವಿರುತ್ತದೆ.
- ನೌಕರರ ಸಾರ್ವತ್ರಿಕ ವರ್ಗಾವಣೆ: ಆನ್‌ಲೈನ್ ಮೂಲಕ ನೌಕರ ಸಾರ್ವತ್ರಿಕ ಸಾಮಾನ್ಯ ವರ್ಗಾವಣೆ ವಿವರ ಲಭ್ಯವಿರುತ್ತದೆ.
- ಕಳೆದದ್ದು ಸಿಕ್ಕಿದೆ: ಈ ಸೇವೆಯು ವಸ್ತುಗಳನ್ನು ಕಳೆದುಕೊಂಡಿರುವ ಪ್ರಯಾಣಿಕರು ತಮ್ಮ ವಸ್ತುಗಳು ಸಿಕ್ಕಿರುವ ವ್ಯಕ್ತಿಗಳ ವಿವರವನ್ನು ಪಡೆಯಲು ಅನುವು ಮಾಡಿಕೊಡುತ್ತದೆ.
- ಟೆಂಡರ್‌ನ ಮಾಹಿತಿ: ಬೆಂ.ಮ.ಸಾ.ಸಂಸ್ಥೆಯ ಎಲ್ಲಾ ಟೆಂಡರ್‌ಗಳ ವಿವರಗಳನ್ನು ಒದಗಿಸುತ್ತದೆ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಗೆ ಮರುನಿರ್ದೇಶಿಸುತ್ತದೆ.

12.2 ಸಕಾಲ ಅನುಷ್ಠಾನ:

ಕರ್ನಾಟಕ ಸರ್ಕಾರದಿಂದ ನಿಗದಿತ ಕಾಲದೊಳಗೆ ಸಾರ್ವಜನಿಕರಿಗೆ ಅರ್ಜಿಗಳನ್ನು ವಿಲೇವಾರಿ ಮಾಡಲು ಒಂದು ಅನನ್ಯ ಯೋಜನೆಯನ್ನು ಆರಂಭಿಸಲಾಗಿದೆ. ಬೆ.ಮ.ಸಾ.ಸಂಸ್ಥೆಯ ಎರಡು ಸೇವೆಗಳು ಈ ಯೋಜನೆಯಲ್ಲಿದ್ದು, ಅವುಗಳು ವಿದ್ಯಾರ್ಥಿಗಳ ರಿಯಾಯತಿ ಪಾಸುಗಳು ಮತ್ತು ವಿಕಲಚೇತನರ ಪಾಸುಗಳನ್ನು ಒಳಗೊಂಡಿವೆ.

12.3 ಮೊಬೈಲ್ ಆಧಾರಿತ ಆನ್‌ಲೈನ್ ರಜಾ ನಿರ್ವಹಣಾ ವ್ಯವಸ್ಥೆ:

ಬೆಂ.ಮ.ಸಾ.ಸಂಸ್ಥೆಯು ಮೊಬೈಲ್ ಆಧಾರಿತ ಆನ್‌ಲೈನ್ ರಜಾ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಚಾಲನಾ ಸಿಬ್ಬಂದಿಗಳು ತಮ್ಮ ಮೊಬೈಲ್ ಅಥವಾ ಅಂತರ್ಜಾಲ ಸಂಪರ್ಕ ಹೊಂದಿದ ಯಾವುದೇ ಗಣಕಯಂತ್ರದ ಮೂಲಕ ರಜೆ ಅರ್ಜಿ ಸಲ್ಲಿಸಲು ಅನುವು ಮಾಡಿಕೊಡಲಾಗಿದೆ. ಇದು ಆಡಳಿತವರ್ಗ ಮತ್ತು ಚಾಲನಾ ಸಿಬ್ಬಂದಿಗೆ ಅನುಕೂಲವಾಗುವ ಕೇಂದ್ರೀಕೃತ ವೆಬ್ ಅಪ್ಲಿಕೇಷನ್ ಆಗಿರುತ್ತದೆ. ಸಿಬ್ಬಂದಿಗಳು ತಮ್ಮ ಬಾಕಿ ಇರುವ ರಜೆಯನ್ನು ನೋಡಬಹುದು ಮತ್ತು ರಜೆಯನ್ನು ತೆಗೆದುಕೊಳ್ಳಬಹುದು ಹಾಗೂ ನಿರ್ದಿಷ್ಟ ನೌಕರರ ಬಾಕಿ ಇರುವ ರಜೆಯನ್ನು ಆಧರಿಸಿ, ಲಭ್ಯವಿರುವ ಕೋಟಾದ ಆಧಾರದ ಮೇಲೆ ಸಣ್ಣ ರಜೆಯನ್ನು ಪಡೆಯಬಹುದು ಮತ್ತು ರಜೆ ಸ್ವೀಕಾರ ಅಥವಾ ತಿರಸ್ಕೃತವಾಗಿರುವ ಮಾಹಿತಿಯನ್ನು ಎಸ್.ಎಂ.ಎಸ್. ಮೂಲಕ ತಿಳಿಯಬಹುದು.

ಮೊಬೈಲ್ ಆಧಾರಿತ ಆನ್‌ಲೈನ್ ರಜಾ ನಿರ್ವಹಣಾ ವ್ಯವಸ್ಥೆಯು ಬಳಕೆದಾರ ಸ್ನೇಹಿಯಾಗಿದ್ದು, ಸುರಕ್ಷಿತ, ಪಾರದರ್ಶಕ ಮತ್ತು ವೇಗವಾಗಿ ರಜೆ ನಿರ್ವಹಣಾ ಪ್ರಕ್ರಿಯೆಯನ್ನು ನಿರ್ವಹಿಸುತ್ತದೆ.

12.4 ಚತುರ ಸಾರಿಗೆ ಯೋಜನೆ (ಐ.ಟಿ.ಎಸ್.)

ಬೆಂ.ಮ.ಸಾ.ಸಂಸ್ಥೆಯು ಕಾರ್ಯಾಚರಣೆಯಲ್ಲಿ ದಕ್ಷತೆಯನ್ನು ತರಲು ವಾಹನ ಟ್ರ್ಯಾಕಿಂಗ್ ವ್ಯವಸ್ಥೆ, ಎಲೆಕ್ಟ್ರಾನಿಕ್ ಟಿಕೆಟಿಂಗ್ ವ್ಯವಸ್ಥೆ ಮತ್ತು ಪ್ರಯಾಣಿಕರ ಮಾಹಿತಿ ವ್ಯವಸ್ಥೆಯನ್ನು ಒಳಗೊಂಡಿರುವ ಐ.ಟಿ.ಎಸ್. ಯೋಜನೆಯನ್ನು ಜಾರಿಗೆ ತಂದಿದೆ. ಐ.ಟಿ.ಎಸ್.ಯೋಜನೆಯ ವೈಶಿಷ್ಟ್ಯಗಳು ಈ ಕೆಳಗಿನಂತಿವೆ.

- ನೈಜ ಸಮಯದ ಸಂಪರ್ಕದೊಂದಿಗೆ ವೆಹಿಕಲ್ ಟ್ರ್ಯಾಕಿಂಗ್ ಸಿಸ್ಟಮ್ (ವಿ.ಟಿ.ಎಸ್)
- ನೈಜ ಸಮಯದ ಸಂಪರ್ಕದೊಂದಿಗೆ ಎಲೆಕ್ಟ್ರಾನಿಕ್ ಟಿಕೆಟಿಂಗ್ ವ್ಯವಸ್ಥೆ (ಇ.ಟಿ.ಎಂ)
- ಎಲ್.ಇ.ಡಿ. ಬೋರ್ಡ್‌ಗಳ ಮೂಲಕ ಪ್ರಯಾಣಿಕರಿಗೆ ಮಾಹಿತಿಯ ವ್ಯವಸ್ಥೆ (ಪಿ.ಐ.ಎಸ್.)
- ಕಮಾಂಡ್ ಕಂಟ್ರೋಲ್ ಮತ್ತು ದತ್ತಾಂಶ ಕೇಂದ್ರ (ಎಲ್ಲಾ ಮೂಲ ಸೌಕರ್ಯಗಳೊಂದಿಗೆ)
- ಘಟಕ ಮಟ್ಟದ ಕಾರ್ಯಾಚರಣೆಗಳಿಗಾಗಿ ಅಪ್ಲಿಕೇಶನ್ ಅಭಿವೃದ್ಧಿಗೊಳಿಸುವುದು.
- ಐ.ಟಿ.ಎಸ್ ವ್ಯವಸ್ಥೆಗೆ ಪೂರಕವಾದ ಯೋಜನೆ, ಸಿಸ್ಟಮ್ ಹೆಲ್ಪ್ ಮತ್ತು ಸೇವೆಯ ಗುಣಮಟ್ಟ ನಿಯಂತ್ರಿಸಲು ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವುದನ್ನು ಒಳಗೊಂಡಿರುತ್ತದೆ.

ಐ.ಟಿ.ಎಸ್ ಯೋಜನೆಯು ಪ್ರಯಾಣಿಕರ ಅಗತ್ಯಗಳ ಪೂರೈಕೆ, ಡೇಟಾ ಚಾಲಿತ ನಿರ್ಧಾರ, ಸೇವಾ ಯೋಜನೆ, ಸುಧಾರಣೆ ಮತ್ತು ಪ್ರಚಾರದ ಮೂಲಕ ಬೆ.ಮ.ಸಾ.ಸಂಸ್ಥೆಯ ಸೇವೆಗಳನ್ನು ಪ್ರಬಲವಾಗಿ ಬೆಳೆಸಿ ದಕ್ಷತೆಯನ್ನು ಹೆಚ್ಚಿಸಲು ನೆರವಾಗುತ್ತದೆ. ಪ್ರಯಾಣಿಕರ ಹಾಗೂ ಸಂಸ್ಥೆಯ ನಡುವಿನ ಬಾಂಧವ್ಯವನ್ನು ಪ್ರಬಲಗೊಳಿಸುತ್ತದೆ ಹಾಗೂ ಉತ್ತಮವಾದ ಯೋಜನೆಯನ್ನು ರೂಪಿಸಲು ಹಾಗೂ ಪ್ರಯಾಣಿಕರ ಅಮೂಲ್ಯವಾದ ಸಲಹೆಗಳನ್ನು ಪಡೆಯಲು ಸಹಕಾರಿಯಾಗಲಿದೆ.

12.5 ಮೊಬೈಲ್ ಅಪ್ಲಿಕೇಷನ್ ಯೋಜನೆ:

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಪ್ರಯಾಣಿಕರ ಅನುಕೂಲಕ್ಕಾಗಿ ಪ್ರಯಾಣಿಕ ಸ್ನೇಹಿ ಮೊಬೈಲ್ ಅಪ್ಲಿಕೇಶನ್ ಅನ್ನು ಪ್ರಸ್ತುತ Android ಆವೃತ್ತಿಯಲ್ಲಿ ಹಾಗೂ IOS ಆವೃತ್ತಿಯಲ್ಲಿ ಬಿಡುಗಡೆಗೊಳಿಸಲಾಗಿದ್ದು, ಸದರಿ ವ್ಯವಸ್ಥೆಯ ವೈಶಿಷ್ಟ್ಯತೆಗಳು ಈ ಕೆಳಗಿನಂತಿವೆ.

- ಪ್ರಯಾಣಿಕರು ಪ್ರಯಾಣಿಸಲು ಇಚ್ಛಿಸುವ ಮಾರ್ಗದ ಮಾಹಿತಿಯನ್ನು ತಿಳಿಯಲು ಈ ತಂತ್ರಾಂಶ ಸಹಾಯ ಮಾಡುತ್ತದೆ.
- ಪ್ರಯಾಣಿಕರು ಆಯ್ಕೆ ಮಾಡಿಕೊಂಡ ವಾಹನವು ತಮ್ಮ ಬಸ್ ನಿಲ್ದಾಣಕ್ಕೆ ಬರುವ ಅಂದಾಜು ಸಮಯವನ್ನು ತಿಳಿದುಕೊಳ್ಳಬಹುದಾಗಿದ್ದು, ಇದರಿಂದ ಅವರ ಪ್ರಯಾಣವನ್ನು ಯೋಜಿಸಲು ಸಹಾಯವಾಗುತ್ತದೆ.
- ಪ್ರಯಾಣಿಕರು ಹತ್ತಿರದ ಬಸ್ಸು ನಿಲ್ದಾಣಗಳ ಸ್ಥಳ ಗುರುತಿಸಿ ಪ್ರಯಾಣದ ಯೋಜನೆ ಮಾಡಬಹುದಾಗಿರುತ್ತದೆ.

- ಪ್ರಯಾಣಿಕರು ತಮ್ಮ ಮೊಬೈಲ್‌ಗಳಲ್ಲಿಯೂ ಸಹ ನೈಜ ಸಮಯದ ಬಸ್‌ಗಳ ಮಾಹಿತಿಯ ಲಭ್ಯತೆಯೊಂದಿಗೆ ತಮ್ಮ ಪ್ರಯಾಣವನ್ನು ಯೋಜಿಸಬಹುದು.

12.6 ಇನ್‌ವೆಂಟರಿ ಮ್ಯಾನೇಜ್‌ಮೆಂಟ್ ವ್ಯವಸ್ಥೆ (ಐ.ಎಂ.ಎಸ್.) :

ಈ ವ್ಯವಸ್ಥೆಯು ಉಗ್ರಾಣ ಶಾಖೆಯ ಖರೀದಿ ನಿರ್ವಹಣೆಗಾಗಿ ಅಂತರ್ಜಾಲ ಆಧಾರಿತ ತಂತ್ರಾಂಶವಾಗಿರುತ್ತದೆ. ಅದು ಉಗ್ರಾಣ ಮತ್ತು ಖರೀದಿ ಮಾಡ್ಯುಲ್ ವಿಷಯದ ಉತ್ತಮ ವ್ಯವಸ್ಥೆಯಾಗಿದ್ದು, ಸರಕು ನಿರ್ವಹಣೆಯ ಎಲ್ಲಾ ಅಂಶಗಳನ್ನು ಬೆಂಬಲಿಸುತ್ತಿದ್ದು, ವಿವಿಧ ರೀತಿಯ ಖರೀದಿ ಆದೇಶಗಳು, ಸರಕುಗಳ ಸ್ವೀಕೃತಿ, ಸರಕುಗಳ ರವಾನೆ, ಸರಕುಗಳ ಹಿಂತಿರುಗಿಸುವಿಕೆ, ದಾಸ್ತಾನು ಹಂಚಿಕೆ, ರಸೀದಿಗಳು, ಸರಕುಗಳ ವರ್ಗಾವಣೆ, ದಾಸ್ತಾನು ಮತ್ತು ಬಳಕೆ ಹಾಗೂ ಮಾರಾಟಗಾರರ ಮೇಲ್ವಿಚಾರಣೆ ಮಾಡಬಹುದಾಗಿರುತ್ತದೆ. ಗರಿಷ್ಠ ಮತ್ತು ಕನಿಷ್ಠ ಮಟ್ಟದ ಪುನರ್ ಆದೇಶವನ್ನು ಬಳಸಿಕೊಂಡು ವಸ್ತುಗಳ ಬಳಕೆಯ ನಮೂನೆಯನ್ನು ಪತ್ತೆ ಹಚ್ಚಬಹುದು. ಬಹು ಸ್ಥಳಗಳಲ್ಲಿ ಸ್ಥಿರವಾದ ರೀತಿಯಲ್ಲಿ ವಸ್ತುಗಳನ್ನು ವ್ಯಾಖ್ಯಾನಿಸಲು ಮತ್ತು ನಿರ್ವಹಿಸಲು ಐ.ಎಂ.ಎಸ್. ಬೆಂಬಲಿಸುತ್ತದೆ.

12.7 ಬೆಂ.ಮ.ಸಾ.ಸಂಸ್ಥೆಯಲ್ಲಿ ಆನ್‌ಲೈನ್ ನೇಮಕಾತಿ ಪ್ರಕ್ರಿಯೆ:

ಬೆಂ.ಮ.ಸಾ.ಸಂಸ್ಥೆಯಲ್ಲಿ ಸಿಬ್ಬಂದಿಯ ನೇಮಕಾತಿಯನ್ನು ಆನ್‌ಲೈನ್ ಪ್ರಕ್ರಿಯೆ ಮೂಲಕ ನಡೆಸಲಾಗುತ್ತಿದ್ದು, ವಿವರಗಳು ಕೆಳಕಂಡಂತಿವೆ.

- mybmtc.karnataka.gov.in ವೆಬ್‌ಸೈಟ್ ಸೃಜಿಸಲಾಗಿದೆ.
- mybmtc.karnataka.gov.in ನಲ್ಲಿ ರೋಸ್ಟರ್ ಪ್ರಕಾರ ಅಧಿಸೂಚನೆ ಹೊರಡಿಸಿದ ನಂತರ ಖಾಲಿ ಇರುವ ಹುದ್ದೆಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ನಮೂದಿಸಲಾಗುತ್ತದೆ.
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಹುದ್ದೆಗೆ ಅರ್ಜಿ ಸಲ್ಲಿಸಬಹುದು.
- ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿದ ತಕ್ಷಣ ಕರೆ ಪತ್ರವನ್ನು ಮುದ್ರಿಸಿಕೊಳ್ಳಬಹುದು.
- ಸಾಫ್ಟ್‌ವೇರ್ ಅಪ್ಲಿಕೇಷನ್ ಮೂಲಕ ಅರ್ಜಿಯ ಪರಿಶೀಲನೆ
- ಚಾಲನಾ ಪರೀಕ್ಷೆಯನ್ನು ಗಣಕೀಕರಣಗೊಳಿಸಲಾಗಿದೆ.
- ಕೌನ್ಸಿಲಿಂಗ್ ತಂತ್ರಾಂಶವನ್ನು ಉಪಯೋಗಿಸಿಕೊಂಡು ಅರ್ಹತೆಯನ್ನು ಆಧರಿಸಿ ಹುದ್ದೆಯನ್ನು ನಿಯೋಜಿಸುವುದು.

12.8 ಸಂಬಳದ ತಂತ್ರಾಂಶ ನಿರ್ವಹಣೆ:

ಸಂಸ್ಥೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವೇತನವನ್ನು ಗಣಕೀಕೃತ ತಂತ್ರಾಂಶವನ್ನು ಉಪಯೋಗಿಸಿಕೊಂಡು ಸಂಬಳದ ನಿರ್ವಹಣೆಯನ್ನು ಮಾಡಲಾಗುತ್ತದೆ. ಸಂಸ್ಥೆಯ ಎಲ್ಲಾ ನೌಕರರ ವೇತನ ಚೀಟಿಯನ್ನು ಸಂಪೂರ್ಣ ಗಣಕೀಕರಣಗೊಳಿಸಲಾಗಿದೆ ಹಾಗೂ ಸಂಬಳವನ್ನು ನೌಕರರ ಐಚ್ಛಿಕ ಬ್ಯಾಂಕುಗಳಿಗೆ ಇ.ಸಿ.ಎಸ್. ಮೂಲಕ ನೇರವಾಗಿ ಕಳುಹಿಸಲಾಗುತ್ತದೆ. ಜೊತೆಗೆ ಪ್ರಸಕ್ತ ವರ್ಷದ ಪಿಎಫ್/ವಿಪಿಎಫ್ ಲೆಡ್ಜರ್ ಮತ್ತು ಲೆಕ್ಕಪತ್ರದ ಲೆಡ್ಜರ್‌ಗಳನ್ನು ತಯಾರಿಸಲಾಗುತ್ತದೆ

12.9 ಎಂ.ಐ.ಎಸ್. ಡ್ಯಾಶ್‌ಬೋರ್ಡ್ ಮಾಡ್ಯುಲ್ ಅನುಷ್ಠಾನ:

ಎಂ.ಐ.ಎಸ್. ಡ್ಯಾಶ್‌ಬೋರ್ಡ್ ಮಾಡ್ಯುಲ್ ತಂತ್ರಾಂಶವು ಕಾರ್ಯಾಚರಣೆ ಫಲಿತಾಂಶಗಳ ಮೌಲ್ಯಮಾಪನ ನಿರ್ವಹಣೆ ಸಾಧನವಾಗಿದ್ದು ಇದರಿಂದ ಆಡಳಿತ ವರ್ಗವು ದಿನಂಪ್ರತಿ ಪ್ರತಿಯೊಂದು ಘಟಕದ ಸಾಧನೆಯ ವಿವರಗಳನ್ನು ಗ್ರಾಫ್ ಮತ್ತು ಡಯಾಗ್ರಮ್ ಮೂಲಕ ವೀಕ್ಷಿಸಬಹುದು ಹಾಗೂ ಈ ತಂತ್ರಾಂಶವು ಸ್ವಂಯಚಾಲಿತವಾಗಿ ನಿಯತಕಾಲಿಕ ವರದಿಗಳನ್ನು ಉತ್ಪಾದಿಸುತ್ತದೆ.

12.10 ಕರೆ ಕೇಂದ್ರ: (ಕಾಲ್ ಸೆಂಟರ್): ಕರೆ ಕೇಂದ್ರದ ಉನ್ನತೀಕರಣ/ಸಹಾಯವಾಣಿ –1800 425 1663 ಅನುಷ್ಠಾನ

12.11 ದೈನಂದಿನ ವರದಿ ವ್ಯವಸ್ಥೆ:

ಕೇಂದ್ರೀಕೃತ ದತ್ತಾಂಶ ಸಂಗ್ರಹಣೆ ಮತ್ತು ಪರಿಶೀಲನೆ. ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಅಭಿವೃದ್ಧಿಪಡಿಸಿರುವ ಈ ತಂತ್ರಾಂಶದಿಂದ ಅನುಸೂಚಿಗಳ ಆದಾಯವನ್ನು ಪ್ರಸಕ್ತ ಮತ್ತು ಹಿಂದಿನ ವರ್ಷಗಳಿಗೆ ತಾಳೆ ಮಾಡಲು ಅನುಕೂಲವಾಗಿರುತ್ತದೆ. ವಲಯ ಮಟ್ಟದ ಟಿಕೆಟ್ ಆದಾಯ, ಪಾಸುಗಳ ಆದಾಯ ಮತ್ತು ಸಾರಿಗೆ ಆದಾಯದ ವಿವರಗಳನ್ನು ಉತ್ಪಾದಿಸುತ್ತದೆ.

12.12 ಪ್ರಾಫಿಟ್ ಪ್ಲಸ್ ಮತ್ತು ಹಣಕಾಸು ಲೆಕ್ಕಪತ್ರ ತಂತ್ರಾಂಶ

ಈ ತಂತ್ರಾಂಶವು ಲೆಕ್ಕಪತ್ರ ಶಾಖೆಯ ಕೈಪಿಡಿ ಪ್ರಕಾರ ಬೆ.ಮ.ಸಾ.ಸಂಸ್ಥೆಯಲ್ಲಿ ನಿರ್ವಹಣೆಯಾಗುತ್ತಿದೆ. ತಂತ್ರಾಂಶದ ವಿವರ ಈ ಕೆಳಕಂಡಂತಿವೆ.

- ಲೆಕ್ಕಪತ್ರ ಶಾಖೆಯಲ್ಲಿ ಹಸ್ತಚಾಲಿತ ಕೆಲಸ ತಪ್ಪಿಸುವುದು.
- ವಿವಿಧ ಹಂತದಲ್ಲಿ ಕೆಲಸ ನಕಲಾಗುವುದನ್ನು ನಿಯಂತ್ರಿಸುವುದು.
- ಬೆಂ.ಮ.ಸಾ.ಸಂಸ್ಥೆಯ ವಾರ್ಷಿಕ ಆರ್ಥಿಕ ಫಲಿತಾಂಶಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವುದು.
- ಅಕೌಂಟ್ ಹೆಡ್ ಸಮತೋಲನ ವೀಕ್ಷಣೆ.
- ಯಾಂತ್ರೀಕೃತಗೊಂಡ ಫೈಲ್ ಟ್ರ್ಯಾಕಿಂಗ್ ಮಾಡ್ಯುಲ್‌ನ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗಿದೆ.
- ಪ್ರಾಫಿಟ್ ಪ್ಲಸ್ ತಂತ್ರಾಂಶದಿಂದ ಬಿ.ಪಿ.ಒ. ಉತ್ಪಾದನೆ, ಚೆಕ್ಕುಗಳ ಮುದ್ರಣ, ಪಾರ್ಟಿ ಮೈಲರ್ಸ್, ಇತ್ಯಾದಿಗಳನ್ನು ಅನುಷ್ಠಾನಗೊಳಿಸಲಾಗಿದೆ.

12.13 ನಿರ್ಭಯಾ ಯೋಜನೆಯಡಿ ಮಹಿಳಾ ಸುರಕ್ಷತಾ ವೈಶಿಷ್ಟ್ಯಗಳೊಂದಿಗೆ ಬೆಂ.ಮ.ಸಾ.ಸಂಸ್ಥೆಯ ಮೊಬೈಲ್ ಅಪ್ಲಿಕೇಶನ್:

ಬೆಂ.ಮ.ಸಾ.ಸಂಸ್ಥೆಯು ನಿರ್ಭಯಾ ಯೋಜನೆಯಡಿ ಮಹಿಳಾ ಸುರಕ್ಷತೆ ವೈಶಿಷ್ಟ್ಯಗಳು ಮತ್ತು ಸಿಸಿಟಿವಿ ಕಣ್ಗಾವಲು ಹೊಂದಿರುವ ಮೊಬೈಲ್ ಆ್ಯಪ್ ಜಾರಿಗೆ ತರಲು ಯೋಜಿಸಿದೆ. ಸದರಿ ಯೋಜನೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ.

- ಬಸ್ಸುಗಳ ಆಗಮನ/ನಿರ್ಗಮನ ವೇಳೆಯ ಖಚಿತ ಮಾಹಿತಿ, ಬಸ್ಸುಗಳ ಸ್ಥಳ ಇತ್ಯಾದಿ ಮತ್ತು ಹೆಚ್ಚುವರಿ ವೈಶಿಷ್ಟ್ಯತೆಗಳನ್ನೊಳಗೊಂಡ ಮೊಬೈಲ್ ಅಪ್ಲಿಕೇಷನ್.
- ಸುರಕ್ಷತೆಗಾಗಿ ತುರ್ತು/ಪ್ಯಾನಿಕ್ ಬಟನ್
- AIS 140 ಮಾನದಂಡಗಳನ್ನು ಹೊಂದಿರುವ ವಾಹನ ಜಾಡೀಕರಣ ಉಪಕರಣಗಳು (Vehicle Tracking Unit).
- ಅಂತನಿರ್ಮಿತ ಜಿಪಿಎಸ್ ಜಾಡೀಕರಣ ಉಪಕರಣಗಳೊಂದಿಗೆ ಹೆಚ್‌ಡಿ ಮೊಬೈಲ್ ನೆಟ್‌ವರ್ಕ್ ದೃಶ್ಯ ದಾಖಲೀಕರಣ (Mobile Network Video Recroding).
- 5,000 ಬಸ್ಸುಗಳಲ್ಲಿ ಮತ್ತು ಪ್ರಮುಖ ಬಸ್ ನಿಲ್ದಾಣಗಳಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಕೆ.
- ಪ್ರಯಾಣಿಕರ ಮಾಹಿತಿ ವ್ಯವಸ್ಥೆ ಫಲಕಗಳ ಅಳವಡಿಕೆ.

ಪರಿಚ್ಛೇದ – 13

ಪರಿಸರ

13.1. ಪ್ರಸ್ತಾವನೆ:

ಬೆಂ.ಮ.ಸಾ.ಸಂಸ್ಥೆಯಲ್ಲಿ ಪರಿಸರ ಶಾಖೆಯು 2003ನೇ ಸಾಲಿನಲ್ಲಿ ಆರಂಭವಾಗಿದ್ದು, ಪ್ರಸ್ತುತ ಸದರಿ ಶಾಖೆಯು ತಾಂತ್ರಿಕ (ನಿ) ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

13.2. ಉದ್ದೇಶಗಳು:

ಪರಿಸರ ಶಾಖೆಯನ್ನು ಕೆಳಗಿನ ಪ್ರಾಥಮಿಕ ಉದ್ದೇಶಗಳೊಂದಿಗೆ ರಚಿಸಲಾಗಿದೆ.

- ನಿಗಮದಲ್ಲಿ ಪರಿಸರ ಸಂಬಂಧಿತ ಅಂಶಗಳನ್ನು ಉತ್ತಮಗೊಳಿಸುವುದು.
- ಸಂಸ್ಥೆಯಲ್ಲಿ ಪರಿಸರದ ಬಗ್ಗೆ ಜಾಗೃತಿಯನ್ನು ಸ್ಥಾಪಿಸುವುದು.
- ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಲು ಅನುವಾಗುವಂತೆ ಕಾರ್ಯಕ್ಷಮತೆ ಉತ್ತಮ ಪಡಿಸುವುದು ಹಾಗೂ ತ್ಯಾಜ್ಯವನ್ನು ನಿಯಂತ್ರಿಸುವುದು.
- ಘಟಕಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ಮತ್ತು ಕೇಂದ್ರ ಕಛೇರಿಯಲ್ಲಿ ಅರಣ್ಯ ಸಂರಕ್ಷಣೆ ಕುರಿತು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
- ಅಗತ್ಯವಿದ್ದಾಗ ಪರಿಸರಕ್ಕೆ ಸಂಬಂಧಿಸಿದ ಹೊಸ ಯೋಜನೆಗಳನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳುವುದು.
- ಘಟಕಗಳಿಗೆ ಐ.ಎಸ್.ಒ 9001:2015 ಮತ್ತು 14001:2015 ಪ್ರಮಾಣೀಕರಿಸುವುದು.
- ಬೆಂಗಳೂರು ನಗರದಲ್ಲಿ ಬೆಂ.ಮ.ಸಾ.ಸಂಸ್ಥೆಯ ವತಿಯಿಂದ ವಾಯು ಮಾಲಿನ್ಯವನ್ನು ಕಡಿಮೆ ಮಾಡಲು ಕ್ರಮ ತೆಗೆದುಕೊಳ್ಳುವುದು.

13.3. ಪರಿಸರ ನೀತಿ:

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬೆಂಗಳೂರು ನಗರದ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೇವೆಯನ್ನು ಒದಗಿಸುವುದಲ್ಲದೆ ಈ ಕಳಗಿನಂತೆ ಪರಿಸರ ಸ್ನೇಹಿ ಕಾರ್ಯಾಚರಣೆಗಳನ್ನು ಒದಗಿಸಲು ಬದ್ಧವಾಗಿದೆ.

- ಪರಿಸರಕ್ಕೆ ಸಂಬಂಧಿಸಿದ ಶಾಸನಬದ್ಧ ನಿಯಮಗಳು ಮತ್ತು ನಿಯಂತ್ರಕ ಕಾಯ್ದೆಗಳನ್ನು ಅನುಸರಿಸುವುದು.
- ಪರಿಸರ ನಿರ್ವಹಣಾ ವ್ಯವಸ್ಥೆಗೆ ಸಂಬಂಧಪಟ್ಟವರಿಂದ ಸೂಕ್ತ ಯೋಜನೆಗಳನ್ನು ರೂಪಿಸುವುದು ಹಾಗೂ ಅದರ ಪಾಲನೆ ಬಗ್ಗೆ ಪರಾಮರ್ಷಿಸುವುದು.
- ಪರಿಸರವನ್ನು ಉತ್ತಮಪಡಿಸಲು ಸಂಸ್ಥೆಯ ನೌಕರರನ್ನು ಪ್ರೋತ್ಸಾಹಿಸುವುದು ಹಾಗೂ ಅಗತ್ಯ ತರಬೇತಿಯನ್ನು ನೀಡುವುದು.
- ಕಾಲಕಾಲಕ್ಕೆ ತಾಂತ್ರಿಕತೆಯನ್ನು ಉನ್ನತೀಕರಿಸುವ ಮೂಲಕ ಪರಿಸರ ಸ್ನೇಹಿ ಸಾರಿಗೆ ಆಚರಣೆಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

13.4. ಐ.ಎಸ್.ಓ. ಪ್ರಮಾಣೀಕರಣ:

ಸಂಸ್ಥೆಯಲ್ಲಿ ದಕ್ಷ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನಕ್ಕಾಗಿ ಅಂತರ್‌ರಾಷ್ಟ್ರೀಯ ಮಾನದಂಡಗಳಲ್ಲಿನ ಗುಣಮಟ್ಟ ನಿರ್ವಹಣೆ ವ್ಯವಸ್ಥೆ (QMS) ಮತ್ತು ಪರಿಸರ ನಿರ್ವಹಣೆ ವ್ಯವಸ್ಥೆ (EMS) ಗೆ ಅನುಗುಣವಾಗಿ ಘಟಕ–4, 7, 11 ಮತ್ತು 16ರನ್ನು ISO 9001:2015 ಮತ್ತು ISO 14001:2015 ಎಂದು ಪ್ರಮಾಣೀಕರಿಸಲಾಗಿರುತ್ತದೆ.

13.5. ಮಳೆ ನೀರಿನ ಕೊಯ್ಲು:

ಬೆಂ.ಮ.ಸಾ.ಸಂಸ್ಥೆಯು ಘಟಕ–4, 40, 41, 43 ಮತ್ತು 46ರಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ್ದು, ಹಂತ ಹಂತವಾಗಿ ಉಳಿದ ಎಲ್ಲಾ ಘಟಕಗಳಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಕಲ್ಪಿಸುವ ಕಾರ್ಯ ಪ್ರಗತಿಯಲ್ಲಿದೆ.

13.6. ಅಪಾಯಕಾರಿ ತ್ಯಾಜ್ಯ ವಿಲೇವಾರಿ ಮತ್ತು ಮರುಬಳಕೆ :

ಘಟಕ ಹಾಗೂ ಕಾರ್ಯಾಗಾರಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ತೈಲದಲ್ಲಿ ನೆಂದಿರುವ ಕಾಟನ್ ತ್ಯಾಜ್ಯಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪ್ರಮಾಣೀಕರಿಸಿದ ಅಧಿಕೃತ ಏಜನ್ಸಿಯವರು ಸಂಗ್ರಹಿಸುತ್ತಾರೆ.

13.7. ಪರಿಸರ ವಿಭಾಗದ ಅನುಷ್ಠಾನಗಳು :

ಸಂಸ್ಥೆಯ ಘಟಕ, ಪ್ರಮುಖ ಬಸ್ ನಿಲ್ದಾಣ, ಕೇಂದ್ರೀಯ ಕಾರ್ಯಾಗಾರ ಮತ್ತು ಟಿ.ಟಿ.ಎಂ.ಸಿಗಳಲ್ಲಿ ಒಣ, ಹಸಿ ಮತ್ತು ಅಪಾಯಕಾರಿ ತ್ಯಾಜ್ಯವನ್ನು ಸಂಗ್ರಹಿಸಲು ಮತ್ತು ಸುಲಭವಾಗಿ ಗುರುತಿಸಲು/ಪ್ರತ್ಯೇಕಿಸಲು ಬುಟ್ಟಿಗಳ ಮೇಲೆ ನೀಲಿ, ಹಸಿರು ಮತ್ತು ಕೆಂಪು ಬಣ್ಣದ ಲೇಬಲ್‌ಗಳನ್ನು ಅಂಟಿಸಲಾಗಿರುತ್ತದೆ. ಸದರಿ ಒಣ ಮತ್ತು ಹಸಿ ತ್ಯಾಜ್ಯದ ವಿಲೇವಾರಿಯನ್ನು ಬಿ.ಬಿಎಂ.ಪಿ ಗುತ್ತಿಗೆದಾರರಿಗೆ ವಹಿಸಲಾಗಿರುತ್ತದೆ. ಅಲ್ಲದೆ, ತ್ಯಾಜ್ಯಗಳನ್ನು ವಿಂಗಡಿಸಲು ಹಾಗೂ ಅದರ ನಿರ್ವಹಣೆ ಕುರಿತು ಆಗಿಂದಾಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ.

13.8.1. ನೀರು ಮರು ಸಂಸ್ಕರಣೆ ನೀತಿ :

ಸಂಸ್ಥೆಯ ಘಟಕಗಳಲ್ಲಿ ಬಸ್ಸುಗಳನ್ನು ತೊಳೆಯಲು ಮತ್ತು ಸ್ವಚ್ಛಗೊಳಿಸಲು ಹೆಚ್ಚು ನೀರನ್ನು ಬಳಸುತ್ತಿದ್ದು, ಸದರಿ ಸ್ವಚ್ಛಗೊಳಿಸಿದ ನೀರಿನಲ್ಲಿ ಕೆಸರು, ತೈಲ, ಗ್ರೀಸ್ ಮತ್ತು ಕಲ್ಮಶಗಳು ಸೇರಿಕೊಳ್ಳುತ್ತಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳ ಪ್ರಕಾರ ವಾಹನಗಳನ್ನು ಸ್ವಚ್ಛಗೊಳಿಸುತ್ತಿದ್ದು, ನೀರನ್ನು ಶುದ್ಧೀಕರಿಸಿದ ನಂತರ ಒಳಚರಂಡಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸುಮಾರು 35 ಘಟಕಗಳಲ್ಲಿ ಈಗಾಗಲೇ ನೀರು ಮರು ಸಂಸ್ಕರಣ ಸ್ಥಾವರಗಳನ್ನು ಅಳವಡಿಸಲಾಗಿದ್ದು ಶೇ.95 ರಷ್ಟು ಬಳಸಿದ ನೀರನ್ನು ಮರು ಬಳಕೆ ಮಾಡುವಷ್ಟು ಸ್ಥಾವರವನ್ನು ವಿನ್ಯಾಸಗೊಳಿಸಲಾಗಿರುತ್ತದೆ, ಉಳಿದ ಶೇ.5 ರಷ್ಟು ಕೆಸರು ತೈಲ ಮತ್ತು ಗ್ರೀಸ್ ಆಗಿರುತ್ತದೆ. ಮರು ಸಂಸ್ಕರಣೆ ಮಾಡಿದ ನೀರನ್ನು ಪ್ರತಿ ಆರು ತಿಂಗಳಿಗೊಮ್ಮೆ ಅಧಿಕೃತ ಏಜನ್ಸಿಯು ಪರೀಕ್ಷಿಸುತ್ತದೆ.

13.8.2. ನೀರು ಮೆದುಗೊಳಿಸುವ ಸ್ಥಾವರದ ನೀತಿ :

ಬೆಂ.ಮ.ಸಾ.ಸಂಸ್ಥೆಯ ಘಟಕಗಳಲ್ಲಿ ವಾಹನಗಳನ್ನು ಸ್ವಚ್ಛಗೊಳಿಸಲು ಬಳಸುವ ಕೊಳವೆಬಾವಿಯ ನೀರಿನಲ್ಲಿರುವ ಗಡಸುತನವನ್ನು ಕಡಿಮೆ ಮಾಡಲು ಸುಮಾರು 39 ಘಟಕಗಳಲ್ಲಿ ನೀರು ಮೆದುಗೊಳಿಸುವ ಸ್ಥಾವರವನ್ನು ಅಳವಡಿಸಲಾಗಿರುತ್ತದೆ. ಉಳಿದ ಘಟಕಗಳಲ್ಲಿ ನೀರು ಮೆದುಗೊಳಿಸುವ ಸ್ಥಾವರವನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ.

13.9. ಹೊಗೆ ತಪಾಸಣೆ ಕ್ರಮಗಳು :

- ವಾಹನಗಳ ಹೊಗೆ ಹೊರಸೂಸುವಿಕೆ ಪ್ರಮಾಣವನ್ನು ನಿಯಂತ್ರಿಸಲು ಹಾಗೂ ಮೇಲ್ವಿಚಾರಣೆ ನಡೆಸಲು ಪ್ರತಿ ತಿಂಗಳು ಎಲ್ಲಾ ಘಟಕಗಳಲ್ಲಿ ವಾಹನಗಳ ಹೊಗೆ ತಪಾಸಣೆ ನಡೆಸಲು ಹೊಗೆ ತಪಾಸಣಾ ಯಂತ್ರವನ್ನು ಒದಗಿಸಲಾಗಿರುತ್ತದೆ.
- ಬೆ.ಮ.ಸಾ.ಸಂಸ್ಥೆಯ ಆಯ್ದ ಟಿ.ಟಿ.ಎಂ.ಸಿ ಮತ್ತು ಪ್ರಮುಖ ಬಸ್ ನಿಲ್ದಾಣಗಳಲ್ಲಿ ಅನಿರೀಕ್ಷಿತ ಹೊಗೆ ತಪಾಸಣೆ ಹಾಗೂ ಏರ್ ಹಾರನ್ ಅಳವಡಿಕೆಯ ಕುರಿತು ಪರಿಶೀಲನೆ ನಡೆಸಲಾಗುತ್ತಿರುತ್ತದೆ. ತಪಾಸಣೆ ಸಂದರ್ಭದಲ್ಲಿ ಹೆಚ್ಚು ಹೊಗೆ ಹೊರ ಸೂಸುವ ವಾಹನಗಳು ಕಂಡುಬಂದಲ್ಲಿ ದುರಸ್ಥಿಗೆ ಒಳಪಡಿಸಲು ಕೂಡಲೇ ಘಟಕಕ್ಕೆ ಕಳುಹಿಸಿ, ದುರಸ್ಥಿಯ ನಂತರವಷ್ಟೆ ಮಾರ್ಗಾಚರಣೆಗೆ ನೀಡಲಾಗುತ್ತದೆ.
- ಪೆಟ್ರೋಲ್ ವಾಹನಗಳ ಹೊಗೆ ಹೊರ ಸೂಸುವಿಕೆಯನ್ನು ತಪಾಸಣೆ ಮಾಡಲು ವಿಶೇಷ ತಂಡವನ್ನು ರಚಿಸಲಾಗಿರುತ್ತದೆ.
- ಪ್ರಸ್ತುತ ಸಂಸ್ಥೆಯಲ್ಲಿ 15 ಆನ್‌ಲೈನ್ ಹೊಗೆ ತಪಾಸಣಾ ಕೇಂದ್ರಗಳಿರುತ್ತದೆ.

13.10. ವಿಶ್ವ ಪರಿಸರ ದಿನ :

ಪ್ರತಿ ವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನವನ್ನು ಆಚರಿಸುತ್ತಿದ್ದು, ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ:

- ಬಸ್ ಒಳಗೆ Light Emitting Diode ಘೋಷಣೆ ಪ್ರದರ್ಶಿಸುವ ಮೂಲಕ ಸಾರ್ವಜನಿಕರಿಗೆ ಜಾಗೃತಿ ನೀಡುವುದು "ಸಾರ್ವಜನಿಕ ವಾಹನಗಳನ್ನು ಮಾತ್ರ ಬಳಸಿ ಮತ್ತು ವಾಯುಮಾಲಿನ್ಯವನ್ನು ಕಡಿಮೆ ಮಾಡಿ, ಕಾಗದ ಮತ್ತು ನೀರನ್ನು ಉಳಿಸಿ" ಇತ್ಯಾದಿ.,
- ಎಲ್ಲಾ ಬಸ್ ನಿಲ್ದಾಣ ಮತ್ತು ಟಿ.ಟಿ.ಎಂ.ಸಿಯಲ್ಲಿ "ಧೂಮಪಾನ ಮಾಡಬಾರದು" ಎಂಬ ನಾಮಫಲಕಗಳನ್ನು ಪ್ರದರ್ಶಿಸುವುದು.
- ಘಟಕಗಳ ಆವರಣದಲ್ಲಿ Light Emitting Diode ದೀಪಗಳ ಅಳವಡಿಕೆಯಿಂದ ಆಗುವ ಅನುಕೂಲಗಳ ಬಗ್ಗೆ ಸಿಬ್ಬಂದಿಗೆ ಅರಿವು ಮೂಡಿಸುವುದು.
- ಘನ ತಾಜ್ಯವನ್ನು ಪ್ರತ್ಯೇಕಿಸುವುದು ಮತ್ತು ಅಧಿಕೃತ ಮರುಬಳಕೆದಾರರ ಮೂಲಕ ವ್ಯವಸ್ಥಿತವಾದ ರೀತಿಯಲ್ಲಿ ವಿಲೇವಾರಿ ಮಾಡುವುದು.
- ಘಟಕಗಳ ಆವರಣದಲ್ಲಿ ಶುಚಿತ್ವವನ್ನು ಕಾಪಾಡಿಕೊಳ್ಳುವುದು.
- ಎಲ್ಲಾ ವಾಹನಗಳಲ್ಲಿ ಹೊಗೆ ಮಟ್ಟವನ್ನು ಪರೀಕ್ಷಿಸುವುದು.
- ಸಸಿಗಳನ್ನು ನೆಡುವುದು.
- 2019–20ನೇ ಸಾಲಿನಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಘಟಕಗಳಲ್ಲಿ ಸಸಿಗಳನ್ನು ನಾಟಿ ಮಾಡಿ ಘಟಕಗಳ ಆವರಣ ಮತ್ತು ಬಸ್ಸುಗಳ ಸ್ವಚ್ಛತೆ ಮಾಡುವ ಮೂಲಕ ಆಚರಿಸಲಾಯಿತು

13.11. ಕಾರ್ಯಾಚರಣೆಯಲ್ಲಿ ಬಿ.ಎಸ್.–IV ಗುಣ ಪ್ರಮಾಣದ ಬಸ್ಸುಗಳ ಸೇರ್ಪಡೆ::

ಭಾರತದ ನಾಲ್ಕು ಮೆಟ್ರೋ ನಗರಗಳನ್ನು ಹೊರತುಪಡಿಸಿ, ಉಳಿದ 13 ನಗರಗಳಲ್ಲಿ ಬಿ.ಎಸ್–4 ಮಾದರಿಯ ಬಸ್ಸುಗಳನ್ನು ಮಾತ್ರ ಕಡ್ಡಾಯವಾಗಿ ಖರೀದಿಸಿ ಕಾರ್ಯಾಚರಣೆ ಮಾಡಲು ಭಾರತ ಸರ್ಕಾರ ಆದೇಶಿಸಿರುತ್ತದೆ. ಅದರಂತೆ, ಬೆಂ.ಮ.ಸಾ.ಸಂಸ್ಥೆಯು 2012–13 ರಿಂದ ಬಿ.ಎಸ್–4 ಮಾದರಿಯ ಬಸ್ಸುಗಳನ್ನು ಖರೀದಿಸಲು ಪ್ರಾರಂಭಿಸಿದ್ದು, ಪ್ರಸ್ತುತ 3797 ಬಿ.ಎಸ್–4 ಬಸ್ಸುಗಳು ಸಂಸ್ಥೆಯ ವಾಹನ ಬಲದಲ್ಲಿರುತ್ತದೆ. ಬಿ.ಎಸ್–4 ಬಸ್ಸುಗಳ ಸೇರ್ಪಡೆಯಿಂದ ಬೆಂಗಳೂರು ನಗರದಲ್ಲಿ ಗಣನೀಯವಾಗಿ ಹಾನಿಕಾರಕ ಅನಿಲಗಳು ವಾತಾವರಣಕ್ಕೆ ಸೇರ್ಪಡೆಯಾಗುವುದನ್ನು ನಿಯಂತ್ರಿಸಲಾಗಿದೆ.

*****

ಪರಿಚ್ಛೇದ – 14 ಕಾನೂನು ಇಲಾಖೆ

14.1 ಕೈಗಾರಿಕಾ ವಿವಾದಗಳು:

2018–19ನೇ ಸಾಲಿನ ಅಂತ್ಯಕ್ಕೆ ಒಟ್ಟು 593 ಪ್ರಕರಣಗಳು ಇತ್ಯರ್ಥವಾಗದೇ ಬಾಕಿ ಉಳಿದಿದ್ದು, 2019–20ನೇ ಸಾಲಿನಲ್ಲಿ ಒಟ್ಟು 203 ಕೈಗಾರಿಕಾ ವಿವಾದಗಳು ವಿವಿಧ ನ್ಯಾಯಾಲಯಗಳಾದ ಕಾರ್ಮಿಕ ನ್ಯಾಯಾಲಯ ಮತ್ತು ಕೈಗಾರಿಕಾ ಟ್ರಿಬುನಲ್‌ನಲ್ಲಿ ದಾಖಲಾಗಿವೆ. ಈ ವರ್ಷದಲ್ಲಿ 137 ಪ್ರಕರಣಗಳು ಇತ್ಯರ್ಥವಾಗಿದ್ದು, ಇದರಲ್ಲಿ 94 ಪ್ರಕರಣಗಳು ಸಂಸ್ಥೆಯ ಪರವಾಗಿ 43 ಪ್ರಕರಣಗಳು ಸಂಸ್ಥೆಯ ವಿರುದ್ಧವಾಗಿ ಇತ್ಯರ್ಥಗೊಂಡಿರುತ್ತವೆ. ದಿನಾಂಕ 31.03.2020ರವರೆಗೆ ಕಾರ್ಮಿಕ ನ್ಯಾಯಾಲಯಗಳಲ್ಲಿ 659 ಪ್ರಕರಣಗಳು ಇನ್ನು ಇತ್ಯರ್ಥವಾಗದೇ ಬಾಕಿ ಉಳಿದಿರುತ್ತವೆ.

14.2 ಅಪಘಾತ ಪರಿಹಾರ ಪ್ರಕರಣಗಳು:

2019–20ನೇ ಸಾಲಿನಲ್ಲಿ ಅಪಘಾತಕ್ಕೆ ಸಂಬಂಧಪಟ್ಟಂತೆ ಪರಿಹಾರ ಕೋರಿರುವ 229 (ಎಂ.ವಿ.ಸಿ.) ಮತ್ತು 74 (ಎಂ.ಎಫ್.ಎ.) ಒಟ್ಟು 303 ಪ್ರಕರಣಗಳು ವಿವಿಧ ಅಪಘಾತ ನ್ಯಾಯ ಮಂಡಳಿಗಳು ಮತ್ತು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುತ್ತವೆ. ಇವುಗಳಲ್ಲಿ ಸಂಸ್ಥೆಯ ಪರವಾಗಿ 57 (ಎಂ.ವಿ.ಸಿ.) ಮತ್ತು 26 (ಎಂ.ಎಫ್.ಎ.) ಒಟ್ಟು 83 ಪ್ರಕರಣಗಳು ಮತ್ತು ವಿರುದ್ಧವಾಗಿ 171 (ಎಂ.ವಿ.ಸಿ.) ಮತ್ತು 17 (ಎಂ.ಎಫ್.ಎ.) ಒಟ್ಟು 188 ಪ್ರಕರಣಗಳು ಇತ್ಯರ್ಥವಾಗಿರುತ್ತದೆ, ಹಾಗೂ 11 (ಎಂ.ವಿ.ಸಿ.) ಮತ್ತು 7 (ಎಂ.ಎಫ್.ಎ.) ಒಟ್ಟು 18 ಪ್ರಕರಣಗಳು ಜನತಾ ನ್ಯಾಯಾಲಯದಲ್ಲಿ (ಲೋಕ್ ಅದಾಲತ್) ತ್ವರಿತವಾಗಿ ಇತ್ಯರ್ಥವಾಗಿರುತ್ತವೆ. ಸದರಿ ಸಾಲಿನಲ್ಲಿ ಅಪಘಾತ ಪ್ರಕರಣಗಳಲ್ಲಿ ಸಂಸ್ಥೆಯು 125 (ಎಂ.ವಿ.ಸಿ.) ಮತ್ತು 65 (ಎಂ.ಎಫ್.ಎ.) ಒಟ್ಟು 190 ಪ್ರಕರಣಗಳಲ್ಲಿ ರೂ. 4,16,97,734/- (ಎಂ.ವಿ.ಸಿ.) ಮತ್ತು 3,19,14,695/- (ಎಂ.ಎಫ್.ಎ.) ಒಟ್ಟು 7,36,12,429/- ಗಳನ್ನು ಪರಿಹಾರವಾಗಿ ನೀಡಿರುತ್ತದೆ. ದಿನಾಂಕ 31/03/2020 ರವರಗೆ ಇತ್ಯರ್ಥವಾಗದೆ ಬಾಕಿ ಉಳಿದಿರುವ ಅಪಘಾತ ಪರಿಹಾರ ಕೋರಿರುವ ಪ್ರಕರಣಗಳ ಸಂಖ್ಯೆ 295 (ಎಂ.ವಿ.ಸಿ.) ಮತ್ತು 372 (ಎಂ.ಎಫ್.ಎ.) ಒಟ್ಟು 667 ಇರುತ್ತವೆ. ದಿನಾಂಕ 30–12–2006 ರಿಂದ 05–01–2012ರವರೆಗೆ ಸಂಸ್ಥೆಯ ವಾಹನಗಳನ್ನು United India Insurance Company Ltd.ನಲ್ಲಿ ವಿಮೆ ಮಾಡಿರುವುದರಿಂದ ಆ ದಿನಾಂಕದ ನಂತರ ಸಂಭವಿಸುವ ಅಪಘಾತಗಳಿಗೆ ಸಂಬಂಧಿಸಿಂತೆ ಅಪಘಾತ ಪ್ರಕರಣಗಳನ್ನು ನ್ಯಾಯಾಲಯದಲ್ಲಿ Contest ಮಾಡುತ್ತದೆ. ಹಾಗೂ ಪರಿಹಾರ ಹಣ ನೀಡುವ ಜವಾಬ್ದಾರಿಯು ವಿಮಾ ಸಂಸ್ಥೆಯದ್ದಾಗಿರುತ್ತದೆ. ನಂತರದ ಎಲ್ಲಾ ಅಪಘಾತ ಪ್ರಕರಣಗಳಲ್ಲಿ ಪರಿಹಾರ ನೀಡುವುದು ಬೆ.ಮ.ಸಾ.ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ.

******

ಪರಿಚ್ಛೇದ – 15

ಮಾಹಿತಿ ಹಕ್ಕು

15.1 ಮಾಹಿತಿ ಹಕ್ಕು ಕಾಯ್ದೆ–2005

ಮಾಹಿತಿ ಹಕ್ಕು ಕಾಯ್ದೆ–2005ರ ಅನುಷ್ಠಾನವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 2005ರಿಂದ ಪ್ರಾರಂಭಿಸಲಾಗಿದೆ. ಸದರಿ ಕಾಯ್ದೆಗೆ ಸಂಬಂಧಪಟ್ಟಂತೆ ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ, ಅಧಿಸೂಚನೆ, ನಿರ್ದೇಶನಗಳನ್ನು ಸಂಪೂರ್ಣವಾಗಿ ಪಾಲಿಸಲಾಗುತ್ತಿದೆ. ಮಾಹಿತಿ ಹಕ್ಕು ಕಾಯ್ದೆ–2005ನ್ನು ಸಂಸ್ಥೆಯಲ್ಲಿ ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗಿದೆ.

ಮಾಹಿತಿ ಹಕ್ಕು ಕಾಯ್ದೆ–2005ರಡಿಯಲ್ಲಿ ವಿವಿಧ ಪ್ರಾಧಿಕಾರಗಳ ರಚನೆ:

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 31–03–2020ರ ಅಂತ್ಯಕ್ಕೆ 1 ಕೇಂದ್ರ ಕಛೇರಿ ಹಾಗೂ 2 ಕೇಂದ್ರೀಯ ಕಾರ್ಯಾಗಾರಗಳು, 45 ಘಟಕಗಳಿಗೆ ಸಂಬಂಧಿಸಿದಂತೆ ಒಟ್ಟು 66 ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು 66 ಮೊದಲನೇ ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಿಸಲಾಗಿದೆ. ಮಾಹಅ–2005ರ ಅನುಷ್ಠಾನ ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ, ಅಧಿಸೂಚನೆ, ನಿರ್ದೇಶನಗಳನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ. ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಮೊದಲನೇ ಮೇಲ್ಮನವಿ ಪ್ರಾಧಿಕಾರಸ್ಥರ ವಿವರಗಳ ಪಟ್ಟಿಯನ್ನು (ವಿಳಾಸ, ಈ–ಮೇಲ್ ಹಾಗೂ ದೂರವಾಣಿ/ಮೊಬೈಲ್ ಸಂಖ್ಯೆಯನ್ನೊಳಗೊಂಡಂತೆ), ನಿಗಮದ ಮಂಡಳಿ ನಿರ್ದೇಶಕರ ಪಟ್ಟಿ, ನಿಗಮದ ಕೇಂದ್ರ ಕಛೇರಿಯ ಎಲ್ಲಾ ಇಲಾಖೆ, ವಿಭಾಗಗಳು, ಕಾರ್ಯಾಗಾರ, ತರಬೇತಿ ಕೇಂದ್ರ, ಘಟಕ ಮತ್ತು ಬಸ್ ನಿಲ್ದಾಣಗಳು, ಟಿಟಿಎಂಸಿಗಳ ಕೆಲಸ ಕಾರ್ಯಗಳು, ಸಂಸ್ಥೆಯಲ್ಲಿ ಜಾರಿಯಲ್ಲಿರುವ ನಿಯಮಾವಳಿಗಳ ಪಟ್ಟಿ ಇವುಗಳನ್ನು ಹಾಗೂ ಸೆಕ್ಷನ್ 4(1)ಎ & 4(1)ಬಿ ಮಾಹಿತಿಯನ್ನು ಸಂಸ್ಥೆಯ ಜಾಲ ತಾಣ www.mybmtc.com ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪ್ರಕಟಿಸಲಾಗಿದೆ.

ಮಾಹಿತಿ ಹಕ್ಕು ಕಾಯ್ದೆ–2005ರ ಕಾರ್ಯಾನುಷ್ಠಾನ:

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಎಲ್ಲಾ ವಲಯಗಳಲ್ಲಿ ಮತ್ತು ಸಂಬಂಧಪಟ್ಟ ಇತರೆ ಕಛೇರಿಗಳಲ್ಲಿ ಮಾಹಿತಿ ಹಕ್ಕು ಕಾಯ್ದೆ–2005ನ್ನು ಅನುಷ್ಠಾನಗೊಳಿಸಲು ಪ್ರಚಾರ ಫಲಕಗಳನ್ನು ಅಳವಡಿಸಲಾಗಿದೆ. ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ವಿಷಯ ನಿರ್ವಾಹಕರಿಗೆ ಮಾಹಿತಿ ಹಕ್ಕು ಕಾಯ್ದೆಯ ಮಹತ್ವವನ್ನು ತಿಳಿಸಿ ಅದನ್ನು ಅನುಷ್ಠಾನ ಮಾಡುವ ವಿಧಾನ ಕುರಿತು ತಿಳುವಳಿಕೆ ನೀಡಲಾಗಿದೆ. ಅದರಂತೆ ಸಂಸ್ಥೆಯ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅರ್ಜಿದಾರರಿಗೆ ನಿಗದಿತ ಅವಧಿಯೊಳಗಾಗಿ ಸಮರ್ಪಕ ಮಾಹಿತಿಯನ್ನು ಒದಗಿಸಲು ಕ್ರಮಕೈಗೊಳ್ಳಲಾಗಿದೆ.

ಮಾಹಿತಿ ಹಕ್ಕು ಕಾಯ್ದೆ–2005ರ ಕಾರ್ಯವೈಖರಿ:

ಮಾಹಿತಿ ಹಕ್ಕು ಕಾಯ್ದೆ–2005ರ ಅನ್ವಯ ಮಾಹಿತಿಯನ್ನು ಕೋರುವ ಅರ್ಜಿದಾರರು ಸಂಬಂಧಪಟ್ಟ ಪ್ರಾಧಿಕಾರದ ಮೂಲಕ ಅಂಚೆಯ ಮುಖಾಂತರ ಮತ್ತು/ಅಥವಾ ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಸದರಿ ಅರ್ಜಿಗಳನ್ನು ನೋಂದಣಿ ಮಾಡಿಕೊಂಡು ಮಾಹಿತಿ ಒದಗಿಸಲು ಸಂಬಂಧಿಸಿದ ಇಲಾಖೆಗಳಿಗೆ ಅರ್ಜಿಗಳನ್ನು ಕಳುಹಿಸಲಾಗುವುದು. ಸದರಿ ಇಲಾಖೆಯಲ್ಲಿ ಮಾಹಿತಿಯು ಲಭ್ಯವಿಲ್ಲದಿದ್ದಲ್ಲಿ ಕಲಂ 5(4) ಅಥವಾ 6(3)ರ ಪ್ರಕಾರ ಇತರೆ ಇಲಾಖೆಗಳಿಗೆ ವರ್ಗಾಯಿಸಲಾಗುವುದು. ಸಂಬಂಧಪಟ್ಟ ಇಲಾಖೆಯಿಂದ ಮಾಹಿತಿಯನ್ನು ಪಡೆದ ನಂತರ ಅದನ್ನು ಅರ್ಜಿದಾರರಿಗೆ ಅಂಚೆ ಮೂಲಕ ಕಳುಹಿಸಲಾಗುವುದು. ಅರ್ಜಿದಾರರು ಸಂಸ್ಥೆಯಿಂದ ಯಾವುದೇ ದಾಖಲೆಯನ್ನು ಕೋರಿದಲ್ಲಿ ಮಾ.ಹ.ಅ. 2005ರ ಅನ್ವಯ ಅಗತ್ಯ ಶುಲ್ಕವನ್ನು ಪಡೆದು ದಾಖಲೆಗಳನ್ನು ಒದಗಿಸಲಾಗುವುದು. ಅರ್ಜಿದಾರರು ಕೋರಿರುವ ಮಾಹಿತಿಯನ್ನು ಅರ್ಜಿ ಸಲ್ಲಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ಒದಗಿಸಬೇಕಾಗಿರುತ್ತದೆ. ನಿಗದಿತ ಸಮಯದ ಕಾಲಮಿತಿಯಲ್ಲಿ ಮಾಹಿತಿಯನ್ನು ಒದಗಿಸದಿದ್ದಲ್ಲಿ ಅರ್ಜಿದಾರರು ಸಂಸ್ಥೆಯ ಮೊದಲನೇ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದಲ್ಲಿ ಸದರಿ ಪ್ರಾಧಿಕಾರವು ವಿಚಾರಣೆ ನಡೆಸಿ ಸಂಬಂಧಪಟ್ಟ ಇಲಾಖೆಯಿಂದ ಮಾಹಿತಿಯನ್ನು ಒದಗಿಸುವ ಕ್ರಮ ಕೈಗೊಳ್ಳಲಾಗುವುದು. ಸದರಿ ಪ್ರಕ್ರಿಯೆಯನ್ನು

ಮೇಲ್ಮನವಿ ಸಲ್ಲಿಸಿದ ದಿನಾಂಕದಿಂದ 45 ದಿನಗಳೊಳಗಾಗಿ ಪೂರ್ಣಗೊಳಿಸಬೇಕಾಗಿರುತ್ತದೆ. ಆದಾಗ್ಯೂ ಮಾಹಿತಿ ಒದಗಿಸದಿದ್ದಲ್ಲಿ ಕರ್ನಾಟಕ ಮಾಹಿತಿ ಆಯೋಗದಿಂದ ದಂಡ ವಿಧಿಸುವ ಸಂಭವವಿರುತ್ತದೆ.

ಮಾಹಿತಿ ಹಕ್ಕು ಅಧಿನಿಯಮ–2005ಕ್ಕೆ ಸಂಬಂಧಿಸಿದಂತೆ 2019–20ನೇ ಸಾಲಿನ ವಿವರ :

ಅರ್ಜಿಗಳ ವಿವರ:

ಕ್ರ ಸಂ	ವಿವರ	2019-20
1	ಒಟ್ಟು ಸಾರ್ವಜನಿಕ ಮಾಹಿತಿ ಕಛೇರಿಗಳು	66
2	ಹಿಂದಿನ ವರ್ಷದ ಅಂತ್ಯಕ್ಕೆ ಬಾಕಿ ಇರುವ ಅರ್ಜಿಗಳ ಸಂಖ್ಯೆ	9
3	ವರದಿಯ ವರ್ಷದಲ್ಲಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ	1431
4	ನಿಗದಿತ ಸಮಯದಲ್ಲಿ ಮಾಹಿತಿ ಒದಗಿಸಿರುವ ಅರ್ಜಿಗಳ ಸಂಖ್ಯೆ	1295
5	ನಿಗದಿತ ಸಮಯ ಮುಗಿದ ನಂತರ ಮಾಹಿತಿ ಒದಗಿಸಿರುವ ಅರ್ಜಿಗಳ ಸಂಖ್ಯೆ	128
6	ಸರ್ಕಾರಕ್ಕೆ ಅಥವಾ ಇತರೆ ಅಧಿಕಾರಿಗಳಿಗೆ ನೀಡಿರುವ ಉತ್ತರ	0
7	ರಾಜ್ಯ ಮಾಹಿತಿ ಆಯೋಗದಿಂದ ಸ್ವೀಕರಿಸಿದ ದೂರುಗಳು/ಮೇಲ್ಮನವಿ	14
8	ವರ್ಷಾಂತ್ಯಕ್ಕೆ ಬಾಕಿ ಇರುವ ಅರ್ಜಿಗಳ ಸಂಖ್ಯೆ	17
9	ಅರ್ಜಿಗಳ ಜೊತೆಯಲ್ಲಿ ಸ್ವೀಕರಿಸಿರುವ ಶುಲ್ಕದ ಮೊತ್ತ (ರೂ.ಗಳಲ್ಲಿ)	10,522
10	ಒದಗಿಸಿದ ದಾಖಲಾತಿಗಳಿಂದ ಪಡೆದ ಶುಲ್ಕದ ಮೊತ್ತ (ರೂ.ಗಳಲ್ಲಿ)	18,109

ಮೇಲ್ಮನವಿಗಳ ವಿವರ

ಕ್ರ ಸಂ	ವಿವರ	2019-20
1	ಮೊದಲನೇ ಮೇಲ್ಮನವಿ ಪ್ರಾಧಿಕಾರಿಗಳ ಸಂಖ್ಯೆ	66
2	ಹಿಂದಿನ ವರ್ಷದ ಅಂತ್ಯಕ್ಕೆ ಬಾಕಿ ಇರುವ ಮೊದಲನೇ ಮೇಲ್ಮನವಿ ಅರ್ಜಿಗಳ ಸಂಖ್ಯೆ	8
3	ವರದಿಯ ವರ್ಷದಲ್ಲಿ ಸ್ವೀಕರಿಸಿದ ಮೇಲ್ಮನವಿ ಅರ್ಜಿಗಳ ಸಂಖ್ಯೆ	120
4	ವಿಲೇವಾರಿಯಾದ ಮೇಲ್ಮನವಿ ಅರ್ಜಿಗಳ ಸಂಖ್ಯೆ	117
5	ನಿಗದಿತ ಸಮಯದಲ್ಲಿ ವಿಲೇವಾರಿಯಾದ ಮೇಲ್ಮನವಿ ಅರ್ಜಿಗಳ ಸಂಖ್ಯೆ	106
6	ನಿಗದಿತ ಸಮಯದ ನಂತರ ವಿಲೇವಾರಿಯಾದ ಮೇಲ್ಮನವಿ ಅರ್ಜಿಗಳ ಸಂಖ್ಯೆ	11
7	ವರ್ಷಾಂತ್ಯಕ್ಕೆ ಬಾಕಿ ಇರುವ ಮೇಲ್ಮನವಿ ಅರ್ಜಿಗಳ ಸಂಖ್ಯೆ	11
8	ಪ್ರಕರಣಗಳಲ್ಲಿ ವಿಧಿಸಿರುವ ದಂಡದ ಮೊತ್ತ (ರೂ.ಗಳಲ್ಲಿ)	0



ದಿನಾಂಕ : 02-10-2019 ರಂದು
ಬೈಯ್ಯಪ್ಪನಹಳ್ಳಿಯಿಂದ ಸಿಲ್ಕ್ ಬೋರ್ಡ್‌ವರಗೆ
22 ಕಿಲೋಮೀಟರ್ ಬಸ್ ಆದ್ಯತೆ ಪಥ
(Bus Priority Lane (BPL)
ಪ್ರಾರಂಭಿಸಲಾಗಿದೆ.





ಬೈಯ್ಯಪ್ಪನಹಳ್ಳಿಯಿಂದ ಸಿಲ್ಕ್ ಬೋರ್ಡ್‌ವರಗೆ
ಬಸ್ ಆದ್ಯತಾ ಪಥದ ಮಾರ್ಗ



ದಿನಾಂಕ: 16-12-2019 ರಂದು
ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ
ರೈಲ್ವೆ ನಿಲ್ದಾಣದಿಂದ ನಗರದ ವಿವಿಧ ಭಾಗಗಳಿಗೆ
ಬಸ್ಸುಗಳ ಆಚರಣೆ.

ದಿನಾಂಕ : 02-01-2020 ರಂದು
ಘಾಟಿ ಸುಬ್ರಮಣ್ಯಕ್ಕೆ
ಬಸ್ ಆಚರಣೆಯನ್ನು ಪ್ರಾರಂಭಿಸಲಾಗಿದೆ.





ಸಂಸದರಾದ ಶ್ರೀ ತೇಜಸ್ವಿ ಸೂರ್ಯ ಹಾಗೂ
ಕಂದಾಯ ಸಚಿವರಾದ
ಶ್ರೀ ಆರ್. ಅಶೋಕರವರು ಬೆ.ಮ.ಸಾ.ಸಂಸ್ಥೆಯ
ಕೇಂದ್ರ ಕಛೇರಿಗೆ ಭೇಟಿ ನೀಡಿದ ಸಂದರ್ಭ



ದಿನಾಂಕ: 15-06-2019 ರಂದು
ಹೊಸಕೋಟೆ ನೂತನ
ಬಸ್ ಟರ್ಮಿನಲ್ ಉದ್ಘಾಟನೆ.

ದಿನಾಂಕ: 15-06-2019 ರಂದು
ಹೊಸಕೋಟೆ ನೂತನ
ಬಸ್ ಟರ್ಮಿನಲ್ ಉದ್ಘಾಟನೆ.





ದಿನಾಂಕ: 06-06-2019 ರಂದು
Staff /Mobile police pattrol ಗಾಗಿ
25 ಪಿಂಕ್ ಸಾರಥಿ ವಾಹನಗಳ ಮತ್ತು
ಸ್ಮಾರ್ಟ್ ಕಾರ್ಡ್-ವಿದ್ಯಾರ್ಥಿ ಪಾಸ್ ವಿತರಣೆ
ಪ್ರಾರಂಭ



ದಿನಾಂಕ: 06-06-2019 ರಂದು
Staff /Mobile police pattrol ಗಾಗಿ
25 ಪಿಂಕ್ ಸಾರಥಿ ವಾಹನಗಳ ಮತ್ತು
ಸ್ಮಾರ್ಟ್ ಕಾರ್ಡ್-ವಿದ್ಯಾರ್ಥಿ ಪಾಸ್ ವಿತರಣೆ
ಪ್ರಾರಂಭ



ಬಾಹ್ಯ ಅಭ್ಯರ್ಥಿಗಳಿಗೆ
ಚಾಲನಾ ಲೈಸೆನ್ಸ್ ನೀಡಿಕೆ



ಬೆ.ಮ.ಸಾ.ಸಂ. ಪತ್ತಿನ ಸಹಕಾರ ಸಂಘದ
ನೂತನ ಕಟ್ಟಡದ ಉದ್ಘಾಟನೆ

ಘಟಕಗಳ ಬೆಳವಣಿಗೆ (ಮಾರ್ಚ್ 31ರಲ್ಲಿದ್ದಂತೆ)



ಅನುಸೂಚಿಗಳು (ಮಾರ್ಚ್ 31ರಲ್ಲಿದ್ದಂತೆ) ಮತ್ತು ಕಾರ್ಯಚರಿಸಿದ ಸರಾಸರಿ ಅನುಸೂಚಿಗಳು



ವಾಹನ ಬಲ (ಮಾರ್ಚ್ 31ರಲ್ಲಿದ್ದಂತೆ)



